ಕನ್ನಡ ಛಂದಸ್ಸಿನ ಚರಿತ್ರೆ

ಇನ್ನು ಕನ್ನಡ ಛಂದಸ್ಸನ್ನು ಚರಿತ್ರೆಯ ದೃಷ್ಟಿಯಿಂದ ವಿಮರ್ಶಿಸಿ, ಸಂಸ್ಕೃತದಿಂದ ತೆಗೆದುಕೊಂಡ ಛಂದಸ್ಸು, ಕನ್ನಡದಲ್ಲಿಯೇ ಹುಟ್ಟಿ ಬೆಳೆದು ದ್ರಾವಿಡ ಭಾಷೆಗಳಿಗೆ ಸಹಜವಾದ ಛಂದಸ್ಸು ಎಂದು ಎರಡು ಭಾಗವಾಗಿ ಒಡೆಯಬಹುದು.

೧. ಸಂಸ್ಕೃತ ಛಂದಸ್ಸು

ಕನ್ನಡ ಕವಿಗಳೆಲ್ಲಾ ಆದಿಯಲ್ಲಿ ಸಂಸ್ಕೃತದಲ್ಲಿ ಪಾಂಡಿತ್ಯವುಳ್ಳವರಾಗಿಯೂ, ಸಂಸ್ಕೃತದಲ್ಲಿರುವ ರಾಮಾಯಣ, ಮಹಾಭಾರತ, ಭಾಗವತ, ಪುರಾಣಗಳು, ಮಹಾಕಾವ್ಯಗಳು, ನಾಟಕಗಳು ಇವುಗಳ ಪ್ರಭಾವಕ್ಕೆ ಒಳಪಟ್ಟು ತಮ್ಮ ಚಂಪೂಕಾವ್ಯಗಳನ್ನು ರಚಿಸಿದವರಾಗಿಯೂ ಇರುವುದರಿಂದ, ಸಂಸ್ಕೃತ ಶೈಲಿ ಹೇಗೋ ಹಾಗೆ ಸಂಸ್ಕೃತ ಛಂದಸ್ಸನ್ನೂ ತಮ್ಮ ಕಾವ್ಯಗಳಲ್ಲಿ ಬಹುಮುಖ್ಯವಾಗಿ ಉಪಯೋಗಿಸಿರುತ್ತಾರೆ. ಕನ್ನಡಕ್ಕೆ ಆದಿಕವಿಯೆನಿಸಿದ ಪಂಪನ ಆದಿಪುರಾಣ, ವಿಕ್ರಮಾರ್ಜುನವಿಜಯ ಈ ಎರಡು ಗ್ರಂಥಗಳಲ್ಲಿಯೂ ಸಂಸ್ಕೃತ ಛಂದಸ್ಸಿಗೆ ಪ್ರಾಧಾನ್ಯವೇ ಹೊರತು ಕನ್ನಡ ಛಂದಸ್ಸಿಗಲ್ಲ. ಶಾಸನಗಳಲ್ಲಿಯೂ ಹೀಗೆಯೇ. ಈಚೆಯ ಚಂಪೂಕರ್ತರೆಲ್ಲರೂ ಇದೇ ಪದ್ಧತಿಯನ್ನನುಸರಿಸುತ್ತಾರೆ.

ಮುಖ್ಯವಾಗಿ, ಹೀಗೆ ತೆಗೆದುಕೊಂಡ ಛಂದಸ್ಸುಗಳೆಂದರೆ–ಶಾರ್ದೂಲವಿಕ್ರೀಡಿತ. ಮತ್ತೇಭವಿಕ್ರೀಡಿತ, ಉತ್ಪಲಮಾಲೆ, ಚಂಪಕಮಾಲೆ, ಸ್ರಗ್ಧರೆ, ಮಹಾಸ್ರಗ್ಧರೆ; ಮತ್ತು ಕಂದ.

ಪಿಂಗಳ ಛಂದಸ್ಸೇ ಈ ವೃತ್ತಗಳ ಲಕ್ಷಣಕ್ಕೆ ಆಧಾರ. ಭರತನ ನಾಟ್ಯಶಾಸ್ತ್ರ ಕಾಳಿದಾಸನ (ಆತನದೇ ಆದರೆ) ಶ್ರುತಬೋಧ ಮುಂತಾದ ಗ್ರಂಥಗಳನ್ನೂ ನೋಡಬಹುದು.

(i)ವೈದಿಕ ಛಂದಸ್ಸು

ಸಂಸ್ಕೃತದಲ್ಲಿ ವೈದಿಕ ಛಂದಸ್ಸೆಂದೂ ಲೌಕಿಕ ಛಂದಸ್ಸೆಂದೂ ಎರಡು ವಿಧ. ವೈದಿಕ ಛಂದಸ್ಸು ವೇದಗಳಲ್ಲಿ ಕಾಣುವುದು. ಲೌಕಿಕ ಛಂದಸ್ಸು ಇತಿಹಾಸ ಪುರಾಣ ಕಾವ್ಯ ನಾಟಕಗಳಲ್ಲಿರುವುದು.

ವೈದಿಕ ಛಂದಸ್ಸುಗಳನ್ನು ಕನ್ನಡ ಕವಿಗಳು ಉಪಯೋಗಿಸಿಲ್ಲವಾದರೂ, ಲೌಕಿಕ ಛಂದಸ್ಸುಗಳಿಗೆ ಅವು ಮೂಲವಾಗಿರುವುದರಿಂದಲೂ, ಅವುಗಳಲ್ಲಿ ಗಣನಾರ್ಹವಾದ ತೇಜಸ್ಸೂ ಗಾಂಭೀರ್ಯವೂ ಸೌಂದರ್ಯವೂ ಕಾಣಬರುವುದರಿಂದಲೂ, ಅವುಗಳಲ್ಲಿ ಮುಖ್ಯವಾದ ವೃತ್ತಗಳನ್ನು ಕನ್ನಡ ಕವಿಗಳು ಮುಂದಾದರೂ ಗಮನಿಸಬೇಕು.

ವೈದಿಕ ಛಂದಸ್ಸಿನ ಮೂಲದ ಓಟವನ್ನು ಈ ಪಾದಗಳಲ್ಲಿ ಕಾಣಬಹುದು:

∪ –. ∪ – ∪ –. ∪ –
ವಿ ವೋ ಮ ದೇ। ವಿ ವ ಕ್ಷ ಸೇ।
∪ –. ∪ – ∪ –. ∪ –
ಮ ರು ದ್ಭಿ ರ। ಗ್ನ ಆ ಗ ಹಿ।
∪ –. ∪ – ∪ –. ∪ –
ಮ ಹೇ ರ ಣಾ। ಯ ಚ ಕ್ಷ ಸೇ।

ಈ ಓಟದ ಬಗೆಬಗೆಯ ಮಾರ್ಪಾಟುಗಳಿಂದಾದ ವೈದಿಕ ಛಂದಸ್ಸಿನಲ್ಲಿ ಅತಿಪ್ರಸಿದ್ಧವದ ವೃತ್ತಗಳು ನಾಲ್ಕು:
೧. ಗಾಯತ್ರಿ: ೮ ಅಕ್ಷರವುಳ್ಳ ೩ ಪಾದಗಳು: ಪ್ರತಿಯೊಂದು ಪಾದವನ್ನು ೪ ಅಕ್ಷರದ ೨ ಗಣಗಳಾಗಿ ಒಡೆಯಬಹುದು.

– ∪. – – ∪ –. ∪ –
ಅ ಗ್ನಿ ಮೀ ಳೇ। ಪು ರೋ ಹಿ ತಂ।
– –. ∪ – ∪ –. ∪ –
ಯ ಜ್ಞ ಸ್ಯ ದೇ। ವ ಮೃ ತ್ವಿ ಜಂ।
– –. – – ∪ –. ∪ –
ಹೋ ತಾ ರಂ ರ । ತ್ನ ಧಾ ತ ಮಂ ।

ಕೊನೆಗಣ ∪–.∪– ಈ ಲಕ್ಷಣವುಳ್ಳದನ್ನು ಗಮನಿಸಿ; ಇದನ್ನು ದ್ವಿಲಗು ಎಂದು ಕರೆಯಬಹುದು. ಹೀಗೆಯೇ;
– ∪. ∪ – ∪ –. ∪ –

ತ ತ್ಸ ವಿ ತು ರ್। ವ ರೇ ಣಿ ಯಂ । (ಣ್ಯಂ)
– –. – – ᴗ –. ᴗ –
ಭ ರ್ಗೋ ದೇ ವ । ಸ್ಯ ಧೀ ಮ ಹಿ ।
ᴗ –. – – ᴗ –. ᴗ –
ಧಿ ಯೋ ನಃ। ಪ್ರ ಚೋ ದ ಯಾ ತ್ ।

೨ **ಅನುಷ್ಟುಭ್:** ನಾಲ್ಕು ಪಾದದ ಗಾಯತ್ರಿ: ೮ ಅಕ್ಷರವುಳ್ಳ ೪ ಪಾದಗಳು.

– – ᴗ – ᴗ – ᴗ –
ಆ ತೂ ನ ಇಂ । ದ್ರ ಕೌ ಶಿ ಕ ।
– ᴗ – – ᴗ – ᴗ –
ಮಂದ ಸಾ ನಃ। ಸು ತಂ ಪಿ ಬ ।
– ᴗ – – ᴗ – ᴗ –
ನ ವ್ಯ ಮಾ ಯುಃ।ಪ್ರ ಸೂ ತಿ ರ ।
ᴗ – ᴗ – ᴗ – ᴗ –
ಕೃ ಧೀ ಸ ಹ । ಸ್ರ ಸಾ ಮೃ ಪಿಂ॥

ಶ್ಲೋಕ: ಕಡೆ ಕಡೆಗೆ ಇದು ಎರಡೇ ಪಾದಗಳಾಗಿ, ಮೊದಲನೆಯ ಮತ್ತು ಮೂರನೆಯ ಪಾದಗಳ ಕಡೆಯ ಗಣದ ದ್ವಿಲಗು (ᴗ–.ᴗ–ᴗ) ಲಕ್ಷಣ ಮಾರ್ಪಟ್ಟು. ಲೌಕಿಕಕಾವ್ಯದ ಶ್ಲೋಕವಾಯಿತು. ಉದಾ:

ᴗ – – – ᴗ –. ᴗ –
ಹಿರಣ್ಮಯೇ ನ ಪಾ ತ್ರೇ ಣ । ಸತ್ಯಸ್ಯಾಪಿ। ಹಿ ತಂ ಮು ಖಂ।
ᴗ –. ᴗ – ᴗ –. ᴗ –
ತತ್ ತ್ವಂ ಪೂಷ । ನ್ನ ಪಾ ವೃ ಣು। ಸತ್ಯಧರ್ಮಾ। ಯ ದೃ ಷ್ಟ ಯೇ ॥
ᴗ – – – ᴗ –. ᴗ –
ಸತ್ಯಣ ಮಾತಾ । ಪಿ ತಾ ಜ್ಞಾ ನಂ। ಧರ್ಮೋ ಭ್ರಾತಾ। ದ ಯಾ ಸ ಖಾ ।
ᴗ – ᴗ –
ಶಾಂತಿಃ ಪತ್ನಿಃ ॥ ಕ್ಷಮಾ ಪುತ್ರಃ। ಷಡೇತೇ ಮ । ಮ ಬಾಂ ಧ ವಾಃ ॥
ᴗ – – ᴗ ᴗ –. ᴗ –
ಶ್ಲೋಕಾರ್ಧೇನ। ಪ್ರ ವ ಕ್ಷ್ಯಾ ಮಿ । ಯದುಕ್ತಂ ಗ್ರಂ। ಥ ಕೋ ಟಿ ಭಿಃ।
– – – ᴗ ᴗ – ᴗ –
ಪರೋಪಕಾ। ರಃ ಪು ಣ್ಯಾ ಯ। ಪಾಪಯ ಪ। ರ ಪೀ ಡ ನಂ॥

ಈ ಅನುಷ್ಟುಪ್ಪು ಅಥವಾ ಶ್ಲೋಕ ಸಂಸ್ಕೃತ ಕಾವ್ಯಗಳಲ್ಲೆಲ್ಲಾ ಬಹು ಪ್ರಚಾರವುಳ್ಳದ್ದು. ಇತಿಹಾಸ ಪುರಾಣ ಕಾವ್ಯಗಳಲ್ಲಿ, ಶಾಸ್ತ್ರಗಳಲ್ಲಿ, ನಿಘಂಟುಗಳಲ್ಲಿ ಎಲ್ಲೆಲ್ಲೂ ಅದರದೇ ಕೆಲಸ, ಓಡಾಟ.

ಕನ್ನಡ ಕವಿಗಳು ಮೊದಲು ಈ ಶ್ಲೋಕವನ್ನು ಹೆಚ್ಚಾಗಿ ಬಳಸಿಕೊಂಡರೋ ಇಲ್ಲವೋ ಹೇಳುವುದು ಕಷ್ಟ; ಸಾಕಾದಷ್ಟು ನಿದರ್ಶನಗಳಿಲ್ಲ. ಆದರೆ ಕವಿರಾಜಮಾರ್ಗದಲ್ಲಿ ಇದರ ಸುಳಿವು ಕಾಣುತ್ತದೆ.

ಯಾವುದೋ ರಾಮಾಯಣದಿಂದ ಇವು ತೆಗೆದ ಹಾಗಿವೆ. (೨–೧೧೦–೧೩೪):

ಪೆಱನಾವನ್ ಧರಾಚಕ್ರಕ್ಕೆಱಿಯಂ ಕೆಳೆಯಪ್ಪವಂ
ನೆಱಿಯಾರೇಣೆಯೆಂಬನ್ನಂ ಕುಜಿತಬ್ದಿಗೆ ಬನ್ನಮಂ (೧೨೫)
ತಾರಾ ಜಾನಕಿಯಂ ಪೋಗಿ ತಾರಾ ತರಳನೇತ್ರೆಯಂ
ತಾರಾಧಿಪತಿತೇಜಸ್ವಿ ತಾರಾದಿವಿಜಯೋದಯಾ (೧೨೮)

ಸೂತ್ರಗಳಲ್ಲಿ ಕವಿಯೇ ಕೆಲವು ಕಡೆ ಶ್ಲೋಕವನ್ನು ಪ್ರಯೋಗಿಸಿರುವವನು:

ಇವು ದುಷ್ಕರ ಕಾವ್ಯಂಗಳ್ ಸವಿಶೇಷ ವಿವರ್ತಿಗಳ್
ಸುವಿಚಾರತಮೀ ತೋರ್ಪೆವಿವಱಾ ಲಕ್ಷ್ಯಭೇದಮಂ (೧೧೧)
ಯಮಕಂ ಪದ ಪಾದಾರ್ಧಂ ಸಮಶ್ಲೋಕಮಗೋಚರಂ
ಪ್ರಮಿತಾದ್ಯಂತದೂಷ್ಯೋಪಕ್ರಮಾನೇಕಪ್ರಕಲ್ಪಿತಂ (೧೨೭)
(ಪ್ರಾಸಗಳನ್ನು ಲಕ್ಷಿಸಿ)
ಒಂದು ವೇಳೆ ಅವುಷ್ಟುಪ್ಪನ್ನು ಪ್ರಯೋಗಿಸಿ ನೋಡಿ ಕನ್ನಡ ಭಾಷೆಗೆ ಹೊಂದುವುದಿಲ್ಲವೆಂದು ಬಿಟ್ಟಿರಬಹುದು.

೨. ತ್ರಿಷ್ಟುಭ್: ೧೧ ಅಕ್ಷರದ ೪ ಪಾದಗಳು: ಒಂದು ಪಾದಕ್ಕೆ ೩ ಗಣ, ಕೊನೆಯ ಗಣ: ᴗ – –

ಉದಾ: ᴗ – –
ಕಸ್ಯ ನೂನಂ। ಕತಮಸ್ಯಾ । ಮೃ ತಾ ನಾಂ ।
ᴗ – –
ಮನಾಮಹೇ। ಚಾರು ದೇವ। ಸ್ಯ ನಾ ಮ।
ᴗ – –
ಕೋ ನೋ ಮಹ್ಯಾ । ಆದಿತೇ। ಪು ನ ರ್ದಾ ತ್ ।
ᴗ – –
ಪಿತರಂ ಚ । ದೃಶೇಯಂ ಮಾ। ತ ರಂ ಚ॥
ᴗ – –
ನಾಯಮಾತ್ಮಾ। ಪ್ರವಚನೇ । ನ ಲ ಭ್ಯಃ ।
ᴗ – –
ನ ಮೇಧಯಾ।ನ ಬಹುನಾ। ಶ್ರು ತೇ ನ ।
ᴗ – –
ಯಮೇಚ್ಚೃಷ। ವೃಣುತೇ ತೇ । ನ ಲ ಭ್ಯಃ ।
ᴗ – –
ತಸ್ಯೃಷ ಆ । ತ್ಮಾ ವೃಣುತೇ । ತ ನೂಂ ಸ್ವಾಂ॥
ᴗ – –
ಏಕೋ ದೇವ। ಸ್ವರ್ವಭೂತೇ । ಷಿ ಗೀ ಢಃ।
ᴗ – –
ಸರ್ವವ್ಯಾಪೀ। ಸರ್ವಭೂತಾಂ । ತ ರಾ ತ್ಮಾ ।
ᴗ – –
ಕರ್ಮಾಧ್ಯಕ್ಷ। ಸರ್ವಭೂತಾ । ಧಿ ವಾ ಸಃ।
ᴗ – –
ಸಾಕ್ಷೀ ಚೇತಾ। ಕೇವಲೋ ನಿ। ರ್ಗು ಣ ಶ್ಚ ॥

೩. ಜಗತೀ: ೧೨ ಅಕ್ಷರದ ೪ ಪಾದಗಳು: ಒಂದು ಪಾದಕ್ಕೆ ೩ ಗಣ. ಕೊನೆಯ ಗಣ: ᴗ –. ᴗ –

∪ –. ∪ –

ತುವ (ತ್ವ) ಮಗ್ನೇ। ಪ್ರಥಮೋ ಅಂ ಗಿ ರಾ ಋ ಷಿಃ।

∪ –. ∪ –

ದೇವೋ ದೇವಾ। ನಾಮಭವಃ । ಶಿ ವಃ ಸ ಖಾ ।

∪ –. ∪ –

ತುವ ವ್ರತೇ। ಕವಯೋ ವಿ । ದ್ಮ ನಾ ಪ ಸೋ।

∪ –. ∪ –

ಅಜಾಯಂತ । ಮರುತೋ ಭ್ರಾ । ಜ ದೃ ಷ್ಟ ಯಃ॥

∪ –. ∪ –

ಅಶಬ್ದಮ। ಸ್ಪರ್ಶಮರೂ। ಪ ಮ ವ್ಯ ಯಂ।
ತಥಾರಸಂ। ನಿತ್ಯಮಗಂ। ಧವಚ್ಚ ಯತ್ ।
ಅನಾದ್ಯನಂ । ತಂ ಮಹತಃ । ಪರಂ ಧ್ರುವಂ ।
ನಿಚಾಯ್ಯ ತ। ನ್ಮೃತ್ಯುಮುಖಾತ್ । ಪ್ರಮುಚ್ಯತೇ ॥

ಜಗತಿಯ ಪಾದವೂ ತ್ರಿಷ್ಟುಭ್ ಪಾದವೂ ಬೆರಸಿ ಬರುವುದುಂಟು:

∪ – ∪ –

ಕ್ಷುರಸ್ಯ ಧಾ । ರಾ ನಿಶಿತಾ । ದು ರ ತ್ಯ ಯಾ।

∪ – –

ದುರ್ಗಂ ಪಥ । ಸ್ತತ್ಕವಯೋ । ವ ದಂ ತಿ ॥

೪. ಪ್ರಗಾಥ: ೮ ಮತ್ತು ೧೨ ಅಕ್ಷರಗಳ ಪಾದಗಳನ್ನು ಬೆರಸಿ ನಾಲ್ಕು ಪಾದದ ವೃತ್ತವನ್ನು ಏಳರವರೆಗೆ ವಿಸ್ತರಿಸಿ ಪ್ರಗಾಥಗಳನ್ನು ವೈದಿಕ ಕವಿಗಳು ರಚಿಸಿರುತ್ತಾರೆ. ಇವು ಬಹು ಗಂಭೀರವಾಗಿಯೂ ಉತ್ಸಾಹಪೂರಿತವಾಗಿಯೂ ಇರುತ್ತದೆ.

ಉದಾ:

∪ – ∪ –

ಯುವಾಂ ಸ್ತೋಮೇ । ಭಿರ್ ದೇವಯಂ । ತ ಆ ಶ್ವಿ ನಾ। ೧೨

∪ – ∪ –

ಆಶ್ರಾವಯಂ । ತ ಇವ ಶ್ಲೋ । ಕ ಮಾ ಯ ವಃ । ೧೨

∪ – ∪ –

ಯವಾಮ ಹವ್ಯಾ । ಭಿ ಆ ಯ ವಃ । ೮

∪ – ∪ –

ಯಾವೋರ್ ವಿಶ್ವಾ । ಅ ಧಿ ಶ್ರಿ ಯಃ। ೮

∪ – ∪ –

ಪೃಕ್ಷಶ್ಚ ವಿ । ಶ್ವ ವೇ ದ ಸಾ । ೮

∪ – ∪ –

ಪ್ರುಷಾಯಂತೇ । ವಾಂಪವಯೋ । ಹಿ ರ ಣ್ಯ ಯೇ। ೧೨

∪ – ∪ –

ರಥೇ ದಸ್ರಾ। ಹಿ ರ ಣ್ಯ ಯೇ ॥ ೮

ಇಲ್ಲಿಯ ಪಲ್ಲವಿ ಪದಗಳನ್ನು ಗಮನಿಸಿ.

ಈ ವೈದಿಕ ವೃತ್ತಗಳು ಸಂಸ್ಕೃತದಲ್ಲಿಯೇ ಮುಂದೆ ಬಿಟ್ಟುಹೋದುವು. ಕನ್ನಡ ಕವಿಗಳಿಗೂ ಕಣ್ಮರೆಯಾದುವು. ಶ್ಲೋಕವೊಂದು ಸ್ವಲ್ಪ ಆಸೆದೋರಿಸಿ ದಕ್ಕದೆ ಹೋದಹಾಗೆ ಕಾಣುತ್ತದೆ. ಮುಂದೆ ಬರುವ ಕವಿಗಳಾದರೂ ಜೀವಕಳೆಯಿಂದ ನಲಿಯುವ ಈ ವೈದಿಕ ಛಂದಸ್ಸಿನ ಸೌಂದರ್ಯದ ಕಡೆಗೆ ಕಣ್ಣು ತಿರುಗಿಸಬಹುದುದಲ್ಲವೇ?

(ii) ಲೌಕಿಕ ಛಂದಸ್ಸು, ವೃತ್ತಗಳು

ನಾಲ್ಕಕ್ಷರದ ಗಣ ಹೋಗಿ ಯ ಗಣ ಮೊದಲಾದ ೩ ಅಕ್ಷರದ ಗಣಗಳಿಂದ ಲೌಕಿಕ ವೃತ್ತಗಳನ್ನು ಅಳೆಯುವುದು ಸಂಪ್ರದಾಯವಾಗಿದೆ. ಈ ವೃತ್ತಗಳು ಛಂದೋಗ್ರಂಥಗಳಲ್ಲಿ ೧೫೦ರ ಮೇಲೆ ಹೇಳಿದ್ದರೂ, ಕನ್ನಡ ಕವಿಗಳು (ತೆಲಗು ಕವಿಗಳಂತೆ) ಆರು ವೃತ್ತಗಳನ್ನು ಮಾತ್ರ ವಿಶೇಷವಾಗಿ ಬಳಸುವರು. ೭೦೦-೯೫೦ ರ ಕಾಲದ ಶಾಸನಗಳಲ್ಲಿಯೂ ಇವು ಸಿಕ್ಕುತ್ತವೆ. ಛಂದೋಂಬುಧಿಯ ಈ ಪದ್ಯದಲ್ಲಿ ಈ ಆರನ್ನು ಹೇಳಿದೆ:

ಗುರುವೊಂದಾದಿಯೊಳುತ್ಪಲಂ, ಗುರು ಮೊದಲ್ ಮೂಱಾಗೆ ಶಾರ್ದೂಲಮಾ
ಗುರು ನಾಲ್ಕಾಗಿರಲಂತು ಸ್ರಗ್ಧರೆ, ಲಘುದ್ವಂದ್ವಂ ಗುರುದ್ವಂದ್ವಮಾ
ಗಿರೆ ಮತ್ತೇಭ, ಲಘುದ್ವಯ ತ್ರಿಗುರುವಿಂದಕ್ಕುಂ ಮಹಾಸ್ರಗ್ಧರಂ,
ಹರಿಣಾಕ್ಷೀ, ಲಘು ನಾಲ್ಕು ಚಂಪಕಮಿವಾಱುಂ ಖ್ಯಾತಕಾರ್ಣಾಟಕಂ

ಉತ್ಪಲ, ಶಾರ್ದೂಲ, ಸ್ರಗ್ಧರೆ- ಇವುಗಳ ಮೊದಲಿನ ಗುರುವಿಗೆ ಎರಡು ಲಘುಗಳನ್ನು ಇಟ್ಟು ಚಂಪಕ, ಮತ್ತೇಭ, ಮಹಾಸ್ರಗ್ಧರೆಗಳನ್ನು ಕನ್ನಡ ಕವಿಗಳು ಮಾಡಿಕೊಂಡಂತೆ ಕಾಣುವುದು.

ಇವುಗಳ ಜೊತೆಗೆ ಅಲ್ಲಲ್ಲಿ ಅಪೂರ್ವವಾಗಿ ಕೆಲವು ವೃತ್ತಗಳು ಕಾಣಿಸುವುವು.. ಇವೂ- ಮಾಲಿನಿ, ಪೃಥ್ವಿ, ಶಿಖರಿಣಿ, ಮಂದಾಕ್ರಾಂತ, ಹರಿಣಿ, ಮಲ್ಲಿಕಾಮಾಲೆ, ತರಳ- ಮುಂತಾದವು ತ್ರಿಷ್ಟುಭ್, ಜಗತೀ ಜಾತಿಗೆ ಸೇರಿ ಅಕ್ಷರಬದ್ದವಾಗಿ ಏರ್ಪಟ್ಟು (ಗುರುಸ್ಥಾನ ಲಘುಸ್ಥಾನಗಳು ಇವೇ ಎಂದು ಕಟ್ಟುನಿಟ್ಟುಳ್ಳ) ಉಪೇಂದ್ರವಜ್ರ, ಇಂದ್ರವಜ್ರ, ವಂಶಸ್ಥ, ವಸಂತತಿಲಕ ಮುಂತಾದವು. ಸಂಸ್ಕೃತದಲ್ಲಿ ಹೆಚ್ಚು ಪ್ರಯೋಗವುಳ್ಳುವು. ಕನ್ನಡದಲ್ಲಿ ಅಪೂರ್ವ, ಉದಾ:

ಅವರ್ಣವಾದಕ್ಕೆಡೆಯಾಗದೊಳ್ಪಿಂ
ದವರ್ಣಿಕಾಮರ್ ಗುಣವೃದ್ಧಿಧಾಮರ್
ದಿವಾಕರರ್ ವ್ಯಾಕೃತಿ ನಾಮಿಗಳ್ವೋಲ್
ದಿವಕ್ಕೆ ಪನ್ನಿರ್ವರೆ ಮುಖ್ಯರಾದರ್
(ಶ. ಮ. ದರ್ಪಣ. ಸೂತ್ರ ೯ರ ಕೆಳಗೆ)

ಎನಿತ್ತೆನಿತ್ತಂಬುಜಪತ್ರನೇತ್ರೆಯಾ .
(ಸೂ. ೧೧೮ರ ಕೆಳಗೆ)

ವೃತ್ತಗಳನ್ನು ಕನ್ನಡಕ್ಕೆ ತೆಗೆದುಕೊಳ್ಳುವುದರಲ್ಲಿ ಪ್ರಾಸ ಸೇರಿತು: ಯತಿ ಮೀರಿತು: ಪಾದಗಳ ಕೊನೆಯಲ್ಲಿ ನಿಲವು ಸಾಧಾರಣವಾಗಿ ಇಲ್ಲ: ಅಲ್ಲಿ ದೀರ್ಘವಾಗಬಹುದಾದ ಹ್ರಸ್ವ ಬರಲು ಎಡೆಯಿಲ್ಲ ಮುಂದಕ್ಕೋಡುವ್ಯದರಿಂದ. ಎಲ್ಲಕ್ಕಿಂತ ಹೆಚ್ಚಾಗಿ ವೃತ್ತದ ಧಾಟಿ ಘೋಷಗಳನ್ನು ಪಾಲಿಸುವುದಕ್ಕಾಗಿ ಹೆಚ್ಚು ಹೆಚ್ಚಾಗಿ ಸಂಸ್ಕೃತದ ದೀರ್ಘಸಮಾಸಗಳನ್ನು ಹೆಣೆಯುವಂತಾಯಿತು: ಕನ್ನಡ ನುಡಿಗಳು ತಮ್ಮ ಸ್ವರಗಳೊಡನೆ ಎದ್ದು ನಿಂತು ಕಾಣದಂತಾಯಿತು. ಉದಾಹರಣೆಗಾಗಿ ಆದಿಕವಿ ಪಂಪನ ಆದಿ ಪುರಾಣದಿಂದಲೂ ನಾಗವರ್ಮನ ಛಂದೋಬುಧಿಯಿಂದಲೂ ಮೊದಲನೆಯ ಮಂಗಳಶ್ಲೋಕವನ್ನು ತೆಗೆದುಕೊಳ್ಳೋಣ:

ಶ್ರೀದೇವೇಂದ್ರಮುನೀಂದ್ರವಂದಿತಗುಣವ್ರಾತಂ ಜಗತ್ಸ್ವಾಮಿ ಸಂ
ದಾದಿಬ್ರಹ್ಮನಗಾಧಬೋಧನಿಳಯಂ ದುರ್ವಾರಸಂಸಾರವಿ
ಚ್ಛೇದೋಪಾಯನಿಯುಕ್ತಸೂಕ್ತಿವೃಷಮಾರ್ಗಾಗ್ರೇಸರಂ ಪಾಪಹೃ
ತ್ಪಾದಾಬ್ಜಂ ದಯೆಗೆಯ್ವನಕ್ಕೆವಗೆ ಮುಕ್ತಿ ಶ್ರೀಸುಖಾವಾಪ್ತಿಯಂ

ಶ್ರೀವಧುವಂ ಪಯೋಧಿಮಥನೋದ್ಭವವಸ್ತು ಸಮೂಹದೊಳ್ ಮಹಾ
ದೇವಸಮೇತಮಿರ್ದಸುರರುಂ ಸುರರುಂ ಕುಡೆ ತನ್ನ ಮೆಚ್ಚುಗೊಂ
ಡಾವನಶೇಷಭೂಭುವನಮಂಡಲವಲ್ಲಭನಾದ ದೇವನೀ
ಗಾವಗಮೆಮ್ಮ ಬೇಟ್ಪ ವರದುನ್ನತಿಯಂ ಸುಕವೀಂದ್ರವಲ್ಲಭಂ

ಕನ್ನಡದ ಪ್ರಾಶಸ್ತ್ಯವನ್ನು ಉಳಿಸಿಕೊಳ್ಳಲು ಪ್ರಯತ್ನಪಟ್ಟ ಅಂಡಯ್ಯನ ಮಂಗಳಶ್ಲೋಕವನ್ನು ಇಲ್ಲಿ ಉದಾಹರಿಸಬಹುದು:

ಆವನ ಗಾಡಿ ನೋಡಿದವರಂ ಸಲೆ ಸೋಲಿಸುತಿರ್ಪುದುರ್ಕಿನಿಂ
ದಾವನ ಪೂವಿನಂಬದಟರಂ ತಲೆವಾಗಿಸುತಿರ್ಪುದೇಟ್ಗೆಯಿಂ
ದಾವನ ಪಜ್ಜಳಿಪ್ಪ ಜಸಮೆಣ್ದೆಸೆಯೊಳ್ ನೆಲಸಿರ್ಪುದಾತನೀ
ಗಾವಗಮೆನ್ನ ಜಾಣ್ನುಡಿಗೆ ಮೆಯ್ಸಿರಿಯಂ ನನೆವಿಲ್ಲ ಬಲ್ಲಹಂ

ಇಲ್ಲಿ ವೃತ್ತ ಧಾಟಿ ಸಂಸ್ಕೃತ: ಮಾತುಗಳು ಕನ್ನಡ.

ಪಂಪಾದಿಗಳೂ ಕನ್ನಡವನ್ನು ಬಿಟ್ಟುಬಿಟ್ಟರೆಂದಲ್ಲ: ಆದರೆ ಅವರ ಶೈಲಿ ಸಾಮಾನ್ಯವಾಗಿ ಸಂಸ್ಕೃತ "ಮಾರ್ಗ" ವನ್ನು ಅನುಸರಿಸುತ್ತದೆ. ವೃತ್ತವೂ ಆ ಕಡೆಗೆ ಅವರನ್ನು ಸೆಳೆಯುತ್ತದೆ. "ದೇಸಿ"ಗೆ ಉದಾ:

ಒಡಲೊಳೆ ಜೀವಮಿರ್ದು ಗಡ ಸಂಚಿಸುತಿರ್ಪುದು ಪುಣ್ಯಪಾಪಮಂ
ಗಡ ಬಟಿಕತ್ತ ಬೇಱ್ ಪೆಱತೊಂದೊಡಲೊಳ್ ಗಡ ತಾನೆ ನಿಂದೊಡಂ
ಬಡಿಪುದು ಧರ್ಮಕರ್ಮಫಲಮಂ ಗಡ ಸತ್ತನೆ ಮತ್ತೆ ಪುಟ್ಟುವಂ
ಗಡ ಪುಸಿ ಕಾಣ ಡಂಬಮಿದು ಖೇಚರ ನೀನದನೆಂತು ನಂಬಿದೋ

(ಆದಿಪುರಾಣ, ೨–೩೮)

ತೆಂಕಣ ಗಾಳಿ ಸೋಂಕಿದೊಡಮೊಳ್ನುಡಿಗೇಳ್ದೊಡಮಿಂಪನಾಳ್ದ ಗೇ
ಯಂ ಕಿವಿವೊಕ್ಕೊಡಂ ಬಿರಿದ ಮಲ್ಲಿಗೆಗಂಡೊಡಮಾದ ಕೆಂದಲಂ
ಪಂ ಕೆಳೆಗೊಂಡೊಡಂ ಮಧುಮಹೋತ್ಸವಮಾದೊಡಮೇನನೆಂಬೆನಾ
ರಂಕುಸಮಿಟ್ಟೊಡಂ ನೆನೆವುದೆನ್ನ ಮನಂ ಬನವಾಸಿದೇಶಮಂ

(ಪಂಪಭಾರತ, ೪– ೩೦)

ಅಕ್ಷರವೃತ್ತಗಳೆಂದು ಲಕ್ಷಣ ಹೇಳುವ ವೃತ್ತಗಳಲ್ಲಿ ಇನ್ನೊಂದು ವಿಶೇಷವುಂಟು: ಕೆಲವು ಮಾತ್ರಾವೃತ್ತಗಳಾಗಿ ಪರಿಣಮಿಸಿರುವುವು.

ಉದಾ:

ಮಲ್ಲಿಕಾಮಾಲೆ (ಮಾತ್ರೆಗಳು): ೩ ೪ ೩ ೪ ೩ ೪ ೩ ೨
ಮಲ್ಲಿಕಾಮಾಲೆ: ನೀರ । ಜೋತ್ಪಲ। ವರ್ಣ। ನಾಡಿದ। ನಾಡಿ। ದಂ ಕಮ। ಲೇಕ್ಷ । ಣಂ॥
ತರಳ: ವದನಂ। ಮೋಹನ। ಮಂತ್ರ। ನಾದಮೊ। ಸೇತು। ಗಟ್ಟಿದ। ಕಾಮ। ಸಂ॥
೪ ೪ ೪ ೪ ೪ ೪ ೪ ೪
ಕೌಂಚ: ಕೇದಗೆ। ಪೂವಿಂ। ಚಾದಗೆ। ಬಾಯಂ। ಬಿಡೆ ಬಿಡು। ತರೆ ಬಿಡು। ವನಿ ಕಡು। ವಿಸಿಲಂ॥

೫ ೫ ೫ ೫ ೫ ೫ ೫
ಶಂಭುನಟನ: ಅಳಿಪ್ರಭ। ಲಲಾಟಗ। ಚಲಾಲಕೆ। ಖಲಾಪಹೆ। ಬಲಾನ್ವಿತೆ। ಮಿಲದ್ಘನ। ಗುಣೇ ।

ಮೂರಕ್ಷರದ ಯಗಣ ಮುಂತಾದ ಎಂಟು ಗಣಗಳಿಂದ ವೃತ್ತಗಳ ಪಾದಗಳನ್ನು ವಿಭಾಗಮಾಡಿ ಲಕ್ಷಣ ಹೇಳುವುದು ಅಷ್ಟು ಸಹಜವಾಗಿ ಕಾಣುವುದಿಲ್ಲ. ವೃತ್ತಗಳ ನಿಜಸ್ವರೂಪವಾಗಲಿ, ರಚನೆಯ ರಹಸ್ಯವಾಗಲಿ ಈ ಪದ್ಧತಿಯಿಂದ ತಿಳಿಯುವುದಿಲ್ಲ. ಅಕ್ಷರಗಣಲಕ್ಷಣಗಳನ್ನು ಕಂಠಪಾಠಮಾಡುವುದಕ್ಕಿಂತಲೂ ಪ್ರಸಿದ್ಧ ಕವಿಗಳ ಒಂದೊಂದು ಪಾದವನ್ನು ನೆನಪಿನಲಿಟ್ಟುಕೊಳ್ಳುವುದು ಒಳ್ಳೆಯದು.

ಉದಾ:

ಮಾಲಿನಿ: ಸರಸಿಜಮನುವಿದ್ಧಂ ಶೈವಲೇನಾಪಿ ರಮ್ಯಂ (ಶಾಕುಂತಲ)

ಮಂದಕ್ರಾಂತ:

ಕಶ್ಚಿತ್ ಕಾಂತಾವಿರಹಗುರುಣಾ ಸ್ವಾಧಿಕಾರಾತ್ ಪ್ರಮತ್ತಃ
ಮೇಘಾಲೋಕೇ ಭವತಿ ಸುಖಿನೋಽಪ್ಯನ್ಯಥಾವೃತ್ತಿ ಚೇತಃ

(ಮೇಘಸಂದೇಶ)

ಶಿಖರಿಣಿ:

ಗುಣಾಃ ಪೂಜಾಸ್ಥಾನಂ ಗುಣಿಷು ನ ಚ ಲಿಂಗಂ ನ ಚ ವಯಃ

(ಉತ್ತರರಾಮಚರಿತ)

(iii) ಲೌಕಿಕ ಛಂದಸ್ಸು, ಕಂದ

ಸಂಸ್ಕೃತದ ಆರ್ಯಾ ಅಥವಾ ಗಾಥಾ ವೃತ್ತವು ಪ್ರಾಕೃತದಲ್ಲಿ ಆರ್ಯಗೀತ ಅಥವಾ ಸ್ಕಂಧಕವೆಂಬ ೬೪ ಮಾತ್ರೆಯ ವೃತ್ತವಾಗಿ ಕನ್ನಡದಲ್ಲಿ ಮತ್ತು ತೆಲುಗಿನಲ್ಲಿ ವಿಶೇಷವಾಗಿ ಕಂದ ಎಂಬ ಹೆಸರಿನಲ್ಲಿ ಪ್ರಚಾರದಲ್ಲಿದೆ. ಚಂಪೂಕಾವ್ಯವೆಂದರೆ ಮುಕ್ಕಾಲುಪಾಲು ಕಂದ, ಕಾಲುಪಾಲು "ಆರು ವೃತ್ತಗಳು". ಉದಾಹರಣೆಗಾಗಿ, ಪಂಪಭಾರತದಲ್ಲಿ ವೃತ್ತ ಕಂದಗಳ ಪ್ರಮಾಣ:

	ಒಟ್ಟು ಪದ್ಯ	ಕಂದ	ಚಂಪಕ	ಉತ್ಪಲ	ಮತ್ತೇಭ	ಶಾರ್ದೂಲ
ಆಶ್ವಾಸ ೧:	೧೪೬	೮೨	೨೯	೧೫	೧೨	೧
೮:	೮೨	೨೯	೨೧	೮	೧೦	–
೯:	೧೦೫	೪೫	೧೪	೧೮	೨೧	೩

ಈ ಮೂರು ಆಶ್ವಾಸಗಳಿಂದ– ಸ್ರಗ್ಧರೆ, ಮಹಾಸ್ರಗ್ಧರೆ, ಶಿಖರಿಣಿ, ಪೃಥ್ವಿ, ತರಳ, ಮಲ್ಲಿಕಾಮಾಲೆ, ಹರಿಣೀಪ್ಲುತ ಇವು ಒಂದು, ಎರಡು. ತೆಲುಗಿನಲ್ಲಿಯೂ ಚಂಪೂಕಾವ್ಯಗಳು ಹೀಗೆಯೇ.

ಕಾದಂಬರಿಯಿಂದ ಆರ್ಯೆಗೆ ಉದಾಹರಣೆ : (೫೭ ಮಾತ್ರೆಗಳು.)

೪ ೪ ೪
ದೂರಂ। ಮುಕ್ತಾ। ಲತಯಾ।
೪ ೪ ೪ ೪ ೨
ಬಿಸಸಿತ। ಯಾ ವಿ। ಪ್ರಲೋಭ್ಯ। ಮಾನೋ। ಮೇ॥ (೩೦)

೪ ೪ ೪
ಹಂಸ ಇ ।ವ ದರ್ಶಿ।ತಾಶೋ।

೪ ೪ ೧ ೪ ೨
ಮಾನಸ। ಜನ್ಮಾ । ತ್ವ ಯಾ ನೀ। ತಃ ॥ (೨೭)

ಅದರ ಭಾಷಾಂತರ, ಕಂದ: (೬೪ ಮಾತ್ರೆಗಳು, ೩೨+ ೩೨)

ಎನಗಾ। ಸೆದೋಱಿ । ಬಿಸಸಿತ।
ಮೆನಿಸುವ । ನಿಜತಾ। ರಹರ। ಲತೆಯಿಂ । ದಂ ಹಂ॥ (೩೨)
ಸನವೋಲ್ । ಮಾನಸ। ಸಂಭವ।
ಮೆನಿಪ ಮ ।ದೀಯಾ। ಭಿಮಾನ। ಮುಂ ಕ । ಟ್ಟುಯ್ದೋ ॥ (೩೨)

ಈ ಮಾತ್ರಾಗಣಗಳ ಧಾಟಿ ಕನ್ನಡಕ್ಕೆ ಹೊಂದಿಕೊಂಡಿದ್ದರಿಂದ ಕಂದ ಹಳಗನ್ನಡಕ್ಕೆ ಸೊಗಸಾಯಿತು.

ಶುದ್ಧ ಹೊಸಗನ್ನಡದಲ್ಲಿ ಕಂದವನ್ನು ಬರೆಯುವುದು ಅಷ್ಟು ಸುಲಭವಲ್ಲ. ಕೆಲವರು ನಿಯಮ ನಿರ್ಬಂಧಗಳನ್ನು ತಪ್ಪಿಸಿಕೊಳ್ಳಲು ಪ್ರಯತ್ನಪಟ್ಟಿದ್ದಾರೆ. ಕೆಲವುಕಡೆ, ಗಣವಿಭಾಗಕ್ಕೆ ಲಕ್ಷ್ಯಕೊಟ್ಟಿಲ್ಲ. ಎರಡನೆಯ ಪದದ ಗುರುವಿನ ಸ್ಥಾನದಲ್ಲಿ ಎರಡು ಹ್ರಸ್ವಗಳನ್ನು ಹಾಕಿರುತ್ತಾರೆ. ಉದಾ:

- ∪ –
ಶ್ರೀ ವಿ ರೂ ಪಾಕ್ಷದೇವನಿ

– ∪ ∪
ನಾ ವೀರಂ ಪುಟ್ಟಿ ವಿಬುಧನುತ ನಾ ದಂ ದ ದೊ

– ∪ –
ಳಾ ವಿ ರೂ ಪಾಕ್ಷ ನೃಪನಿಂ
ದೀ ವೀರಂ ಜನಿಸಿ ವಿಬುಧನುತನಾಗಿರ್ಪಂ

(ವೀರಭದ್ರವಿಜಯ ೨೮)

ಗಲ್ಲಂ ಮಲ್ಲಂ ತೋರಣ
∪ – ∪ – ∪ ∪ – ∪ ∪
ಮಲ್ಲಣಿ ಯು ಮಂ ಕ ಪ ಟ್ಟ ವೆ ಯೆಂಬಿವು ಸಂ ಸ್ಕೃ ತ
ದಲ್ಲಿಯುಮೀ ಕರ್ಣಾಟಕ
ದಲ್ಲಿಯುಮೊಂದೇ ಸಮಾನಮೆಲೆ ಚತುರಾಸ್ಯಾ

(ಚತುರಾಸ್ಯನಿಘಂಟು, ಪ. ೫೪)

- ∪ –
ಮ ತ್ತ ಮಾ ಕೆಳದಿಯೊಳ್ ಚೆ
ಲ್ವೆತ್ತು ವಿರಾಜಿಸುತುಮಿಹ ಮಹತ್ತಿನ ಮಠಮಂ
- ∪ –
ಬಿ ತ್ತ ರಂ ಗೈಸಿ ಜಂಗಮ
ಕುತ್ತಮತರ ದಾನಧರ್ಮಗಳನಾಗಿಸಿದಂ

(ಕೆಳದಿನೃಪವಿಜಯ, ೨– ೬೭)

∪∪ ∪ –
ತಿವಿರಡಂ ಗಿದುದು ಚೇತ
ಸ್ತಿವಿರಾತ್ಮಧ್ಯಾನದಿಂದೆ ಭಜಕರ್ಗಾಗಳ್
ತವಿಪಂತೆ ವಿಶ್ವಪತಿಯು
ಪ್ಪವಡಿಸೆ ತಾವೆಯ್ದೆ ಪಾಡಿದರ್ ಭಾವಕಿಯರ್

(ವೀರಭದ್ರವಿಜಯ, ೭–೧೩)

ಈ ಪ್ರಯೋಗಗಳು ಚೆನ್ನಲ್ಲ: ನಿಲ್ಲತಕ್ಕುವಲ್ಲ.

ಕಂದದಲ್ಲಿಯೂ ಸಂಸ್ಕೃತ ಶೈಲಿ, ಕನ್ನಡ ಶೈಲಿಗಳಿಗೆ ಉದಾಹರಣೆಗಳನ್ನು ತೋರಬಹುದು: ಮಾರ್ಗಕ್ಕೆ:

ಬಾದೇಂ ಮದೀಯಕರ್ಮಘ
ಳೋದಿತ ಸಂತಾಪರೂಪ ಪಾಪಕಳಾಪ
ಚ್ಛೇದನಕರಮಾಯ್ತು ಭವ
ತ್ಪಾದಪ್ರಕ್ಷಾಳನೋದಕಂ ಮುನಿನಾಥಾ

(ಪಂಪಭಾರತ. ೬–೧೩)

ದೇಸಿಗೆ:

ಕುಡವೇಟ್ಟಿನ ಕುಡುವನ ಕುಡೆ
ಪಡೆವನ ಪೆಂಪೇಂ ನೆಗಟ್ಟೆವಡೆಗುಮೊ ಪೇಟ್ವಿಂ
ಕುಡವೇಟ್ಗೆಮ ಕುಡುವಣ್ಣಂ
ಕುಡುಗೆಮ ಕಂಡೆ ಕೊಳ್ವ ಕಲಿಯನಜೆಯಲ್ಕಕ್ಕುಂ

(ಅದೇ, ೬–೪೯)

ಹಿತವಾದ ಬೆರಕೆಗೆ:

ಅವಲರುಂ ಪಣ್ಣಂ ಬೀ
ತೋವವು ಗಡ ಬೀಯವಲ್ಲಿ ಮಲ್ಲಿಗೆಗಳುಮಿ
ಮ್ಮಾವುಗಳುಮೆಂದೊಡಿನ್ ಪೆಱ
ತಾವುದು ಸಂಸಾರಸಾರಸರ್ವಸ್ವಫಲಂ

ಷಡಕ್ಷರಿಯ ರಾಜಶೇಖರವಿಲಾಸದಿಂದ ಕಂದದ ಈ ಶೈಲಿಗಳಿಗೆ ಉದಾಹರಣೆ:

ವಿತತ ಪುರಾತನ ಕವಿಕೃತ
ಕೃತಿಭೂಷಣ ಭೂಷಿತಾಂಗಿ ಭಾರತಿ ಭುವನ
ಸ್ತುತಕಾಂತಿಗುಣಮಿಳಿತ ಮ
ತ್ಕೃತಿ ನವಸೀಮಂತರತ್ನಮಂ ತಳೆದೆಸವಳ್

ಎಳವರೆಯದೊಳೆಳೆಯರ್ಕಳ
ನೆಳಸುತೆ ನಳೆತೋಳ್ಗಳಿಂದೆ ಬಿಗಿದಪ್ಪಿ ಮನಂ
ಗೊಳೆ ತಳ್ತು ನೋಡಿ ಮುದ್ದಿಪ
ವಿಳಾಸಮೊಂದಕ್ಕೆ ನೊಂತುದಿಲ್ಲಾನ್ ಕೆಳದೀ

ಅರಾರೇಱರ್ ಶಾಸ್ತ್ರ
ಶ್ರೀರೋಹಣಗಿರಿಯನಲ್ಲಿ ನವಕವಿತಾಚಿಂ
ತಾರತ್ನಂ ದೊರೆಗುಮೆ ಮಾ
ರಾರಿಯ ಕೃಪೆಯಿಲ್ಲದಂಗೆ ಧರಣೀತಲದೊಳ್

ವೃತ್ತಕಂದಗಳ ಪ್ರಯೋಗದ ಮೇಲೆ ಭಾಷಾವ್ಯತ್ಯಾಸದ ಪರಿಣಾಮ

ಹಳಗನ್ನಡ ಹೊಸಗನ್ನಡಕ್ಕೆ ತಿರುಗಿ ಹಳಗನ್ನಡ ಪ್ರತ್ಯಯಗಳೂ ಶಬ್ದರೂಪಗಳೂ ಹೊಸಗನ್ನಡದ ರೂಪಾಂತರಗಳನ್ನು ಪಡೆದ ಮೇಲೆ ಹಳಗನ್ನಡ ಮಿಶ್ರಣವಿಲ್ಲದೆ ವೃತ್ತಕಂದಗಳನ್ನು ರಚಿಸುವುದು ಕಷ್ಟವಾಗುತ್ತ ಬಂತು. ಮತ್ತು ಈ ಸಂಸ್ಕೃತ ಛಂದಸ್ಸು ಕನ್ನಡಕ್ಕೆ ಸಹಜವಾದ ಛಂದಸ್ಸಲ್ಲವೆಂಬುದೂ ಸ್ಪಷ್ಟವಾಗುತ್ತಾ ಬಂತು. ಸುಮಾರು ೧೧ನೆಯ ಶತಮಾನದವರೆಗೆ ಕನ್ನಡದ ಪದ್ಯಗಳು ಸಾಹಿತ್ಯದಲ್ಲಿ ಎಲ್ಲೋ ಅಲ್ಲೊಂದು ಇಲ್ಲೊಂದು ಕಾಣಿಸಿಕೊಳ್ಳುತ್ತವೆ. ೧೨ನೆಯ ಶತಮಾನದಲ್ಲಿ ವೀರ ಶೈವ ಕವಿಗಳು ಕನ್ನಡದ ಛಂದಸ್ಸನ್ನೇ ಮುಂದಕ್ಕೆ ತಂದು ಪ್ರಾಶಸ್ತ್ಯದ ಸ್ಥಾನದಲ್ಲಿ ನಿಲ್ಲುವಂತೆ ಮಾಡಿದರು. ಆಗ ಮಧುರಕವಿಯ ಧಿಕ್ಕಾರದ ಮಾತು ಛಂದಸ್ಸಿನ ವಿಷಯದಲ್ಲಿ ಹಿಮ್ಮೆಟ್ಟಿತು:

ಪಂಡಿತರುಂ ವಿವಿಧಕಳಾ
ಮಂಡಿತರುಂ ಕೇಳತಕ್ಕ ಕೃತಿಯಂ ಕ್ಷಿತಿಯೊಳ್
ಕಂಡರ್ ಕೇಳ್ವೊಡೆ ಗೊರವರ
ಡುಂಡುಚಿಯೇ ಬೀದಿವಱಿಯೆ ಬೀರನ ಕತೆಯೇ?

"ಒನಕೆವಾಡು" ಮುಂತಾದವುಗಳಲ್ಲಿ ಜನಸಾಮಾನ್ಯರೂ ಹೆಂಗಸರೂ ತ್ರಿಪದಿ ಮುಂತಾದ ಕನ್ನಡ ಛಂದಸ್ಸನ್ನೇ ಬಳಸುತ್ತಿದ್ದರು. ಈ ಹರೆ ಬಡಿದು, ರಾಗಿ ಬೀಸಿ, ಒನಕೆ ಕುಟ್ಟಿ, ಬೀದಿಯಲ್ಲಿ ಕುಣಿದು, ಹಾಡಿದ ಕನ್ನಡ ಮಟ್ಟುಗಳನ್ನು, ಹಾಡುಗಳನ್ನು ಈಗ ವಿಚಾರಕ್ಕೆ ತೆಗೆದುಕೊಳ್ಳೋಣ. ಈ ಜನಪದ ಸಾಹಿತ್ಯ ಮತ್ತೆ ಕನ್ನಡದ ಪ್ರೌಢಸಾಹಿತ್ಯಕ್ಕೂ ಹೇಗೆ ತಳಹದಿಯಾಯಿತೆಂಬುದನ್ನು ನೋಡೋಣ.

೨ ಕನ್ನಡ ಛಂದಸ್ಸು

(i) ನಾಗವರ್ಮನ ಛಂದೋಂಬುಧಿ

ಇದುವರೆಗೆ ಹೇಳಿದ ವೃತ್ತಕಂದಗಳ ಲಕ್ಷಣಗಳಿಗೆ ಇದು ಕನ್ನಡದಲ್ಲಿರುವ ಅತಿ ಪ್ರಾಚೀನ ಗ್ರಂಥ.

೧ನೆಯ ಅಧಿಕಾರದಲ್ಲಿ–

ಇಂದುಧರನುಮೆಗೆ ಪೇೞ್ದಾ
ಛಂದಂ ಪಿಂಗಳನಿನವನಿಯೊಳ್ ಪರಪಿದೊಡಾ
ಛಂದೋಂಬುರಾಶಿಯೊಳ್ ಮೊಗೆ
ತಂದದನಾತ್ಮೀಯ ಸತಿಗೆ ನಾಕಿಗನುಸಿರ್ದಂ (೧–೩೦)

ಎಂದು ನಾಗವರ್ಮನು ಹೇಳುತ್ತಾನೆ. ತನ್ನ ಹಿಂದೆ ಕನ್ನಡದಲ್ಲಿದ್ದಿರಬಹುದಾದ (ಗುಣಗಾಂಕೀಯಂ?) ಯಾವ ಕನ್ನಡ ಛಂದೋಗ್ರಂಥವನ್ನೂ ಹೇಳದೆ, ಸಂಸ್ಕೃತದ ಪಿಂಗಳನಿಂದ ತೆಗೆದು ಹೇಳುತ್ತೇನೆಂದು ತಿಳಿಸಿ, ಅದಕ್ಕೆ ತಕ್ಕಂತೆ, ಮ–ಯ–ರ–ಸ–ತ–ಜ–ಭ–ನ–ಲ–ಗಾಕ್ಷರಗಳನ್ನೂ, ಪ್ರಸ್ತಾರವನ್ನೂ (೩೨–೪೧) ಹೇಳಿ, ಸಂಸ್ಕೃತ ಪ್ರಾಕೃತ ಮುಂತಾದ ಸರ್ವವಿಷಯಭಾಷಾ ಜಾತಿಗಳಾದ ವೃತ್ತ ಸ್ಕಂಧಕಾದಿಗಳನ್ನು ನಿರ್ದೇಶಿಸಿ, ದೇಶಭಾಷೆಗಳಲ್ಲಿರುವ, ಎಂದರೆ, ಕನ್ನಡದಲ್ಲಿರುವ ಪದ್ಯಗಳನ್ನೂ ಹೆಸರಿಸುತ್ತಾನೆ.

ಮದನವತಿಯಕ್ಕರಂ ಚೌ
ಪದಿ ಗೀತಿಕೆಯೇಳೆ ತಿವದಿಯುತ್ಸಹಂ ಷ
ಟ್ಪದಿಯಕ್ಕರಿಕೆ ಕರಂ ಚೆ
ಲ್ವೊದವಿದ ಛಂದೋವತಂಸಮಬ್ಜದಳಾಕ್ಷೀ (ಪ. ೪೭)

ಮುಂದೆ ೨ ೩ ೪ನೆಯ ಅಧಿಕಾರಗಳಲ್ಲಿ ವೃತ್ತ ಶ್ಲೋಕ ಕಂದಗಳನ್ನೂ ೬ನೆಯದರಲ್ಲಿ ಷಟ್ಪ್ರತ್ಯಯಗಳನ್ನೂ ಹೇಳಿರುತ್ತಾನೆ. ೫ನೆಯ ಅಧಿಕಾರದಲ್ಲಿ ಕರ್ಣಾಟಕ ವಿಷಯ ಜಾತಿಯನ್ನು ವಿವರಿಸಿದ್ದಾನೆ; ಎಂದರೆ ಗ್ರಂಥದ ಅಲ್ಪಭಾಗವನ್ನು ಮಾತ್ರ ಈ ಅಚ್ಚಗನ್ನಡ ಛಂದಸ್ಸಿಗೆ ವಿನಿಯೋಗಿಸಿದ್ದಾನೆ. ೧೦ನೆಯ ಶತಮಾನದವರೆಗಿನ ಕಾವ್ಯ ಶಾಸನಗಳನ್ನು ನೋಡಿದರೂ ಇದೇ ಭಾವನೆ ಹುಟ್ಟುತ್ತದೆ–ಎಂದರೆ ಸಂಸ್ಕೃತ ಛಂದಸ್ಸೇ ಕನ್ನಡದಲ್ಲಿ ಪ್ರಧಾನವೆಂದೂ, ಕನ್ನಡ ಛಂದಸ್ಸು ಅತಿ ವಿರಳವೆಂದೂ, ಕಡೆಗೆ ಅದು ಉಂಟೋ ಇಲ್ಲವೋ, ಇದ್ದರೂ ಅಷ್ಟು ಮಹತ್ತಿನದಲ್ಲವೆಂದೂ ಬುದ್ಧಿಗೆ ಭಾಸವಾಗುತ್ತದೆ. ಆದರೂ ಮೇಲೆ ಹೇಳಿದಂತೆ, ಈ ಕನ್ನಡ ಛಂದಸ್ಸೇ ನಿಜವಾದ ಕನ್ನಡ ಭಾಷೆಯ, ಕನ್ನಡ ಜನರ, ಛಂದಸ್ಸೆಂದೂ, ಇದು ಜನರಲ್ಲಿ (ಪ್ರಾಯಶಃ ಉಳಿಯದೆ ಹೋದ ಜನಪದ ಸಾಹಿತ್ಯದಲ್ಲಿ) ಪ್ರಚಾರದಲ್ಲಿತ್ತೆಂದೂ, ತೆಲುಗು ತಮಿಳುಗಳೊಡನೆ ಹೋಲಿಸಿ ನೋಡಿದರೆ ಇದೇ ಮುಂದೆ ವೀರಶೈವ ಕವಿಗಳು ಮುಂದಕ್ಕೆ ತಂದ ಛಂದಸ್ಸುಗಳ "ತಾಯಿ" ಎಂದೂ ಚರಿತೆಯ ದೃಷ್ಟಿಯಿಂದ ನೋಡತಕ್ಕವರೆಗೆ ಸ್ಪಷ್ಟವಾಗದಿರಲಾರದು. ಅದರಲ್ಲಿಯೂ ತಮಿಳಿನ ಛಂದಸ್ಸುಗಳೊಡನೆ ಹೋಲಿಸಿ ನೋಡಬೇಕು: ಏಕೆಂದರೆ ತೆಲುಗು ಕನ್ನಡದಂತೆ ಸಂಸ್ಕೃತ ಛಂದಸ್ಸನ್ನೇ ಶರಣುಹೊಕ್ಕು ತನ್ನ 'ಸ್ವದೇಶಿ' ಯನ್ನು ಹಿಂದಕ್ಕೆ ಹಾಕಿತು. ತಮಿಳು ಸ್ವದೇಶಿ ಭಾವನಿಯನ್ನೂ ಸ್ವತಂತ್ರದ ಬೆಳೆವಣಿಗೆಯನ್ನೂ ಬಿಡದೆ. ಗೌರವಕೊಟ್ಟು, ಪ್ರತಿಜ್ಞೆ ಮಾಡಿಯೋ ಎಂಬಂತೆ ಸಾಧಿಸಿ ನಿಲ್ಲಿಸಿಕೊಂಡಿತು. ಆದರೆ ಸೂಕ್ಷ್ಮವಾಗಿ ಪರಿಶೀಲಿಸತಕ್ಕವರಿಗೆ ಈ ಮೂರು ಭಾಷೆಗಳಲ್ಲಿಯೂ ಸಂಸ್ಕೃತಭಿನ್ನವಾದ, ದ್ರಾವಿಡಭಾಷೆಯಂತೆಯೇ ಸಹಜವಾದ ಒಂದು ದ್ರಾವಿಡ ..ಛಂದಸ್ಸಿನ ಮೂಲಾಧಾರಗಳು ದೊರೆಯುತ್ತವೆ. ಮಲೆಯಾಳದಲ್ಲಿಯೂ, ಕೊಡಗು ತುಳು ಮುಂತಾದ ಸಾಹಿತ್ಯಕ್ಕೇರದ ಭಾಷೆಗಳ ಹಾಡುಗಳಲ್ಲಿಯೂ, ದ್ರಾವಿಡ ದೇಶಗಳ ಎಲ್ಲಾ ಜನಪದ ಸಾಹಿತ್ಯಗಳಲ್ಲಿಯೂ, ಹೆಂಗಸರ ಹಾಡುಗಳಲ್ಲಿಯೂ, ಲಾವಣಿಗಳಲ್ಲಿಯೂ ಈ ಛಂದಸ್ಸಿನ ತಳಹದಿಯನ್ನೂ ರೂಪಾಂತರಗಳನ್ನೂ ಗುರುತಿಸಬಹುದು. ಈ ದೃಷ್ಟಿ ಹುಟ್ಟಿದ ಮೇಲೆ ಈ ಬಗೆಯ ಸಾಹಿತ್ಯಗಳ ಸಂಗ್ರಹಕಾರ್ಯವೂ, ಈ ದ್ರಾವಿಡ ಛಂದಸ್ಸಿನ ಸ್ವರೂಪನಿರ್ಣಯ ಕಾರ್ಯವೂ ಪ್ರಾರಂಭವಾಗಿವೆ.

(ii)ಕನ್ನಡ ಪದ್ಯಗಳು–ಇವುಗಳ ದ್ರಾವಿಡ ಮೂಲ

೧೦ ನೆಯ ಶತಮಾನದವರೆಗೆ ಶಾಸನಗಳಲ್ಲಿ, ಪಂಪಾದಿ ಕವಿಗಳಲ್ಲಿ ಮತ್ತು ನಾಗವರ್ಮನಲ್ಲಿ ಕಾಣಬರುವ ಮುಖ್ಯವಾದ ಕನ್ನಡ ಪದ್ಯಗಳು ಯಾವುವೆಂದರೆ: (೧) ತ್ರಿಪದಿ. (೨) ಅಕ್ಕರ, (೩) ರಗಳೆ, (೪) ಷಟ್ಪದಿ. ಇವಕ್ಕೆ, ಮುಂದೆ ಪ್ರಸಿದ್ಧವಾಗಿ ಈ ಕಾಲದಲ್ಲಿಯೇ ಪ್ರಚಾರದಲ್ಲಿದ್ದಿರಬಹುದಾದ ಸಾಂಗತ್ಯವನ್ನೂ ಸೇರಿಸಬಹುದು.

೧೨ನೆಯ ಶತಮಾನದಿಂದೀಚೆಗೆ ಷಟ್ಪದಿ ಒಂದಿದ್ದದ್ದು ಆರು ಬಗೆಯಾಯಿತು. ಯಕ್ಷಗಾನ ಪ್ರಸಂಗಗಳಲ್ಲಿ ತಾಳವನ್ನೂ, ದ್ರಾವಿಡ ಗಣ ಸ್ವರೂಪವನ್ನೂ ಅನುಸರಿಸಿ, ಹೊಸ ಹೊಸ ಪದ್ಯಗಳು ನಿರ್ಮಿತವಾದುವು (ಸೀಸಪದ್ಯ ತೆಲುಗಿನಿಂದ ಸೇರಿದ ಹಾಗೆ ಕಾಣುತ್ತದೆ.)

೧೯ನೆಯ ಶತಮಾನದ ಅಂತ್ಯಭಾಗದಲ್ಲಿ ಇಂಗ್ಲಿಷ್ ಸಾಹಿತ್ಯದ ಅನುಭವವುಳ್ಳವರು ಈ ಪೂರ್ವದ ತಳಹದಿಯ ಮೇಲೂ, ನಾಗವರ್ಮನು ಕಾಣದ, ೮೦೦ ವರ್ಷಗಳ ಹೊಸ ಹಾಡುಕಟ್ಟುಗಳ ದಾರಿತೋರಿಕೆಯ ಮೇಲೂ, ಇಂಗ್ಲಿಷ್ ಛಂದಸ್ಸಿನ ಸ್ವಾತಂತ್ರ್ಯ ವೈವಿಧ್ಯ ಸೌಂದರ್ಯಗಳ ಪ್ರೇರಣೆಯ ಮೇಲೂ, ಅವಲಂಬಿಸಿ ಹೊಸ ರೀತಿಯ ಪದ್ಯಗಳನ್ನೂ, ಪಾದಗಳ ವಿನ್ಯಾಸವನ್ನೂ, ಪ್ರಾಸದ ನಿರಾಕರಣ ಮತ್ತು ಹೊಸಬಗೆಯ ವಿನಿಯೋಗವನ್ನೂ, ನಾಲ್ಕು ಆರು ಪಾದಗಳನ್ನೂ ಮೀರಿ ಎಷ್ಟು ದೂರ ಬೇಕಾದರೆ ಅಷ್ಟು ದೂರ ಓಡಬಲ್ಲ ಪದ್ಯರಚನೆಯನ್ನೂ, ಸರಳ ರಗಳೆಯನ್ನೂ, ಪ್ರಯೋಗಿಸುತ್ತಾ ಇದ್ದಾರೆ.

ಈ ಬಗೆಬಗೆಯಾದ ಕನ್ನಡ ಪದ್ಯಗಳ ಛಂದಸ್ಸನ್ನು ಈಗ ಪರಿಶೀಲಿಸೋಣ:

(iii) ದ್ರಾವಿಡ ಗಣ

ಮೊದಲು ಗಣ ಸ್ವರೂಪವನ್ನು ಮತ್ತು ಇವು ಹೇಗೆ ದ್ರಾವಿಡದ ಮೂಲಗಣವೆಂದು ಹೇಳಬಹುದೆಂಬುದನ್ನು ನೋಡೋಣ.

ನಾಗವರ್ಮನೇ ಈ ಗಣಸ್ವರೂಪವನ್ನು ಸ್ಪಷ್ಟಪಡಿಸಿದಿದ್ದಾನೆ:

ಎರಡುಂ ಮೂಱುಂ ನಾಲ್ಕುಂ
ಗುರುವಿಂ ಪ್ರಸ್ತರಿಸಲಂಬುನಿಧಿ ಗಜ ಧರಣೀ
ಶ್ವರಗಣಮೊಗೆಗುಮವರ್ಕಂ
ಸರಸಿಜಭವ ವಿಷ್ಣು ರುದ್ರ ಸಂಜ್ಞೆಗಳಕ್ಕುಂ (೫-೨೪೦)

ಈ ಬ್ರಹ್ಮ, ವಿಷ್ಣು, ರುದ್ರಗಣಗಳನ್ನು ['ಕನ್ನಡ ಕೈಪಿಡಿ' ಯ] ೧೨೩-೧೨೪ನೆಯ ಪುಟಗಳಲ್ಲಿ ನಿರೂಪಿಸಿದೆ. ಬ್ರಹ್ಮಗಣ ೪ ಬಗೆ: ವಿಷ್ಣು ಗಣ ೮: ರುದ್ರಗಣ ೧೬: ಇವಕ್ಕೆ ತೆಲುಗಿನಲ್ಲಿ ಕ್ರಮವಾಗಿ ಸೂರ್ಯ, ಇಂದ್ರ, ಚಂದ್ರಗಣಗಳೆಂದು ಹೆಸರು ಕೊಟ್ಟಿದ್ದಾರೆ. ತಮಿಳಿನಲ್ಲಿ ಈರಶೈಶೀರ್, ಮೂವಶೈಶೀರ್, ನಾಲಶೈಶೀರ್ ಎಂದು ಹೆಸರು.

ತಮಿಳಿನ ಕ್ರಮವನ್ನು ಅನುಸರಿಸಿ ಹೀಗೆ ಹೇಳಬಹುದು: ಗಣದಲ್ಲಿ ಅಂಶಗಳುಂಟು ಗಣಕ್ಕೆ ಮೂಲಾಂಶ ಒಂದು ಗುರು (ಲಘುವಲ್ಲ)–. ಇದೇ ಗಣವಾಗಲಾರದು ಆದರೆ ಪಾದಾಂತರದಲ್ಲಿ ಗಣಸ್ಥಾನದಲಿ ನಿಲ್ಲಬಹುದು (ಷಟ್ಪದಿಯ ಅರ್ಧದ ಕೊನೆಯಂತೆ).

ಮೊದಲಿನ ಮೂಲಾಂಶವಾದ ಗುರುವಿಗೆ, ಒಂದು ಎರಡು, ಮೂರು, ಗುರುಗಳನ್ನು ಎಂದರೆ ಅಂಶಗಳನ್ನು ಸೇರಿಸಿದರೆ ಮೂರು ಬಗೆಯ ಗಣಗಳು ಹುಟ್ಟುವುವು: ಯಾವುವೆಂದರೆ–

–.– (ಎರಡಂಶದ ಗಣ: ಬ್ರಹ್ಮ, ಸೂರ್ಯ)

–.–.–. (ಮೂರಂಶದ ಗಣ: ವಿಷ್ಣು ಇಂದ್ರ)

–.–.–.–. (ನಾಲ್ಕಂಶದ ಗಣ: ರುದ್ರ, ಚಂದ್ರ)

ಮೊದಲನೆಯ ಅಂಶಕ್ಕೆ ಮಾತ್ರ, ಎಂದರೆ ಗುರುವಿಗೆ ಬದಲಾಗಿ, ಎರಡು ಲಘುವನ್ನು ಹಾಕಬಹುದು. ಎರಡನೆಯ ಮೂರನೆಯ, ನಾಲ್ಕನೆಯ ಅಂಶಗಳು ಲಘುವಾಗಿಯೂ ಇರಬಹುದು. ಹೀಗೆ ಗಣಗಳು ಈ ರೀತಿ ಆಗುವುವು:

ಬ್ರಹ್ಮ: (ಒಂದು ಮೂಲಾಂಶಕ್ಕೆ ಒಂದು ಗುರು ಅಥವಾ ಒಂದು ಲಘು ಸೇರಿ)

ಅಂಶ	೧	. ೨
(೧)	–	. –
(೨)	∪ ∪	. –
(೩)	–	. ∪
(೪)	∪ ∪	. ∪

[̂ಇವನ್ನು ಅಕ್ಷರಗಣ ಎನ್ನುವುದಕ್ಕಿಂತಲೂ ಅಂಶಗಣ ಎಂದು ಹೇಳುವುದು ಉತ್ತಮ. ಸಂಸ್ಕೃತದ ಅಕ್ಷರಗಣಕ್ಕೂ ಇವಕ್ಕೂ ಭ್ರಮೆಯಾಗಬಹುದಲ್ಲದೆ ಅಕ್ಷರವೆಂದರೆ ಒಂದೇ ಅಕ್ಷರ (ವರ್ಣ) ಎಂಬ ಭ್ರಾಂತಿಯೂ ಹುಟ್ಟಬಹುದು]

ವಿಷ್ಣು: (ಮೇಲಿನ ೪ ಬ್ರಹ್ಮಗಳಿಗೆ ಒಂದು ಗುರು ಅಥವಾ ಒಂದು ಲಘು ಸೇರಿ)

ಅಂಶ	೧	.	೨	.	೩
(೧)	–	.	–	.	–
(೨)	–	.	–	.	∪
(೩)	∪ ∪	.	–	.	–
(೪)	∪ ∪	.	–	.	∪
(೫)	–	.	∪	.	–
(೬)	–	.	∪	.	∪
(೭)	∪ ∪	.	∪	.	–
(೮)	∪ ∪	.	∪	.	∪

ರುದ್ರ: (ಮೇಲಿನ ೮ ವಿಷ್ಣುಗಳಿಗೆ ಒಂದು ಗುರು ಅಥವಾ ಒಂದು ಲಘು ಸೇರಿ)

ಅಂಶ	೧	.	೨	.	೩	.	೪
(೧)	–	.	–	.	–	.	–
(೨)	–	.	–	.	–	.	∪
(೩)	∪ ∪	.	–	.	–	.	–
(೪)	∪ ∪	.	–	.	–	.	∪

ಹೀಗೆಯೇ ಮುಂದಕ್ಕೂ.

ಮೂಲಾಂಶದ ಮೇಲೇರಿದ ಅಂಶಗಳಿಗೆ ಬದಲಾಗಿ ಎರಡು ಲಘುಗಳ ಪ್ರಯೋಗ ಇಲ್ಲ. ಅಂಶ ಗಣಗಳು ಸ್ವಚ್ಛವಾಗಿ ಹಾಗೇ ಇರುವವರೆಗೂ ಈ ನಿಯಮವಿತ್ತು. ಆದರೆ ಕ್ರಮೇಣ, ಮೊದಲನೆಯ ಸ್ಥಾನದಂತೆ, ಮಿಕ್ಕ ಸ್ಥಾನಗಳಲ್ಲಿಯೂ ಈ ಬದಲಾವಣೆ ಹಬ್ಬಿಕೊಂಡು ಅಂಶಗಣವಾಗಿದ್ದದ್ದು ಮಾತ್ರಾ ಗಣವಾಗಿ ಪರಿಣಮಿಸಿತು. ಆಗ ಬ್ರಹ್ಮ. ವಿಷ್ಣು, ರುದ್ರ ಎಂಬ ಅಥವಾ ಎರಡು, ಮೂರು, ನಾಲ್ಕು ಅಂಶಗಳ ಗಣಗಳು ಹೋಗಿ ೩,೪,೫, ಮಾತ್ರೆಗಳುಳ್ಳ ಮೂರು ಗಣಗಳು ಉಳಿದುವು: ಇವಕ್ಕೆ ಉತ್ಸಾಹ ಗಣ, ಮಂದಾನಿಲಗಣ, ಲಲಿತಗಣ ಎಂದು ಆಯಾ ರಗಳೆಗಳ ಮೇಲೆ ಹೆಸರು ಕಟ್ಟಬಹುದು. ಇವು ಬ್ರಹ್ಮ. ವಿಷ್ಣುಗಳ ಪ್ರತಿಯಾಗಿ ನಿಂತುವು. ರುದ್ರಗಣ ಬ್ರಹ್ಮ+ವಿಷ್ಣುವಾಗಿ (೩+೪) ಒಡೆದು ನಿಜಸ್ವರೂಪದಲ್ಲಿ ಕಣ್ಮರೆಯಾಯಿತು. ಪಾದಗಳ ಕೊನೆಯಲ್ಲಿ ವಿಷ್ಣು + ಗುರು ಆಯಿತು (ಕೇವಲ ಗೀತದಲ್ಲಿ ಇದರ ಪ್ರಯೋಗ ಯಾವಾಗಲೂ ಸಾಧ್ಯ).

ಇಲ್ಲಿ ಇನ್ನು ಹೆಚ್ಚು ವಿವರಕ್ಕೆ ಹೋಗಲಾಗುವುದಿಲ್ಲ : ಮುಖ್ಯವಾಗಿ ವಿದ್ಯಾರ್ಥಿಗಳು ಒಂದು, ಎರಡು, ಮೂರು ಅಂಶದ ಗಣಗಳನ್ನೂ, ಮೊದಲನೆಯ ಅಂಶ ಒಂದು ಗುರು ಅಥವಾ ಎರಡು ಲಘುವಾಗಿರಬಹುದು, ಮಿಕ್ಕ ಅಂಶಗಳು ಒಂದು ಗುರು ಅಥವಾ ಒಂದು ಲಘುವಾಗಿರಬೇಕು ಎಂಬ ತತ್ತ್ವವನ್ನೂ, ಅಂಶ ಗಣಗಳು ಕಾಲಕ್ರಮದಲ್ಲಿ ಮಾತ್ರಾಗಣಗಳಾದುವೆಂಬುದನ್ನೂ, ಮೊದಲ ಅಂಶಕ್ಕೆ ಮಾತ್ರ ಎರಡು ಲಘುವಿನ ಸಮಾನತೆ ಇದ್ದದ್ದು ಸರ್ವತ್ರ ಹರಡಿ ಈ ಬದಲಾವಣೆಗೆ ಅವಕಾಶಕೊಟ್ಟಿರಬಹುದೆಂಬುದನ್ನು ಗಮನದಲ್ಲಿಟ್ಟರೆ ಸಾಕು.

ಈಗ ಕನ್ನಡ ಪದ್ಯಗಳ ಲಕ್ಷಣ ಮತ್ತು ಚರಿತ್ರೆಯನ್ನು ವಿಮರ್ಶಿಸೋಣ:

೧. ತ್ರಿಪದಿ

(i) ತ್ರಿಪದಿಯೆಂದರೆ ಕನ್ನಡದಲ್ಲಿ ಸರ್ವಜ್ಞಮೂರ್ತಿಯ ಪದಗಳು ಮೊದಲು ನೆನಪಿಗೆ ಬರುತ್ತವೆ: ಇವುಗಳನ್ನು ಹಾಡುವ ಧಾಟಿಯೂ ಕನ್ನಡಿಗರಿಗೆಲ್ಲಾ ಗೊತ್ತಿದೆ.

೫ ೫ ೫ ೫

ಒಬ್ಬನ । ಲ್ಲದೆ ಜಗಕೆ। ಇಬ್ಬರುಂ। ಟೇ ಮತ್ತೆ।

೫ ೪ ೪+ ೧ ೫
ಒಬ್ಬಸ । ರ್ವಜ್ಞ । ಕರ್ತ। : ನು ॥ ಜಗಕೆಲ್ಲ।

೫ ೪ ೪+ ೧
ಒಬ್ಬನೇ। ದೈವ । ಸರ್ವ : ಜ್ಞ ॥

೫ ೫ ೫ ೫
ಸಾಲವನು। ಕೊಂಬಾಗ । ಹಾಲೋಗ । ರುಂಡಂತೆ ।

೫ ೪ ೪+ ೧ ೫
ಸಾಲಿಗರು । ಬಂದು। ಎಳರವಾ: ಗ॥ ಕಿಬ್ಬದಿಯ।

೫ ೪ ೪+ ೧
ಕೀಲು ಮುರಿ। ದಂತೆ । ಸರ್ವ : ಜ್ಞ॥

ಇಲ್ಲಿರುವುವು ಮಾತ್ರಾಗಣಗಳು: ಒಂದನೆಯ ಪಾದದಲ್ಲಿ ಎರಡು ೫ ಮಾತ್ರೆಗಳ ಗಣಗಳು ಯತಿ, ಮತ್ತೆ ಒಳಪ್ರಾಸ, ಎರಡು ೫ ಮಾತ್ರೆಯ ಗಣಗಳು: ಎರಡನೆಯ ಪಾದದಲ್ಲಿ, ಮೊದಲನೆಯದು ೫ ಮಾತ್ರೆಗಳ ಗಣ; ಎರಡನೆಯದು ೪ ಮಾತ್ರೆಗಳ ಗಣ; ಮೂರಿದ್ದರೂ ಎಳೆದು ೪ ಮಾಡಿಕೊಳ್ಳಬೇಕು. ಮೂರನೆಯದರಲ್ಲಿ ವಿಶೇಷವೇನೆಂದರೆ ಮೊದಲು, ಎರಡನೆಯ ಗಣದಂತೆ ಅಂದು, ಒಂದು ಅಂಶವನ್ನು ಹೆಚ್ಚು ಸೇರಿಸಿ, ಆಮೇಲೆ ಹಿಂದಿನಿಂದ ಮತ್ತೆ ಅಂದು ಒಟ್ಟು ೫ ಮಾತ್ರೆಯಾಗುವಂತೆ ಮಾಡಿ, ಮುಂದಕ್ಕೆ ಹೋಗಿ ನಾಲ್ಕನೆಯ ೫ ಮಾತ್ರೆಯ ಗಣವನ್ನು ಹೇಳಬೇಕು

ಹೇಗೆಂದರೆ– ಒಬ್ಬ ಸ। ರ್ವಜ್ಞಾ । ಕರ್ತಾ: ನು॥

ಒಬ್ಬ ಸ। ರ್ವಜ್ಞಾ । ಕರ್ತಾನು । ಜಗಕೆಲ್ಲ।

ಮೂರನೆಯ ಪಾದವನ್ನು, ಎರಡನೆಯ ಪಾದವನ್ನು ಮೊದಲನೆಯ ಸಾರಿ ಅಂದಂತೆ ಅನ್ನಬೇಕು.

ಕೀಲು ಮುರಿ। ದಂತೇ। ಸರ್ವ : ಜ್ಞ ॥

(ಕೆಲವರು ಕರ್ತಾ । ನು॥ : ಕರ್ತಾನು ಜಗಕೆಲ್ಲ– ಅಥವಾ ಜಗಕೆಲ್ಲ ಒಬ್ಬನೇ. ಹೀಗೆ ಪುನರಾವೃತ್ತಿ ಮಾಡುವರು. ಮತ್ತು ಮೂರನೆಯ ಪಾದದ ಮೂರನೆಯ ಗಣವನ್ನು ಸರ್ವಜ್ಞ ಎಂದು ಒಟ್ಟಿಗೆ ೫ ಮಾತ್ರೆಯಾಗಿ ಉಚ್ಚರಿಸುವರು).

ಅಂತೂ ತ್ರಿಪದಿಗೆ ಈ ಲಕ್ಷಣ ಏರ್ಪಟ್ಟಿತು:

೫ । ೫॥* ೫ । ೫॥ (*ಯತಿ ಒಳಪ್ರಾಸ)

೫। ೪। ೪+ ೧॥ ೫।

೫। ೪। ೪+ ೧.

ಸರ್ವಜ್ಞಮೂರ್ತಿಗೆ ಈಚಿನ ತ್ರಿಪದಿಗಳೆಲ್ಲಾ ಸಾಮಾನ್ಯವಾಗಿ ಹೀಗಿರುವುವು:

ಉದಾ: ಷಡಕ್ಷರಿಯ ರಾಜಶೇಖರ ವಿಲಾಸ:

ಮದನಂಗೆ। ಜಯಮಕ್ಕೆ ॥ ಮಧುಗೆ ಸಂ । ಪದಮಕ್ಕೆ ।
ಬಿದುಗದಿ । ರಿಂತು । ನೆಲಸಿ : ರ್ಕೆ । ರತಿಗೆ ಸಂ।
ಮದಮೆಂದು । ತೊಲಗ । ದಿರುತಿ : ರ್ಕೆ ॥

(ii) ಈಗ ಹನ್ನೆರಡನೆಯ ಶತಮಾನದ ಮತ್ತು ಅದರ ಹಿಂದಿನ ಕಾವ್ಯಗಳನ್ನು ನೋಡೋಣ:

ಅಗ್ಗಳನ ಚಂದ್ರಪ್ರಭಪುರಾಣ:

೬ ೬
ಕೇಡನಾ। ಗೆಂದಾಗಂ॥ ಕೇಡೆಂದು। ವಿಪರೀತಂ।

ಮಾಡಿಯೆ। ನೆಗಟ್ಟಿ। ಜಡಜಂ : ತು॥ ಮೂಡಿ ಮು
ಟ್ಟಾಡುಗುಂ। ಜನ್ಮ ।ಜಡಧಿ : ಯೊಳ್ ॥ (೪–೫೪)
ಪೊನ್ನನ ಶಾಂತಿಪುರಾಣ:
೬ ೬
ಸಹಕಾರಾ। ಸಾರಾನೋ॥ ಕಹದ ಮ । ದ ಪಿಕನಿ॥
ವಹ ಭಾಷ। ಣಂಗ। ಳುಮೆಸೆದು : ವು ॥ ಕಿನ್ನರ । (ಳೆ?)
ಕುಹರಣ। ದೊಡನೆ ।ಸೆಣಸು : ತ್ತುಂ॥ (೨–೯೨)
ಮದನ ದಾ। ವಾಗ್ನಿಯಂ ॥ ನದಿಪೆ ಮಾ। ಡಿದ ಕಾಮ।
ನದಿಯೆನಿ। ಸುವುವು। ದಿವಿಜ:ದಂ। ಪತಿ ಶತ।
ದೊದವಿದ। ರತದ । ಪದನ : ಲ್ಲಿ॥ (೨–೯೩)
೬ ೪
ಎಯ್ದದ ಬಗೆಯನೆ ॥ ಮೆಯ್ದಪ್ಪಂ । ತೆನಿತು।
೪
ಮೆಯ್ದರೆ।ಮಧುವರ್ । ಬಂಧ : ರೂ । ಪಿಂಗಾ।
ಯ್ವೊಯ್ದನ್ನ । ನಪ್ಪ । ಪರಮ : ನಂ ॥ (೧೦–೯೧)
ಅಂತುಮಾ । ರೂಪನೆ ॥ ಚಿಂತಿಸಿ । ಚಿಂತಿಸಿ ।
ಕಾಂತೆಯರ್ । ಪತಿಗೆ । ರತಿಸೋ : ಲ್ತ । ಕೆಂದಳಿ।
ರಂತಲ ।ರ್ಗಣೆಗೆ ।ಡೊಣೆಯಾ : ದರ್ ॥ (೧೦–೯೨)
ಪಂಪನ ಆದಿಪುರಾಣ :
೬ ೬
ವರದತ್ತಂ । ಮೊದಲಾಗೆ ॥ ಧರಣೀಶ । ರವರ್ಗೆಲ್ಲಂ ।
೬
ಸುರಲೋಕಂ । ಸುವಿಧಿ । ಯೊಡನಾ : ದು । ದಂತುಟೆ ।
೪
ನೆರೆದ । ರನಿತೀ । ಸುರಲೋ : ಕಂ ॥ (೬–೧೪)
ಸುರಯಿಯೊಳ್ ।ಗಿಳಿ ಮಗು ॥ ಟ್ವಿರಗಿಳಿ । ಬಿರಯಿಗೆ ।
೪
ಮೊರೆವಂತೆ । ಮೊರೆವ । ಮಱೆದುಂ : ಬಿ । ತಳಿರೊಳ್
ಪರಭೃತಂ । ಮಗುಟ್ವಿ । ಪರಭೃ : ತಂ ॥ (೬–೧೦೦)

ಈ ತ್ರಿಪದಿಗಳಲ್ಲಿ ೫ ಮಾತ್ರೆಗಳ ಗಣದ ಓಟವಿಲ್ಲ; ಕೆಲವುಕಡೆ ೫ ಮಾತ್ರೆ ಇರಬೇಕಾದಲ್ಲಿ, ೬ ಆಥವಾ ೪ ಮಾತ್ರೆ ಕಾಣುತ್ತವೆ. ಇವು ಮಾತ್ರಾಗಣದ ಮೇಲೆ ಕಟ್ಟಿದುವಲ್ಲ; ಅಂಶಗಣದ ಮೇಲೇ ಕಟ್ಟಿದುವು; ಹೇಗೆಂದರೆ– ಗೆಂ.ದಾ. ಗಂ. । ವಿಪ . ರೀ. ತಂ। ಸಹ. ಕಾ. ರಾ । ಸಾ. ರಾ. ನೋ । ಮೆ. ಯ್ದ. ಪ್ಪಂ। ವರ. ದ. ತ್ತಂ । ವರ. ರ್ಗೆ. ಲ್ಲಂ । ಸುರ. ಲೋ. ಕಂ॥ ಇವೆಲ್ಲಾ ಮೂರಂಶದ ಗಣಗಳು: ಕಹ. ದ. ಮ । ವಹ. ಭಾ. ಷ। ವಾ. ಗ್ನಿ. ಯಂ । ಎ. ಯ್ದ. ದ । ಕಾಂ. ತೆ, ಯರ್ ।ಪರ. ಭೃ. ತಂ ॥ ಎಂಬುವೂ ಮಾತ್ರೆಯ ವಿವಕ್ಷೆಯಿಲ್ಲದೆ ಅಂಶದ ವಿವಕ್ಷೆಯಿಂದ ಮೂರಂಶದ ಗಣಗಳು. ಈ ತ್ರಿಪದಿಗಳಲ್ಲಿ ಎರಡಂಶ ಮೂರಂಶದ ಗಣಗಳು (ಎಂದರೆ, ಬ್ರಹ್ಮ, ವಿಷ್ಣುಗಳು) ಬೆರೆದಿವೆ.

ನಾಗವರ್ಮನು ಹೇಳಿರುವ ಲಕ್ಷಣ ಹೀಗಿದೆ:
ಬಿಸರುಹೋ । ದ್ಭವಗಣಂ ॥ ರಸದಶ । ಸ್ಥಾನದೊಳ್ ।
ಬಿಸರುಹ । ನೇತ್ರ । ಗಣಮೆ ಬ । ರ್ಕುಟಿದುವು ।
ಬಿಸರುಹ । ನೇತ್ರೇ । ತ್ರಿಪದಿಗೆ ॥ (೫–೨೪೮)

ಇದು– ವಿ । ವಿ ॥ ವಿ । ವಿ।

೬
ವಿ । ಬ್ರ । ವಿ । ವಿ ।
೧೦
ವಿ । ಬ್ರ । ವಿ॥
ಎಂದು ಹೇಳಿದ ಹಾಗಾಯಿತು.

ಮೇಲೆ ನಾವು ನೋಡಿದ್ದರಲ್ಲಿ ೬, ೧೦ ನೆಯ ಸ್ಥಾನದಲ್ಲಿ ನಿಯತವಾಗಿ ಬರುವುದಲ್ಲದೆ, ಬ್ರಹ್ಮಗಣ (ಎಂದರೆ ಎರಡಂಶದ ಗಣ) ಮಿಕ್ಕ ಕಡೆಯಲ್ಲೂ, ವಿಷ್ಣು ಎಂದರೆ ಮೂರಂಶದ ಗಣವಿರಬೇಕಾದಲ್ಲಿಯೂ ವಿಕಲ್ಪದಿಂದ ಬರಬಹುದಾಗಿದೆ: (೪ ಎಂದು ಗುರುತು ಮಾಡಿರುವ ತೆನಿ, ತು । ಪಿಂ. ಗಾ । ನೆರೆ. ದ। ತಳಿ, ರೊಳ್). ಇದಲ್ಲದೆ ಪುನರಾವೃತ್ತಿಯ ವಿಷಯವನ್ನೂ ನಾಗವರ್ಮನು ಎತ್ತಿಲ್ಲ. ಮತ್ತು ಅವನ ಪದ್ಯವನ್ನೂ, ಮೇಲೆ ಕೊಟ್ಟಿರುವ ಪದ್ಯಗಳಲ್ಲಿ ದಿವಿಜದಂ । ಬಂಧ ರೂ । ಯೊಡನಾದು । ಎಂಬ ಸ್ಥಳಗಳನ್ನೂ ನೋಡಿದರೆ, ಜನರ ಹಾಡಿನ ಧಾಟಿಯನ್ನು ಈ ಕವಿಗಳು ಗಮನಿಸಿದರೇ ಎಂಬ ಪ್ರಶ್ನೆ ಏಳುತ್ತದೆ. ಕೆಲವು ಕಡೆ ನಿಯತವಾದ ಯತಿಯನ್ನು ಮೀರಿದ್ದಾರೆ.

(iii) ಈಗ ಹಳಗನ್ನಡ ಕಾಲದ ಶಾಸನಗಳಲ್ಲಿ ದೊರೆತಿರುವ ಕೆಲವು ತ್ರಿಪದಿಗಳನ್ನು ಪರೀಕ್ಷಿಸೋಣ:

ಬಾದಾಮಿಯ ಶಾಸನ: ಸುಮಾರು ಕ್ರಿ.ಶ. ೭೦೦: (ಶಾಸನ ಪದ್ಯಮಂಜರಿ ೪. ಪು. ೨.)

ಸಾಧುಗೆ ಸಾಧು ಮಾಧುರ್ಯಂಗೆ ಮಾಧುರ್ಯಂ ।
ಬಾಧಿಪ್ಪ ಕಲಿಗೆ ಕಲಿಯುಗ । ವಿಪರೀತನ್
ಮಾಧವನೀತನ್ ಪೆಱನಲ್ಲ ॥

(ಗೆರೆಗಳು ಮೂಲದಲ್ಲಿದ್ದಂತೆ ಕೊಟ್ಟಿದೆ. ಎರಡನೆಯ ಪಂಕ್ತಿಯ ಗೆರೆ ಪುನರಾವೃತ್ತಿಯನ್ನು ಸೂಚಿಸುತ್ತದೆ.)

ಒಳ್ಳಿತ್ತ * । ಕೆಯ್ವೊರಾರ್ । ಪೊಲ್ಲದು । ಮದಱಂತೆ । * (ತ್ತನ್? ತ್ತು?)
ಬಲ್ಲಿತ್ತು । ಕಲಿಗೆ ।ವಿಪರೀ : ತಾ * । ಪುರಾಕೃತ * (ತಂ?)
ಮಿಲ್ಲಿಸಂ ।ಧಿಕ್ಕು । ಮದು ಬಂ : ದು ॥

ಕಟ್ಟಿದ । ಸಿಂಘಮನ್ । ಕೆಟ್ಟೊದೇ । ನೆಮಗೆಂದು
ಬಿಟ್ಟವೋಲ್ । ಕಲಿಗೆ । ವಿಪರೀತಂ । ಗಹಿತರ್ಕಳ್
ಕೆಟ್ಟರ್ ಮೇಣ್ । ಸತ್ತ । ರವಿಚಾರಂ ॥

ಷಿಕಾರಿಪುರದ ಶಾಸನ: ಸುಮಾರು ಕ್ರಿ.ಶ, ೧೦೭೧: (ಶಾಸನಪದ್ಯಮಂಜರಿ, ೩೦. ಪು, ೧೯)

ಮುಕ್ತಿ ಶ್ರೀಸತಿಗನು । ರಕ್ತಂ ಸಂಸಾರ ವಿ ।
ರಕ್ತಂ ನಿರ್ವಿಷಯ ನಿರಪೇಕ್ಷಂ ಶುಚಿಜೀವ ।
ನ್ಮುಕ್ತಂ ನಿರ್ವಾಣಿ ಗುಣಗಳ್ಳಂ ॥

ಅಱಿವಣ್ಮು ವೈರಾಗ್ಯಂ ।ತಱಿಸಲವಭ್ಯಾಸಂ ।
ನೆಱೆ ಭಕ್ತಿ ಶಾಂತಿ ಧೃತಿ ತುಷ್ಟಿಯೆಂಬಿವ ।
ಕೆಱೆವಟ್ಟಾಗಿರ್ದಂ ಗುಣಗಳ್ಳಂ ॥
(ಗೆರೆಗಳು ಮೂಲದಲ್ಲಿದ್ದಂತೆ ಕೊಟ್ಟಿದೆ. ಒಂದನೆಯ ಪಂಕ್ತಿಯ ಗೆರೆ ಯತಿಯನ್ನು ಸೂಚಿಸುತ್ತದೆ)

ಈ ತ್ರಿಪದಿಗಳೂ ಕಾವ್ಯಗಳ ತ್ರಿಪದಿಗಳಂತೆ ಅಂಶಗಣಗಳಿಂದ ಕಟ್ಟಿದುವು. ಇಲ್ಲಿಯೂ ಯತಿಯನ್ನು ಮೀರಿರುವುದು ಕಾಣುವುದು. ಮೊದಲನೆಯದರಲ್ಲಿ ಒಂದನೆಯ ಪಾದದಲ್ಲಿ ಒಳಪ್ರಾಸಕ್ಕೂ ಭಂಗ ಬಂದಿದೆ.

ಒಟ್ಟಿನ ಮೇಲೆ ಈ ವಿಮರ್ಶೆಯಿಂದ ತ್ರಿಪದಿ ಅಂಶಗಣದಿಂದ ಮಾತ್ರಾಗಣಕ್ಕೆ ತಿರುಗಿರುವುದೂ, ಅದರ ಯತಿ, ಒಳಪ್ರಾಸ, ಪುನರಾವೃತ್ತಿ ಮುಂತಾದ ಮುಖ್ಯ ಲಕ್ಷಣಗಳು ಈಗಲೂ ಉಳಿದಿರುವುದೂ ವ್ಯಕ್ತವಾಗದೆ ಇರಲಾರದು.

ಇದಲ್ಲದೆ, ಮೇಲೆ ೬. ೧೦ನೆಯ ಸ್ಥಳಗಳಲ್ಲಲ್ಲದೆಯೂ ವಿಷ್ಣುಗಣಕ್ಕೆ ಬದಲು ಬ್ರಹ್ಮಗಣ ಬಂದಿರುವುದನ್ನು, ಮತ್ತು ನಾವರ್ಮನ

ಚಿತ್ರ: (೫–೨೪೯)

ರು । ವಿ । ವಿ । ವಿ।
ವಿ । ಬ್ರ । ವಿ । ವಿ।
ವಿ । ಬ್ರ । ವಿ ॥

ಮತ್ತು ಚಿತ್ರಲತಿಕೆ : (೫– ೨೫೦)

ರು । ವಿ । ವಿ । ವಿ ।
ವಿ । ಬ್ರ । ವಿ । ವಿ।
ವಿ । ಬ್ರ । ರು ॥

–ಈ ಪದ್ಯಗಳ ಲಕ್ಷಣವನ್ನು ನೋಡಿದರೆ ಮೊದಲು ಮೊದಲು ತ್ರಿಪದಿಯ ವಿಷ್ಣುಗಳಿಗೆ ಬದಲಾಗಿ ಬ್ರಹ್ಮ ಅಥವಾ ರುದ್ರ ಗಣಗಳು ಬರಬಹುದಾಗಿದ್ದಿತೆಂದು ತೋರುತ್ತದೆ; ಸಂಗತಿ ಹಾಕಿ, ಹಾಡಿನ ಧಾಟಿ ಕೂಡಿಬಂದರೆ ಸರಿ.

ತ್ರಿಪದಿಯ ರಚನೆಯನ್ನು ನೋಡಿದರೆ ಇದು ಮೊದಲು ಎರಡು ಸಾಲಿನ ಹಾಡಾಗಿದ್ದು, ಈಗಿನ ಎರಡನೆಯ ಸಾಲಿನ ೩ನೆಯ ಗಣದಿಂದ ಕೊನೆಗಂಡು, ಆಮೇಲೆ ಮತ್ತೊಂದು ಮೂರಂಶದ ಗಣ ಸೇರಿ. ಎರಡನೆಯ ಪೂರ್ವದ ಪಾದ ಮತ್ತೊಮ್ಮೆ ಮಗುಚಿಬಂದು. ಮೂರು ಸಾಲಾಯಿತೆಂದು ಊಹಿಸಬಹುದಾಗಿದೆ.

ಹೇಗೆಂದರೆ: ೩ । ೩ ॥ ೩ । ೩ ।
೩ । ೩ । ೨ + ೧.
+೩
೩ । ೩ । ೨ + ೧.

ಈಗಲೂ ಈ ಮಟ್ಟನ್ನು ರಾತ್ರಿ ಕಾಲದಲ್ಲಿ ಬಂಡಿ ಹೊಡೆಯುವವರು ಹೇಳುವ ಪದಗಳಲ್ಲಿಯೂ ಲಾವಣಿಗಳಲ್ಲಿಯೂ ಗುರುತಿಸಬಹುದಾಗಿದೆ. ೩ನೆಯ ಗಣದ ಕೊನೆಯಲ್ಲಿ ನಿಲ್ಲಿಸಿ, ಪುನರಾವೃತ್ತಿ ಮಾಡುವುದಕ್ಕೆ ಈ ಉತ್ಪತ್ತಿ ಕಾರಣವಿಬಹುದು. ಪುನರಾವೃತ್ತಿಯಿಂದ ಮೊದಲನೆಯ ಪದ್ಯವನ್ನು ಎರಡು ಸಲ ಹೇಳಿದಂತಾಗುತ್ತದೆ.

ತಮಿಳಿನಲ್ಲಿ ಕುಱಳ್ ಮತ್ತು ವೇಣ್ಬಾವೃತ್ತಗಳನ್ನು ಹೋಲಿಸಿದರೆ ಈ ರಹಸ್ಯ ಮನದಟ್ಟಾಗುವುದು. ಇದನ್ನು ಮುಂದೆ ಹೇಳಲಾಗುತ್ತದೆ.

೨. ಅಕ್ಕರ.

ನಾಗವರ್ಮನು ೫ ಅಕ್ಕರಗಳನ್ನು ಹೇಳಿರುವನು: ಪಿರಿಯಕ್ಕರ, ದೊರೆಯಕ್ಕರ, ನಡುವಣಕ್ಕರ, ಎಡೆಯಕ್ಕರ, ಕಿಱೆಯಕ್ಕರ, ಇವಕ್ಕೆ ತೆಲುಗಿನಲ್ಲಿ ಕ್ರಮವಾಗಿ ಮಹಾಕ್ಕರ, ಮಧ್ಯಾಕ್ಕರ, ಮಧುರಾಕ್ಕರ, ಅಂತರಾಕ್ಕರ, ಅಲ್ಪಾಕ್ಕರ ಎಂದು ಹೆಸರು. (ಮಧ್ಯಾಕ್ಕರ, ಮಧುರಾಕ್ಕರ ಎಂಬ ಹೆಸರುಗಳು ಹೊಂದಿಕೆಯಿಲ್ಲ) ಇವುಗಳ ಲಕ್ಷಣ:

	ಹೆಸರು	**ಗಣ**	**ನಾಗವರ್ಮ**	**ಅಪ್ಪಕವಿ**	
೧.	ಪಿರಿಯಕ್ಕರ	೭	೧ಬ್ರ, ೫ವಿ, ೧ ರು.	೧ ಸೂ, ೫ ಇಂ, ೧ ಚ	ಯತಿ ೪ ನೆಯ ಗಣದ ಮುಂದೆ
೨.	ದೊರೆಯಕ್ಕರ	೬	೨ವಿ, ೧ಬ್ರ, ೨ವಿ, ೧ಬ್ರ		ಯತಿ ೩ ನೆಯ ಗಣದ ಮುಂದೆ

೩.	ನಡುವಕ್ಕರ	೫	೧ ಬ್ರ. ೩ ವಿ, ೧ ರು,	(ನಾಗವರ್ಮನಂತೆಯೇ: ಗಣಗಳಿಗೆ ಸೂರ್ಯ,	ಯತಿ ೩ ನೆಯ ಗಣದ ಮುಂದೆ
೪.	ಎಡೆಯಕ್ಕರ	೪	೧ಬ್ರ, ೨ ವಿ, ೧ರು,	ಇಂದ್ರ, ಚಂದ್ರ, ಎಂಬ ಸಂಕೇತ)	ಯತಿ ೨ ನೆಯ ಗಣದ ಮುಂದೆ
೫.	ಕಿಱೆಯಕ್ಕರ	೩	೨ವಿ, ೧ ರು		ಯತಿ ೨ ನೆಯ ಗಣದ ಮುಂದೆ

(ತಮಿಳಿನ ಆಶಿರಿಯ ವಿರುತ್ತಗಳಲ್ಲಿ ಕೆಲವನ್ನು ಇವು ಹೋಲುವುವು)

ಇವುಗಳಲ್ಲೆಲ್ಲಾ ಪಿರಿಯಕ್ಕರವೇ ಪ್ರಸಿದ್ಧ. ಮಿಕ್ಕುವು ಇನ್ನೂ ಎಲ್ಲಿಯೂ ಸಿಕ್ಕಿಲ್ಲ. ಪಿರಿಯಕ್ಕರದ ಲಕ್ಷಣವನ್ನು ನಾಗವರ್ಮನು ಈ ರೀತಿ ಹೇಳಿದ್ದಾನೆ:

ಬ್ರ ವಿ ವಿ ವಿ ವಿ ವಿ ರು
ಮೊದಲೊ । ಳಜಗಣಂ। ಕುಂದದೆ। ಬರ್ಕತ್ತು। ಮಯ್ದುಗ। ಣಂಗಳೆ । ವಿಷ್ಣುವಕ್ಕುಂ।
ಬ್ರ ಬ್ರ ವಿ ವಿ ವಿ ವಿ
ತುದಿಯೊ । ಳೆಂಬಾ । ತಾಣದೊ । ಳೆಲ್ಲಿಯುಂ । ಕಂದರ್ಪ । ರಿಪುಗಣಂ । ನೆಲಸಿ ನಿಲ್ಕೆ ।
ಪದದೊ । ಳೆರಡೆಂಬ । ಸಂಖ್ಯೆಯೊ । ಳಾಱಱೊ । ಳಜಗಣಂ । ಸಮವಾಯ । ಮಪ್ಪೊಡಕ್ಕುಂ।
ಸದಮ । ಳೇಂದು ನಿ । ಭಾನನೆ । ನಾಕಿಗ । ನಿಷ್ಪದಿ । ನಿಂತಿದು । ಪಿರಿಯಕ್ಕರಂ ॥

ಇಲ್ಲಿ ಸಾಮಾನ್ಯ ಲಕ್ಷಣವಾದ 1 ವ್ರ. 5 ವಿ. 1 ರು. ಎಂಬುದರ ಜೊತೆಗೆ ಕೆಲವು ಕಡೆ ವಿಷ್ಣು ಗಣಕ್ಕೆ ಬದಲು ಬ್ರಹ್ಮಗಣ ಬರಬಹುದೆಂದು ಹೇಳಿದೆ. ಆದರೆ ಎಲ್ಲಿ ಎಂಬುದು ಸ್ಪಷ್ಟವಿಲ್ಲ. ಮೂರನೆಯ ಪಾದದ ಪಾಠ ಕೆಟ್ಟಿದೆ. ಪಾಠಾಂತರಗಳು : ಸಂಖ್ಯೆಯೊಳ್ ನಾಲ್ಕಱೊಳಜಗಣಂ[1] ಪದಾಂತ್ಯದೊಳೆರಡೆಂಬ ಸಂಖ್ಯೆಯೊಳಂ ಜಗಣಂ– ಎಂದಿವೆ. (ಛಂದೋಂಬುಧಿ, ಕಾವ್ಯಕಲಾನಿಧಿ ಪ್ರಕಟನೆ, ಪುಟ 75). ಎರಡು ನಾಲ್ಕನೆಯ ಗಣಗಳಲ್ಲಿ ಬ್ರಹ್ಮಗಣ ಬರಬಹುದೋ, ಅಥವಾ ಎರಡು, ಆರರಲ್ಲಿಯೋ ಸ್ಪಷ್ಟವಿಲ್ಲ; ಅಥವಾ ಪ್ರತಿಪಾದದಲ್ಲಿಯೋ, ಎರಡನೆಯ ಪಾದದಲ್ಲಿ ಮಾತ್ರವೋ ಅದೂ ಸ್ಪಷ್ಟವಿಲ್ಲ; ತ್ರಿಪದಿಯಲ್ಲಿ ಹೇಗೋ ಹಾಗೆ ಅಕ್ಕರದಲ್ಲಿಯೂ (ಹಾಡಿನ ಧಾಟಿ ಕೂಡಿಕೊಂಡರೆ ಸರಿ) ವಿಕಲ್ಪವಾಗಿ ಎಲ್ಲಾದರೂ ಬರಬಹುದೆಂದು ಹೇಳಬಹುದೆ? ವಿಚಾರಮಾಡಬೇಕು.

ಜೈನಕಾವ್ಯಗಳಲ್ಲಿ ಒಂದೆರಡು ಪಿರಿಯಕ್ಕರಗಳಿರುವುದುಂಟು : ಇವುಗಳನ್ನು ಯಾವ ಧಾಟಿಯಲ್ಲಿ ಅನ್ನುತ್ತಿದ್ದರೋ ತಿಳಿಯದು. ಕೆಳಗೆ ಕೆಲವನ್ನು ಕೊಟ್ಟು ಗಣ ವಿಭಾಗ ಮಾಡಿದೆ.

ಪಂಪನ ಆದಿಪುರಾಣ:

ಬ್ರ ವಿ ವಿ ವಿ ವಿ ವಿ ರು
ಈಗಳ್ । ನೀನಿರ್ದು । ನೋನಿಸೆ । ನೋಂತು ಮ । ಹಾಬಳಂ । ಲಲಿತಾಂಗಂ । ವಜ್ರಜಂಘಂ ।
ಬ್ರ
ಭೋಗ । ಭೂಮಿಜಂ । ಶ್ರೀಧರ । **ದೇವಂ** । ಸುವಿಧಿ ನ । ರಾಧಿಪ । ನಚ್ಯುತೇಂದ್ರಂ ।
ಬ್ರ
ಸಾಗ । **ರಾಂತಂ** । ನೆಲನೆನಿ । ತನಿತುಮಂ । ಚಕ್ರದಿಂ । ಬೆಸಕೆಯ್ಸಿ । ವಜ್ರನಾಭಿ ।

ಬ್ರ
ಯಾಗಿ । ಸರ್ವಾರ್ಥ । ಸಿದ್ಧಿಯೊಳ್ । **ಪುಟ್ಟಿ** । ಭರತದೊ । ಳಿನ್ನಾದಿ । ದೇವನಪ್ಪೊಂ ॥ (೨–೪೪)

ಇಲ್ಲಿ ಎರಡನೆಯ ಪಾದದ ನಾಲ್ಕನೆಯ ಗಣ, ಮೂರನೆಯ ಪಾದದ ಎರಡನೆಯ ಗಣ, ನಾಲ್ಕನೆಯ ಪಾದದ ನಾಲ್ಕನೆಯ ಗಣ, ವಿಷ್ಣುವಿಗೆ ಬದಲಾಗಿ ಬ್ರಹ್ಮವಾಗಿದೆ.

ಬ್ರ ಬ್ರ
ನಿಜತ । ನೂಭವ । **ರೈಸಾ** । **ಸಿರ್ವರ್** । ಪದಿನಾಱು । ಸಾಸಿರ್ಬರ್ । ಮಕುಟಬದ್ಧರ್ ।

---

[೧] ಅಪ್ಪಕವಿಯಲ್ಲಿ ಎರಡು, ನಾಲ್ಕು ಎಂದು ಹೇಳಿದೆ.

ನಿಜಲ । ತಾಂಗಿಯ । ರಯ್ವತ್ತು । ಸಾಸಿರ್ವ । ರೆಣ್ಬರು । ಮಣುಗಿನ । ಸೋದರರ್ಕಳ್ ।
ನಿಜಸ । ಹಾಯಂ ಗೃ । ಹಪತಿ ರ । ತ್ನಂ ಧನ । ದೇವನಂ । ಬೆರಸಾಗಳ್ । ವಜ್ರನಾಭಿ ।
ನಿಜದ । ರೂಪುಮಂ । ನಿರ್ಗ್ರಂಥ । ರೂಪುಮಂ । ಕೈ ಕೊಂಡೇ । ನೆಗಟ್ದನಿಂ । ತೀಮಾಟ್ಕೆಯಿಂ (೬-೨೭)

ಇಲ್ಲಿ ಮೊದಲನೆಯ ಪಾದದ ಮೂರು ನಾಲ್ಕನೆಯ ಗಣಗಳು ಬ್ರಹ್ಮ.
ಪಂಪಭಾರತ ೫ನೆಯ ಆಶ್ವಾಸ: ೨೬, ೪೧, ೪೩, ೪೬, ೪೭–
೨೬, ಎರಡನೆಯ ಪಾದ:
ಪು. ಟ್ಟಿ । ದಾ. ನೆ. ಯ । ನಾ. ನೆ. ಗಳ್. । ಗೆಲೆ.ವ.ರೆ. । ಕುದು.ರೆ.ಗಳ್.। ಕುದು.ರೆ.ಯಂ.।
ಕೀ.ಱ್ಮಾಡೆ॥
ಇದನ್ನು 'ಕೀ. ಱ. ಮಾ. ಡೆ.' ಎಂದುಚ್ಚರಿಸಬೇಕಾಗಿದೆ : ಇಲ್ಲದಿದ್ದರೆ ವಿಷ್ಣುವಾಗುತ್ತದೆ.
೪೩, ಎರಡನೆಯ ಪಾದ :
ಪುಗಿಲಂ । **ಪೋಗಂ** । ಬಾರಿಯಂ । ಸನ್ನೆಯಂ । ನೂಱುವ । ಮರ್ಚುವ । ನಿಲ್ವೆಡೆಯಂ ।
ಇಲ್ಲಿ ಎರಡನೆಯ ಗಣ ಬ್ರಹ್ಮ.
ನಾಲ್ಕನೆಯ ಪಾದ :
ಬಗೆದಾಗ । ಳರಸರೊ । ಳೆಲ್ಲ ಕೇಳ್ । ನೀಂ ಬಲ್ಲೆ । ಬೇಂಟೆಕಾ । ಱರೊಳೆಲ್ಲಂ । ಮಾನೆ ಬಲ್ಲೆಂ॥
ಇಲ್ಲಿ ಮೊದಲನೆಯ ಗಣ ಬ್ರಹ್ಮಕ್ಕೆ ಬದಲು ವಿಷ್ಣು.
೪೬, ನಾಲ್ಕನೆಯ ಪಾದದಲ್ಲಿಯೂ ಹೀಗೆಯೇ ಇದೆ :
ಸಿಲೆಯ ಮೇ । ಲಾದೊಡಂ । ಶಕುನಮಂ । ನಿಜೆಪಂತೆ । ನಿಜೆಸುವೆಂ । ಪಂದಿಯಂ । ನೀಂ
ಮೆಚ್ಚಲುಂ॥
೪೭, ನಾಲ್ಕನೆಯ ಪಾದ :
ಬಸನಮೆಂ । ದಜೆಯದೇ । **ಳಿಸುವರ್** । ಬೇಂಟೆಯಂ । ಬೇಂಟೆಯೆ । ಬಿನದಂಗ । **ಳರಸಲ್ತೇ** ॥
(ಅರಸನಲ್ತೇ)
೭ ನೆಯ ಆಶ್ವಾಸ, ೨೮ :
ಪಿರಿಯ ಮ । ರಂಗಳೆ । **ಮಾಡ** । **ಮಾಗೆ** । ಪೊಳೆವೆಳ । ದಳಿರ್ಗಳೆ । ಸೆಜ್ಜೆಯಾಗೆ ।
ಪಿರಿಯ । ಮಡುಗಳೆ । ಮಜ್ಜನ । **ಮಾಗೆ** । ಪೊಸನಾರೆ । ದೇವಾಂಗ । ವಸ್ತ್ರಮಾಗೆ ।
ಪರೆದ ತ । ಱಗೆಲೆಯೆ । ಪರಿಯಣ । **ಮಾಗೆ** । ಪಣ್ಪಲ । ಮೆತ್ತಿದ । ಬೋನಮಾಗೆ ।
ಸಿರಿಯ । ಮಹಿಮೆಯಂ । ಮೆಱೆಯಲೇ । ನಾರ್ತುದೋ । ಬನದೊಳಿ । **ರ್ಪಿರವಾ** । ಪಾಂಡವರಾ॥
ಇಲ್ಲಿ ಮೊದಲನೆಯ ಗಣ ವಿಷ್ಣುವಾಗಿರುವುದೂ, ೩, ೪, ೬ ರಲ್ಲಿ ಬ್ರಹ್ಮವಿರುವುದೂ ಕಾಣುತ್ತದೆ. ಮೂರನೆಯ ಪಾದದಲ್ಲಿ, ಪರೆದ । **ತಱ. ಗೆ. ಲೆ. ಯೆ** । ಎಂದು ವಿಭಾಗಮಾಡಿದರೆ ೨ನೆಯ ಗಣ ರುದ್ರವಾಗುತ್ತದೆ.
ಪೊನ್ನನ ಶಾಂತಿಪುರಾಣ : ೧೦ನೆಯ ಆಶ್ವಾಸ, ೯, ೬೬, ೬೭, ೮೭–
೯ನೆಯ ಪದ್ಯದಲ್ಲಿ :
ನಿಡಿಯ । ಬಳ್ಳಿಯ । ತುಱುಗೆವೆ । ಗಣ್ಗಳಂ । ಕೆನ್ನೆಯ । ನೆಯ್ದಿದ । ಪುರ್ವುಗಳಂ ।
ಪೊಡವಿ ।ಷಟ್ಖಂಡ । ಕ್ಕಡಿಯಿಡು । ವಡಿಗಳಂ । **ತೊಳಗಿ** । ಬೆಳಗುವ । ಪೆಱನೊಸಲಂ॥
ಇಲ್ಲಿ ೫ನೆಯ ಗಣದಲ್ಲಿ ಬ್ರಹ್ಮ.
೬೭ನೆಯ ಪದ್ಯದಲ್ಲಿ– ಎರಡನೆಯ ಪಾದ :
ಮುದದೆ । **ತಲೆಯೊಳ್** । **ಪೊತ್ತಂ** । ತಿರ್ಪುವು । ಮೇರುವೆಂ । ತಂತತಿ । ವಿಭಕ್ತಂ (ಗಳ್?)
ಇಲ್ಲಿ ೨, ೩ನೆಯ ಗಣಗಳಲ್ಲಿ ಬ್ರಹ್ಮ.
೮೭ ನೆಯ ಪದ್ಯದಲ್ಲಿ– ಒಂದನೆಯ ಪಾದ :
ನಡೆಯೆ । **ನಡೆದುಂ** । ಕುಳ್ಳಿರೆ । ಕುಳ್ಳಿರ್ದುಂ. ..
ಕಾದಂಬರಿಯಲ್ಲಿ : ೫೪೯, ೫೫೨, ೫೬೬:
೫೪೯. ೧ **ಧೀರನ** । ಪ್ಪನುಮಂ ಹಾ । ಸ್ಯಂ ಮಾಟ್ಪಿಳ್ । **ಮರುಳೆಂಬಿನಂ** (ರುದ್ರ?)।

ಪಾವೆಂದು । ದಾಂಟುವ । ಳಭಿಜಾತನಂ ।

೩ ಭಾರ । ತೀಶನಂ । **ಸೋಂಕಳ್**. . . . .

೫೫೨. ೩, ೪– ಮಿಸುಪ । ಚಿತ್ರಕ್ಕೆ ।ಕಂದಿಪ । ಕರ್ರ್ವೊಗೆ । ಧರ್ಮವೆಂ । ಬಿಂದು । ಮಂಡಲಕ್ಕೆ ।

ಮುಸುಕುವ । ಕಾಳರಾ । ಹುವಿನ ನಾ । ಲಗೆಯೆನಿ । ಪ ಸಿರಿಯಂ । ಬಣ್ಣಿಪಂ । ಗಾಂಪನಲ್ತೇ ॥

ಪಂಪರಾಮಾಯಣ : ೬, ೭೩ :

ಸಾವ । ಪುಟ್ಟುವ । ಭಯಮಮಂ ಸಂ । ಸಾರಮಂ । ಸಪ್ತಧಾ । ತುಜಮಂ ದೇ । ಹಸ್ಥಿತಿಯ ।
ನಾವ । ವಸ್ತುವ । ನುಂಡೊಡಂ । ತಣಿಯದ । ಕಾಂಕ್ಷೆಯಂ । ಬಗೆದು ತನ್ನೊ ।
ಳೇವು । ದೀತೊಡ । ರ್ಪೆನಗಿದೇ । ಕೆಂದು ದ । ಶರಥಂ । ಭಾವಿಸಿ । ಭಾವಿತಾತ್ಮಂ ।
ಭಾವಿ । ತಾತ್ಮನಂ । ಪರಮಯೋ । ಗೀಂದ್ರನಂ । ಬೀಳ್ಕೊಂಡ । ಯೋಧ್ಯೆಗೆ । ಬಂದನಾಗಳ್ ॥

ಇಲ್ಲಿ ಎರಡನೆಯ ಪಾದದಲ್ಲಿ ಆರೇ ಗಣಗಳಿವೆ : ಒಂದು ಗಣ ಬಿಟ್ಟು ಹೋಗಿದೆಯೋ ಹೇಗೋ? ಮೂರನೆಯ ಪಾದದಲ್ಲಿ ೫ರಲ್ಲಿ ಬ್ರಹ್ಮ.

ಅಗ್ಗಳನ ಚಂದ್ರಪ್ರಭಪುರಾಣ : ಆಶ್ವಾಸ ೪, ೧೮ :

ತೊಱೆಯಲೆಂ । ದಿರ್ಪ ರಾ । ಜ್ಯಮನಾಳು । ತಿರ್ದು೦ । ಮಱೆಯಲೆಂ । ದಿರ್ದ ಬಂ ।
ಧು ಸಮೂಹಮಂ।
ನೆಱಪ । ಲೆಂದಿರ್ದ । ಸತ್ತಪೋ । ವೃತ್ತಿಯಂ । ಮಱೆದಂತೆ । ರಾಗ ವಿ । ಹ್ವಳತೆಯಿಂದಂ ।
ತೊಱೆಯದೆ । ಮಱೆಯದೆ । ನೆಱಪದಾ । ಯುಷ್ಯಂ । ಪಱೆಪಡು । ವಾಗಳೆ । ಬೆರ್ಚಿದಂತೆ ।
ಮಱುಗುವ । ಮರುಳಿಂ । ಗಾರಯ್ವ । ವಿಭವಂ । ಮಱುಭವಂ । ನಾಡೆಯುಂ । ವ್ಯರ್ಥಮಲ್ತೇ॥

ಶಾಸನಗಳಲ್ಲಿಯೂ ಪಿರಿಯಕ್ಕರವುಂಟು : ಉದಾಹರಣೆಗಾಗಿ ಶ್ರವಣಬೆಳ್ಗೊಳ (ಎರಡನೆಯ ಮುದ್ರಣ– ೧೩೩, ಪುಟ ೬೧.)

ಒಳಗಂ । ದಕ್ಷಿಣ । ಸುಕರ ದು । ಷ್ಕರಮಂ । ಪೊಱಗಣ । ಸುಕುರ ದು । ಷ್ಕರ ಭೇದಮಂ ।
ಒಳಗೆ । ವಾಮದ । ವಿಷಮಮ । ನಲ್ಲಿಯ । ವಿಷಮ ದು । ಷ್ಕರಮ ನ್ನಿ । ನ್ನದಱಪೊಱಗ । (?)
ಗ್ಗಳಿಕೆ । ಯೆನಿಪತಿ । ವಿಷಮಮ । ನದಱಿತಿ । ವಿಷಮ ದು । ಷ್ಕರಮೆಂಬ । ದುಷ್ಕರಮಂ ।
ಎಳೆಯೊ । ಳೊರ್ವನೆ । ಚಾರಿಸಲ್ । ಬಲ್ಲಂ ನಾ । ಲ್ಕು ಪ್ರಕ । ರಣಮುಮ । ನಿಂದ್ರರಾಜಂ ॥

ಒಟ್ಟಿನ ಮೇಲೆ ಪಿರಿಯಕ್ಕರದ ಲಕ್ಷಣವನ್ನು ಹೀಗೆ ಹೇಳಬಹುದೆಂದು ತೋರುತ್ತದೆ : ನಾಲ್ಕು ಪಾದ: ಪ್ರತಿ ಪಾದದಲ್ಲಿಯೂ ಏಳು ಗಣ : ಮೊದಲು ಬ್ರಹ್ಮ, ಆಮೇಲೆ ಐದು ವಿಷ್ಣು: ಕೊನೆಯಲ್ಲಿ ಒಂದು ರುದ್ರ : ವಿಷ್ಣುವಿಗೆ ಬದಲಾಗಿ ಹಾಡಿಗೆ ಹೊಂದಿ ಬ್ರಹ್ಮ ಬರಬಹುದು : ಮೊದಲನೆಯ ಬ್ರಹ್ಮಕ್ಕೆ ಅಪೂರ್ವವಾಗಿ ವಿಷ್ಣು ಬರಬಹುದು: ಕೊನೆಯ ರುದ್ರ ನಿತ್ಯ. ನ್ಯಾಯವಾಗಿ ನೋಡಿದರೆ ಒಂದನೆಯ ಮತ್ತು ನಾಲ್ಕನೆಯ ಗಣದ ಮುಂದೆ ಯತಿ.

ಅಕ್ಕರದ ಇತರ ಪ್ರಭೇದಗಳು : ನಾಗವರ್ಮನು ಹೇಳಿರುವ ಅಕ್ಕರಿಕೆ, ಮದನವತಿ, ಛಂದೋವತಂಸ, ಚೌಪದಿ, ಗೀತಿಕೆ, ಸಾಂಗತ್ಯ, ಏಳೆ– ಇವು ಏಳೂ ಅಕ್ಕರದ ಪ್ರಸ್ತಾರದೊಳಗೇ ಸೇರುತ್ತವೆ. ನಾಗವರ್ಮನ ಹೊರಗೆ ಈ ವೃತ್ತಗಳು ಸಿಕ್ಕದಿರುವುದರಿಂದ, ಅವನು ಕೊಟ್ಟಿರುವ ಲಕ್ಷಣಪದ್ಯಗಳನ್ನೇ ಇಲ್ಲಿ ಕೊಟ್ಟು ಗಣವಿಭಾಗ ಮಾಡಿದೆ.

(i) ಅಕ್ಕರಿಕೆ

ಮುರರಿಪು । ಬೊಮ್ಮಂ ॥ ಮುರರಿಪು । ಬೊಮ್ಮಂ ॥ ಮುರರಿಪು । ಶೂಲಧರಂ ॥
ಸರಸದೆ । ನಿಲ್ಕುಂ ॥ ಖರಗಣ । ಮಕ್ಕುಂ ॥ ಸುರುಚಿರ । ಮಾತ್ರೆಗಳಿಂ ॥
ನಿರುಪಮ । ದಿಂದಂ । ಪರಿಮಿತ । ಮಪ್ಪಂ ॥ ತಿರೆ ಯತಿ । ಋತುನಿಯತಂ ॥
ಬರೆ ತರ । ಳಾಕ್ಷೀ ॥ ಧರೆಯೊಳಿ । ದೆತ್ತಂ ॥ ಕರಮೆಸೆ । ವಕ್ಕರಿಕೇ ॥

ಮೂರನೆಯ ಪಾದದಲ್ಲಿ ಪಾಠಾಂತರ : ಯತಿ ರುತುಶರದೊಳ್, ಯತಿ ಷಟ್‌ಶರದೊಳ್, ಈ ಪಾಠಾಂತರದ ಸಂದೇಹದ ಸ್ಥಾನವನ್ನು ಬಿಟ್ಟರೆ, ಅಕ್ಕರಿಕೆ ಸಮಪಾದವೃತ್ತದ ಹಾಗೆ ಕಾಣುತ್ತದೆ. ಮಾತ್ರಾಗಣ ಬದ್ಧವಾಗಿಯೂ ತಿರುಗಿದೆ. ಇದರ ಲಕ್ಷಣವೇನೋ–

೪ ೪ ೪ ೪ ೪ ೬

ವಿ । ಬ್ರ ॥ ವಿ । ಬ್ರ ॥ ವಿ । ರು ॥ (ನಿಯತವಾದ ಗಣಗಳು ಮಾತ್ರ).

ಕಡೆಯ ರುದ್ರ ಗಣವನ್ನು ೪+೨ ಎಂದು ಒಡೆದು, ಒಟ್ಟಿನ ಮೇಲೆ ನಾಲ್ಕು ಮಾತ್ರೆಯ ಆರು ಗಣಗಳು ಕಡೆಯಲ್ಲಿ ಒಂದು ಗುರು ಎಂದು ಹೇಳಬಹುದು. ಎರಡೆರಡು ಗಣಕ್ಕೆ ಯತಿ ಮತ್ತು ಒಳಪ್ರಾಸ ಮುಖ್ಯ.

(ii) ಮದನವತಿ

ಮದನನ । ತಂದೆಯ । ಗಣಮವು । ವಿಷಯದೊ । ಳಿರೆ ಗುರು : ಮುಂ ।
ದೊದವಿರೆ । ಪದದೊಳ । ಮದಜಿವೊ । ಲಪ್ಪುದು । ಹರಪದ : ಮುಂ ।
ವಿದಿತಮು । ಪೇಂದ್ರ ಚ । ತುಷ್ಟಯ । ದತ್ತಲ ।ಬುಜವದ : ನೇ ।
ಮದನಹ । ರತ್ರಯ । ದಿಂ ಹರಿ । ಕಡೆಪಡೆ । ಮದನವ : ತೀ ॥
ಇಲ್ಲಿ ಮೂರು ರೀತಿಯಲ್ಲಿ ನಾಗವರ್ಮನು ಗಣವಿಭಾಗವನ್ನು ಸೂಚಿಸಿರುವನು.
೫ ವಿ + ೧ ಗು, ೪ ವಿ + ೧ ರು (ರು=೧ ವಿ + ೧ ಗು)
೩ ರು + ೧ ವಿ :
ಮದನಹರ । ತ್ರಯದಿಂ ಹರಿ । ಕಡೆಪಡೆ ಮ । ದನವತೀ ॥

ಲಕ್ಷಣ ಪದ್ಯದಿಂದ ಮಾತ್ರಾಗಣಗಳೂ ಆಗಿರಬೇಕೆಂದು ತೋರುತ್ತದೆ. ೪ ಮಾತ್ರೆಯ ೫ ಗಣಗಳು + ೧ ಗುರು.

(iii) ಛಂದೋವತಂಸ

ಮಂದರ । ಧರಗ । ಣಮೆಸೆ । ದಿರೆ ಮೊ । ದಲೊಳೆ ।
ಬಂದಿರೆ । ಯುಂ ನಾ । ಲ್ಕೆಡೆ ಬಿ । ಸರುಹ । ಜನ್ಮಂ ।
ಸಂದುದು । ಲಕ್ಷ । ಣಮವ । ನಿಯೊಳೀ । ತೆಱದಿಂ ।
ಛಂದೋವ । ತಂಸ । ಕ್ಕೆಸೆದು । ದು ಗಜ । ಗಮನೇ ॥
೧ ವಿ । ೪ ಬ್ರ. ಮಾತ್ರಾಗಣಗಳಲ್ಲ.

(iv) ಚೌಪದಿ

ಮದನನ । ತಂದೆಯ : ಮುಂ ।
ದುದಯಿಸೆ । ಶಂಕರ : ನೊ ।
ಳ್ದೊದವಿರೆ । ಸಂದುದು : ನೋ ।
ಡಿದೆ ಸತಿ । ಚೌಪದಿ : ಗೆ ॥
೧ ವಿ + ೧ ರು : ಮಾತ್ರಾಗಣ : ೪ + ೪ + ೨.

ಒಟ್ಟಿನ ಮೇಲೆ ಹೇಳುವುದಾದರೆ, ನಾಲ್ಕು ಬಗೆಯ ವೃತ್ತಗಳಲ್ಲಿಯೂ ಅಕ್ಕರದಂತೆಯೇ, ನಾಲ್ಕು ಪಾದಗಳೂ, ಬ್ರಹ್ಮ ವಿಷ್ಣು ರುದ್ರ ಗಣಗಳ ಸೇರಿಕೆಯೂ, ತ್ರಿಪದಿಯಂತೆ ವಿಶೇಷಲಕ್ಷಣವಾಗಿ ಅಲ್ಲಲ್ಲಿ ಯತಿ ಒಳಪ್ರಾಸಗಳೂ, ಮಾತ್ರಾಗಣಕ್ಕೆ ತಿರುಗುತ್ತಿರುವ ತಿದ್ದುಪಾಟೂ ಕಾಣುವುವು.

(v) ಗೀತಿಕೆ

ಎರಡಱೊ । ಳಾಱಿಂ । ಬ ಸಂಖ್ಯೆಯೊಳ್ । (ಬಾ?)
ಬರೆ ಪದ್ಮ । ಭವನುಟೆ । ದುವು ಮೆ । ಚ್ಚುವ ತೆಱದಿಂ ।
ದಿರೆ ಮುಂ । ದಣ ಪ । ದಂ ಮುನ್ನಿನಂ ।
ತಿರೆ ಕರಂ । ಗೀತಿಕೆ । ಯಿಂತ । ಕ್ಕುಂ ಸಖೀ ॥

ಎರಡನೆಯ ಪಾದದಲ್ಲಿ "ಬರೆ ಬ್ರಹ್ಮನುಳಿದೆಡೆಗಳೊಳು ವಿಷ್ಣುಮುಂ" ಎಂದೂ ಮೂರನೆಯ ಪಾದದಲ್ಲಿ "ಒಪ್ಪುವ ಗೀತಗಣಂ", "ಗೀತಿಕೆಗೇಳುಗಣಮಕ್ಕುಂ" ಎಂದೂ ಪಾಠಾಂತರಗಳಿವೆ.

ಇದ್ದಹಾಗೆ ನೋಡಿದರೆ :

೨

ವಿ । ಬ್ರ । ರು ।

೬
ವಿ । ವಿ । ಬ್ರ । ರು ।
೨
ಬ್ರ । ಬ್ರ । ರು ।
೬
ವಿ । ವಿ । ಬ್ರ । ವಿ. (ರು?)

ಏಳೇಳು ಗಣದ ಎರಡು ಪಾದ ಮಾತ್ರ, ನಾಲ್ಕನೆಯ ಗಣದಲ್ಲಿ ಒಳಪ್ರಾಸ, ಕಡೆಯಲ್ಲಿ ರುದ್ರ, ಮಿಕ್ಕ ಕಡೆ ವಿಷ್ಣು, (ರುದ್ರ ಪರ್ಯಾಯಗಣ) ೨, ೬, ರಲ್ಲಿ ಬ್ರಹ್ಮ ಎಂದು ಹೇಳಬಹುದೆ? ಗೀತಿಕೆ ಎಂಬುದರಿಂದ ಸಾಂಗತ್ಯ ಸಂಬಂಧಿಯಾಗಿರಬಹುದೆ?

(vi) ಸಾಂಗತ್ಯ

ಗೀತಿಕೆಯ ಎರಡು ಪಾದಗಳ ಅಥವಾ ಪಿರಿಯಕ್ಕರದ ಎರಡು ಪಾದಗಳ ರೂಪಾಂತರವೇ ಸಾಂಗತ್ಯವಾಗಿ ತೋರುವುದು. ಇದು ಮೊದಲು ನಮ್ಮ ದೃಷ್ಟಿಗೆ ಬೀಳುವುದು ಶಿಶುಮಾಯಣನ ಕಾವ್ಯಗಳಲ್ಲಿ (೧೨೩೩? ಕವಿಚರಿತೆ, ಪುಟ.೩೪೯-೩೫೨). ಈಚೆಗೆ ಭರತೇಶವೈಭವ, ಹದಿಬದೆಯ ಧರ್ಮ ಮುಂತಾದ ಗ್ರಂಥಗಳಲ್ಲಿ ಪ್ರಯೋಗವಾಗಿದೆ. ಹೆಂಗಸರ ಹಾಡುಗಳು ಬಲುಮಟ್ಟಿಗೆ ಈ ವೃತ್ತದಲ್ಲಿವೆ.

ಸಾಂಗತ್ಯದಲ್ಲಿ ಏಳು ಗಣದ ಪಾದ ಎರಡಾಗಿ ಒಳಪ್ರಾಸವನ್ನು ಕೊಂಡು, ೪ ಗಣ + ೩ ಗಣವಾಗಿದೆ. ಒಟ್ಟು ನಾಲ್ಕು ಪಾದಗಳು, ಪ್ರಾಸ : ವಿಷ್ಣುವಿಗೆ ಪರ್ಯಾಯವಾಗಿ ಬಗರಹ್ಮ- ಇದು ಲಕ್ಷಣ. ಗಣಗಳು ಮಾತ್ರಾಗಣಕ್ಕೆ ತಿರುಗಿಲ್ಲ. ಗಣವಿಭಾಗಮಾಡುವಾಗ ಶಬ್ದಸ್ವರೂಪಕ್ಕೂ ಅರ್ಥಸ್ಫೂರ್ತಿಗೂ ಗಮನ ಕೊಡಬೇಕು. ಬೇಕಾದ ಕಡೆ ಲಘುವನ್ನು ಎಳೆದು ಗುರು ಮಾಡಿ, ಗುರುವನ್ನು ಕುಗ್ಗಿಸಿ ಲಘುಮಾಡಿ ಹಾಡಬೇಕು.

ಶಿಶುಮಾಯಣ :-

ಶಕವರ್ಷ । ದ ಸಾ । ವಿರದ ನೂ ।ಐಜೊಳು ॥ ತ್ಸಕಲವಾ । ದಾಋ ವ । ತ್ಸರದ ॥
(ಶಕವ । ರ್ಷದ ಸಾವಿ । ರದ ನೂ?।)
ಪ್ರಕಟಿತ । ಪುತ್ರವ । ರ್ಷದ ಮಾಘ । ಶುದ್ಧ ದಿ ॥ ನಕಳಂಕ । ಪಾಡ್ಯದೊ । ಳಾಯ್ತು ॥
ರನ್ನನ । ಹೊನ್ನನ । ಜನನಮ । ಯ್ಯನ ಚತು ॥ ರೋನ್ನತ । – ᴗ
ᴗ ಕವಿತಾರ್ಣ । ವ ನ ॥ (ಕವಿತಾ । ರ್ಣವನ?)
ಸನ್ನುತ । ಕವಿ ಪಂಪ । ರಾಜ ಮೊ । ದಲಾ.ದ.ರ ॥ ಚೆನ್ನಡಿ । ಗಳಿಗೆಱ ।ಗುವೆನು ॥
–
ಅಂಜನಾ । ಚರಿತವೆಂ । ದೆಂಬನಾ । ಮವು ಕೃತಿ ॥ ಗೆಂಜಲ । ಲ್ಲನ್ವರ್ಥ । ಕವು (ಅನ್ವ । ರ್ಥಕವು?)
–
ಕಂಜಭ । ವನ ರಾಣಿ । ಯ ನಥಿ । ನದೊಳೆಸೆ॥ ವಂಜನ । ವಾದ ಕಾ । ರಣದಿ ॥
(ಅಂಜನಾ ಚರಿತೆ)

ರತ್ನಾಕರವರ್ಣಿ :-

ಪರಮ ಪ । ರಂಜ್ಯೋತಿ । ಕೋಟಿ ಚಂ । ದ್ರಾದಿತ್ಯ ॥ ಕಿರಣ ಸು । ಜ್ಞಾನ ಪ್ರ । ಕಾಶ ॥
ಸುರರ ಮ । ಕುಟಮಣಿ ।ರಂಜಿತ । ಚರಣಾಬ್ಜ ॥ ಶರಣಾಗು । ಪ್ರಥಮ ಜಿ । ನೇಶ ॥
ಸಿದ್ಧರ । ಸತತ ವಿ । ಶುದ್ಧರ । ಬೋಧಸ ॥ ಮೃದ್ಧರ । ನೆನೆದು ನಾ । ನೀಗ ॥
ಸಿದ್ಧರ । ಸದೊಳು ಲೋ । ಹವನದ್ದಿ । ದಂತಾತ್ಮ ॥ ಸಿದ್ಧಿಯ । ಪಡೆವೆನಿ । ನ್ನೇನು ॥
(ಭರತೇಶವೈಭವ)

ಹೊನ್ನಮ್ಮ :

– –
ಪೆಣ್ಣಲ್ಲ । ವೆ ತಮ್ಮ । ನೆಲ್ಲ ಪ । ಡೆದ ತಾಯಿ ॥ ಪೆಣ್ಣಲ್ಲ ।ವೆ ಪೊರೆ । ದವಳು
–

ಪೆಣ್ಣು ಪೆ । ಣ್ಣೆಂದೇ । ತಕೆ ಬೀಳು । ಗಳೆವರು ॥ ಕಣ್ಣು ಕಾ । ಣದ ಗಾವಿ । ಲರು ॥
ಶ್ರೀರಂಗ । ಪಟ್ಟಣ । ದೊಳು ಸಿರಿ । ನೆಲಸಿರ್ಕೆ ॥ ಭೂರಿವೈ । ಭವ ಮುದಿ । ದಿರ್ಕೆ ॥
ಶ್ರೀರಂಗ । ಧಾಮನ । ದಿವ್ಯಯಾ । ತ್ರೋತ್ಸವ ॥ ದಾರಾ । ಧನೆ ಮಿಗಿ । ಲಕ್ಕೆ ॥

ಸಾಧಾರಣವಾಗಿ ೫ ಮಾತ್ರೆಯ ಗಣಗಳಿದ್ದಂತೆ ತೋರಿದರೂ, ೩, ೪ ಮಾತ್ರೆಗಳ ಬ್ರಹ್ಮಗಣವೂ, ೪, ೫, ೬, ಮಾತ್ರೆಗಳ ವಿಷ್ಣುಗಣವೂ ಬರಬಹುದಾಗಿದೆ. ಪ್ರಧಾನ ಗಣ ಮೂರಂಶದ ಗಣ ಆರು; ಕೊನೆಯಲ್ಲಿ ಎರಡಂಶದ ಗಣ ೧.

ಕವಿಚರಿತೆಯಲ್ಲಿ (II. ೩೯೧) ಎರಡನೆಯ ನಾಲ್ಕನೆಯ ಪಾದಗಳಿಗೆ ಇನ್ನೊಂದು ಗಣವನ್ನು ಹೆಚ್ಚಿಸಿರುವ ಉದಾಹರಣೆಗಳಿವೆ :

–   –
ಬೆಳಗಿದ । ಕನ್ನಡಿ । ಯೊಳು ಮುಖ । ಬಿಂಬವು ॥ ತಿಳಿನೀರೊ । ಳು ಭಾನು । ಮಂಡ । ಲ
–
ಬೆಳಗುವಂ ।ತೆ ನಿ । ಷ್ಠಾಪಿಯ । ಮನದೊಳು ॥ ತೊಳಗಿ ಬೆ । ಳಗಿ ಶಿವ । ಕಳೆ ತೋ । ರ್ಕು ॥

(vii) ಏಳೆ

ಭುಜಗಪಕ್ಷ । ಪುರಗಣ ।
ವ್ರಜದೊಳಾ । ಱಱೊಳಕ್ಕು ।
ಮಜಗಣೇಳೆಗಿಭಗತೀ ॥ (ಣಮೇ?)

ಪಾಠಾಂತರಗಳು, ಅಜಪಕ್ಷಸುರವ್ರಜದೊಳಾರರೊಪ್ಪುದು ಜಗದೊಳೇಳೆ, ಆರರೊಪ್ಪುದಜಗಳೆಣಿಸಿ, ಒಪ್ಪಗಜಗಣೇಳೆ– ಎಂದಿವೆ. ಕೊನೆಯ ಪಾದವನ್ನು ಅಜಗಣ । ಮೇಳೆ । ಗಿಭಗ : ತೀ– ಎಂದೋದಿದರೆ ನಮಗೆ ಅನುಭವವಾಗಿರುವ ತ್ರಿಪದಿಯ ಓಟ ಕಾಣುತ್ತದೆ. ಏಳು ಗಣ (೪+೩) ಒಟ್ಟಿನಲ್ಲಿ; ಆರನೆಯ ಗಣದಲ್ಲಿ ಬ್ರಹ್ಮ– ಮಿಕ್ಕುವು ವಿಷ್ಣು ಅಥವಾ ರುದ್ರ ಆಗಬಹುದೆಂಬಂತಿದೆ. ಏಳೆ ಹೀಗಿರಬಹುದು :

ರು   ವಿ   ವಿ   ವಿ
ಭುಜಗಪಕ್ಷ । ಪುರ ಗಣ ॥ ವ್ರಜ ದೊಳಾ ।ಱಱೊಳಕ್ಕು ।
ವಿ   ಬ್ರ   ವಿ
ಮಜಗಣ । ಮೇಳೆ । ಗಿಭಗ : ತೀ ॥

(ಚಿತ್ರದ ಮತ್ತು ಚಿತ್ರಲತಿಕೆಯ ಮೊದಲನೆಯ ಭಾಗವನ್ನು ನೋಡಿ. ಯಕ್ಷಗಾನ ಗ್ರಂಥಗಳಲ್ಲಿ ಯಾಲಪದವೆಂಬುದೊಂದು ಸಿಕ್ಕುತ್ತದೆ.)

ಬಿದಿರ ದೆಬ್ಬೆ । ಹೆಗಲ ಮೇಲೆ ।
ಎದಿರ ಬಂದಾ । ನಾರ ನೋಡಿ ।
ಚದುರು ಕೊರಚಿಯ । ಕಾಣೆನೆನುತಾ । ಲಿ– ಓ, ಸಿಂಗೀಯೆನು । ತಾ ।
ಒದಗಿ ಬಂದಾ । ಬೇಗ ಸಿಂಗಾ । ನು ।

ಇದರಲ್ಲಿ (ಮಾತ್ರಾದೃಷ್ಟಿಯೂ ಸೇರಿ) ಆರು ರುದ್ರಗಣಗಳೂ ಕೊನೆಯಲ್ಲಿ ದೀರ್ಘವೂ ಇದ್ದಂತಿವೆ. ಆ ಮೇಲೆ ಪಾದ ಹೆಚ್ಚಿ, ಒಂದು ಗಣ ಕೊನೆಯ ಪಾದಕ್ಕೆ ಸೇರಿ, ಕೊನೆಯ ಪಾದ ಪುನರಾವೃತ್ತಿಯಾಗಿದೆ. ಇದು ಏಳೆಯ ರೂಪಾಂತರವಾಗಿದ್ದಲ್ಲಿ, ಏಳೆಗೆ ಆರು ರುದ್ರಗಣ + ೧ ಗುರು ಎಂದು ಲಕ್ಷಣ ಹೇಳಬೇಕಾಗುತ್ತದೆ. ಅಲ್ಲಲ್ಲಿ ರುದ್ರಕ್ಕೆ ವಿಷ್ಣು ಬ್ರಹ್ಮಗಳು ಪರ್ಯಾಯವಾಗಿ ಬರಬಹುದು.

೩. ರಗಳೆ

ಪ್ರಸಿದ್ಧವಾದ ಉತ್ಸಾಹ, ಮಂದಾನಿಲ, ಲಲಿತ ಎಂಬ ರಗಳೆಗಳನ್ನೂ ಹತ್ತನೆಯ ಶತಮಾನದ ಕಾವ್ಯಗಳಲ್ಲಿ ದೊರೆಯುವ ಬೇರೆ ಕೆಲವು ರಗಳೆಗಳನ್ನೂ 'ಕನ್ನಡ ಕೈ ಪಿಡಿಯ' ಪುಟ, ೧೧೭– ೧೨೦ ರಲ್ಲಿ ಹೇಳಿದೆ.

ಇವುಗಳಲ್ಲಿ ಉತ್ಸಾಹಕ್ಕೆ (ಉತ್ಸವ ಎಂದೂ ಕರೆದಿದೆ) ೩ ಮಾತ್ರೆಯ ಗಣಗಳು, ಮಂದಾನಿಲಕ್ಕೆ ೪ ಮಾತ್ರೆಯ ಗಣಗಳು, ಲಲಿತಕ್ಕೆ ೫ ಮಾತ್ರೆಯ ಗಣಗಳು ಬರುವುವು. ಪಾದಕ್ಕೆ ೪ ಗಣ. ಇಷ್ಟೇ ಪಾದಗಳೆಂಬ ನಿರ್ಬಂಧವಿಲ್ಲ; ಆದ್ಯಂತ ಪ್ರಾಸಗಳುಂಟು; ಆದಿಪ್ರಾಸ ಇಲ್ಲದೆಯೊ ಇರಬಹುದು; ವಿಸ್ತರಿಸಿ ಹೇಳಬೇಕಾದ ವಿಷಯವಿದ್ದರೆ ಈ ರಗಳೆಗಳು ಅನುಕೂಲ.

ನಾಗವರ್ಮನು ಈ ಮೂರು ರಗಳೆಗಳ ಹೆಸರನ್ನು ಹೇಳಿಲ್ಲ. ಮಾತ್ರೆಗಳನ್ನೂ ತಿಳಿಸಿಲ್ಲ. ಕರ್ಣಾಟಕಜಾತಿ ಛಂದಸ್ಸಿನ ಪ್ರಕರಣದಲ್ಲಿ ಅಕ್ಕರ, ತ್ರಿಪದಿ, ಮುಂತಾದುವುಗಳ ಜೊತೆಯಲ್ಲಿ ಉತ್ಸಾಹ ವೃತ್ತವೆಂಬುದೊಂದನ್ನು ಸೇರಿಸಿದ್ದಾನೆ.

ಇದರ ಲಕ್ಷಣ : ೭ಬ್ರಹ್ಮ + ೧ ಗುರು (– ᴗ, ᴗ ᴗ ᴗ)

ಭೂ ಹಿ । ತಾರ್ಥ । ಮೆನಿಸು । ವಜನ । ಗಣಮ । ವೆ **ಬರೆ** । ಸಪ್ತ ಸಂ । [ರಡು– ಪಾಠಾಂತರ]
ದೋಹ । ಮತ್ತ । ಲೊಂದೆ । ಗುರು ಬೆ । ಡಂಗ । ನಾಳ್ದು । ನಿಲೆ ಲ । ಯ ।
ಗ್ರಾಹಿ । ಯಾಗಿ । ಮಧುರ । ವಚನ । ರಚನೆ । ವೆತ್ತು । ಬಂದೊ । ಡು ।
ತ್ಸಾಹ । ಮೆಂಬ । ಪೆಸರೊ । ಳೆಸೆವು । ದಬ್ಜ । ಪತ್ರ । ಲೋಚ । ನೇ ॥

ಲಯಗ್ರಾಹಿ ಎಂಬುದರಿಂದಲೂ, ಇಲ್ಲಿ ಬ್ರಹ್ಮಗಣವೆಂದು ಸಾಮಾನ್ಯವಾಗಿ ಹೇಳಿದ್ದರೂ ಪದ್ಯದ ಧಾಟಿಯಿಂದಲೂ, ೩ ಮಾತ್ರೆಯ ಬ್ರಹ್ಮಗಣವೆಂದು ಹೇಳಿದ ಹಾಗಾಯಿತು. ನಾಲ್ಕು ಪಾದದ ವೃತ್ತವಾಗಿದೆ.

ಮೂರನೆಯ ಅಧಿಕರಣದಲ್ಲಿ ಸಂಸ್ಕೃತ ಛಂದಸ್ಸುಗಳ ಮಧ್ಯೆ "ರಗಳೆಯ ಲಕ್ಕಣಮಂ ಕಂದ ಪದ್ಯದಿಂ ಪೇೞ್ವೆಂ" ಎಂದು ಹೇಳಿ, ಲಕ್ಷಣವನ್ನು ಹೀಗೆ ಕೊಟ್ಟಿದ್ದಾನೆ:

ಗಣನಿಯಮ ವಿಪರ್ಯಾಸದೊ
ಳೆಣೆವಡೆದೊಳ್ಪೆಸೆಯೆ ಮಾತ್ರೆ ಸಮನಾಗಿ ಗುಣಾ
ಗ್ರಣಿಯ ಮತದಿಂದೆ ತಾಳದ
ಗಣನೆಗೊಡಂಬಟ್ಟೊಡದುವೆ ರಘಟಾಬಂಧಂ॥ (೩–೨೨೨)

ಇದರಿಂದ ಸಂಸ್ಕೃತ, ಪ್ರಾಕೃತ ಗ್ರಂಥಗಳಲ್ಲಿರುವ ಮಾತ್ರಾಸಮಕಗಳಂತೆ ರಗಳೆಗಳನ್ನು ನಾಗವರ್ಮನು ಸಂಸ್ಕೃತ ಛಂದಸ್ಸಿಗೇ ಸೇರಿಸಿರುವುದು ಸ್ಪಷ್ಟವಾಗುತ್ತದೆ. ರಘಟೆಗಳ (ತೆಲುಗು–ರಗಡ) ಪ್ರಭೇದಗಳನ್ನು ತಿಳಿಸುವ–

ಮಂದಾನಿಲ ಲಲಿತೋತ್ಸವ
ವೆಂದೇ ರಗಳೆಗಳ ನಾಮಮಕ್ಕುಂ ಕ್ರಮದಿಂ
ದೊಂದಕೆ ಪದಿನಾಱೆರ್ಪ
ತ್ತೊಂದಕಿರ್ಪತ್ತುನಾಲ್ಕು ಮಾತ್ರೆಗಳಬಲೇ
ಇಪ್ಪತ್ತು ಮಾತ್ರೆ ಲಲಿತೆಗೆ
ಬಪ್ಪುದು ಪದಿನಾಱು ಮಾತ್ರೆ ಮಂದಾನಿಲಕಂ
ತಪ್ಪುದು ಉತ್ಸಾಹಕ್ಕುೞಿ
ಯೊಪ್ಪುವುದಿಪ್ಪತ್ತುನಾಲ್ಕು ಮಾತ್ರೆಗಳಬಲೇ

ಈ ಎರಡು ಪದ್ಯಗಳು ಪ್ರಕ್ಷಿಪ್ತಗಳಾಗಿ ಕಾಣುತ್ತವೆ.

ಹತ್ತನೆಯ ಶತಮಾನದ ಕಾವ್ಯಗಳಲ್ಲಿ ರಗಳೆಗಳು ಕಂಡುಬಂದರೂ ನಾಗವರ್ಮನು ಪ್ರಭೇದಗಳನ್ನೂ, ಅವುಗಳ ಹೆಸರನ್ನೂ ತಿಳಿಸದೆ, ರಘಟೆಯ ಸಾಮಾನ್ಯ ಲಕ್ಷಣವನ್ನು ಕೊಟ್ಟು ಉತ್ಸಾಹ ವೃತ್ತವನ್ನು ಮಾತ್ರ ಕರ್ಣಾಟಕಜಾತಿ ಛಂದಸ್ಸಿನಲ್ಲಿ ಹೇಳಿ ಸುಮ್ಮನಾದುದಕ್ಕೆ ಕಾರಣ ತಿಳಿಯುವುದಿಲ್ಲ.

ಪಂಪಾದಿಗಳ ರಗಳೆಗಳನ್ನು ಗಮನಿಸೋಣ :

ಆದಿಪುರಾಣ : ೪– ೩೦ ರ ಮುಂದೆ–

ಮಂದಾನಿಲ ರಗಳೆ :

ᴗ – ᴗ ᴗ – ᴗ
ಸ್ಫುರಿತೇಂ । ದ್ರ ನೀ ಲ । ಮಣಿಖಚಿ । ತ ಭೂ ಮಿ ।

ᴗ – ᴗ
ಚೆಲುವಿಂ । ಗದು ನೆ । ಟ್ಟನೆ ಜ । ನ್ಮ ಭೂ ಮಿ ।
ᴗ – ᴗ

ಮರಕತ । ಮಣಿವಿರ । ಚಿತ ವಿಮ । ಳ ಭಿ ತ್ತಿ ।
ᴗ – ᴗ
ಪೊಗಟಿಲ್ । ಕರಮರಿ । ದದು ಬೇ । ಱ ಭಿ ತ್ತಿ ।
–. ᴗ ᴗ :ᴗ ᴗ. ᴗ
– ᴗ – ᴗ ᴗ ᴗ
ಚಂದನ । ದೆಳದಳಿ । ದೋರ್ಣರ । ಣಂ ಗ ಳ ವು ।
–. ᴗ ᴗ : ᴗ ᴗ. ᴗ
– ᴗ – ᴗ ᴗ ᴗ
ಸೂಚಿತ । ಮಂಗಳ । ಕಾ ರ । ಣಂ ಗ ಳ ವು ।
ತುಂಗಕ । ನಕ ಭೃಂ । ಗಾರು ವಿ । ರಾಜಿ ।
ರಾಜ । ನ್ಮರಕತ । ಮಯಶುಕ । ವಿರಾಜಿ! . . .
ಪುಣ್ಯಾಂ । ಬುಪೂರ್ಣ ।ಕುಂಭಾ । ಗ್ರಮುಚಿತ ।
ಕಂಕೇ । ಲಿಪಲ್ಲ । ವೋಲ್ಲಾ । ಸರಚಿತ . . . .
ವಿಭವದ । ಮೂಲ ।ಸ್ಥಾನಮೆ । ನಿಸಲಿದು ।
– ᴗ –
ಕಾಮ । ದೇ ವ ನಾ । ಸ್ಥಾ ನ ಮೆ । ನಿಸಲಿದು ।
ಓರಂ । ತೆ ನೆರೆದು । ದೆನೆ ಜನ । ಸಮೂಹ ।
ಮಾಗಳೆ । ಸಮೆದ । ತ್ತು ವಿವಾ । ಹ ಗೇಹ (= ಹಂ?)

ಇದರಲ್ಲಿ ಆದಿಪ್ರಾಸವಿಲ್ಲ : ಅಂತ್ಯಪ್ರಾಸವಿದೆ. ನಾಲ್ಕು ಮಾತ್ರೆಯ ಗಣಗಳೆಂದು ಇಟ್ಟು ಕೊಂಡರೆ ಕಡೆಯಲ್ಲಿಜ (ᴗ – ᴗ) ನಲ (ᴗ ᴗ ᴗ ᴗ) ಇವು ಬಂದಿವೆ. ಮೇಲೆ ತೋರಿಸಿರುವ ಗಣವಿಭಾಗಕ್ಕಿಂತ, ಕೊನೆಯ ಪ್ರಾಸಗಳನ್ನು ಭೂಮಿ, ಭೂಮಿ; ಭಿತ್ತಿ, ಭಿತ್ತಿ; ರಾಜಿ, ರಾಜಿ ಎಂದು ಅರ್ಥಸ್ಫೂರ್ತಿಯ ಶಬ್ದದಿಂದ ಮಾಡಿದರೆ– ಹೀಗೆ ಗಣವಿಭಾಗ ಮಾಡಬಾರದೆ?–

ಸ್ಫುರಿ. ತೇಂ. ದ್ರ । ನೀ. ಲ
ಮಣಿ. ಖಚಿ. ತ । ಭೂ. ಮಿ.
ಟ್ಟನೆ. ಜ. ನ್ಮ. । ಭೂ. ಮಿ.
ಚಿತ. ವಿಮಳ. । ಭಿ. ತ್ತಿ.
ದದು. ಬೇ. ಱ । ಭಿ. ತ್ತಿ
ತುಂ. ಗ । ಕನ. ಕ ಭೃಂ । ಗಾ. ರು. । ವಿರಾಜಿ
ರಾ. ಜನ್ । ಮರಕತ । ಮಯಶು. ಕ. ವಿ । ರಾಜಿ.
–. –. ᴗ –. ᴗ –. –. ᴗ ᴗ ᴗ. ᴗ
ಕಂ ಕೇ ಲಿ । ಪ ಲ್ಲ । ವೋ ಲ್ಲಾ ಸ । ರ ಚಿ ತ
ದೆನೆ. ಜನ. ಸ । ಮೂಹ ।
ತ್ತು ವಿ. ವಾ. ಹ । ಗೇ ಹ ।

ತೋರಣಂಗಳವು । ಕಾರಣಂಗಳವು । ಕಾಮದೇವನಾ । – ಎಂಬ ಕಡೆಗಳಲ್ಲಿ ಎರಡು ಗಣ ಕೂಡಿ ಕೊಂಡು ಒಟ್ಟಿಗೆ ಒಂದು ಗಣದಂತೆ ಧಾಟಿ ಓಡಬಹುದು. ಇದು ಮೂರಂಶದ (ವಿಷ್ಣು) ಗಣಕ್ಕೂ ಮಾತ್ರಾಗಣಕ್ಕೂ ಮಧ್ಯವರ್ತಿಯಾಗಿದೆಯೆ?

ಆದಿಪುರಾಣ : ೭, ೨೭ರ ಮುಂದೆ–

ಶ್ರೀ. ಗೆ. ಕುಳ. । ಸದ. ನ. ಮೆನೆ । ತೊಳ. ಪ. ಮಣಿ । ಭವ. ನ. ದೊಳ್ ।
ರಾಗರಸ । ಮೊದವೆ ಸರ । ಸಿರುಹಸಮ । ವದನದೊಳ್ ॥
ಪೊಳೆವ ಪ । ಚ್ಚ ದೊಳೆ ಸೊಗ । ಯಿಸುವ ಮೃದು । ತಲ್ಪದೊಳ್ ॥ . . .
ಲಲಿತ ಗಂ । ಗಾನದೀ । ಲಹರಿಕಾ । ತಲ್ಪದೊಳ್ ॥. . .

ಆದಿ ಮತ್ತು ಅಂತ್ಯಪ್ರಾಸ. ೫ ಮಾತ್ರೆಯ ನಾಲ್ಕು (ವಿಷ್ಣು) ಗಣಗಳು ಸ್ಪಷ್ಟ. ಮಿಕ್ಕ ಕವಿಗಳಲ್ಲಿಯೂ ಇದು ಒಂದೇ ರೀತಿ ಇರುವುದರಿಂದ ಹೆಚ್ಚು ವಿಚಾರ ಬೇಕಾಗಿಲ್ಲ.

ಪಂಪಭಾರತ : ೧, ೫೮:

ಅದ. ಱ । ಪೊಱ. ವೊ । ೞಲ. ವಿ । ಶಾ.ಳ । ಕನ. ಕ । ಕೃತ. ಕ । ಗಿರಿ. ಗ । ಳಿಂ :

∪ – ∪

ಘ । ಳ ಪ್ರ । ಕೀ. ರ್ಣ। ತರು. ಗ. ।ಳಿಂ ॥

∪ – ∪

ನನೆಯ । ಕೊನೆಯ । ತಳಿರ । ಮುಗುಳ । ವನಲ । ತಾ ನಿ । ಕುಂಜದಿಂ : ಪ್ರ । ಸೂ ನ । ರಜದ ।

ಪುಂಜದಿಂ:

೩ ಮಾತ್ರೆಯ ೧೧ ಗಣಗಳು + ೧ ಗುರು. ಓಟ ಹೇಗೆಂದರೆ– ಎರಡೆರಡು (ಬ್ರಹ್ಮ) ಗಣ ಒಂದುಗೂಡಿದ ೩ ದ್ವಿಗಣ (ರುದ್ರ). ಮುಂದೆ, ೧ ಗಣ + ಗುರು (ಪ್ರಾಸಗಣ) ಯತಿ, ಒಂದು ಹ್ರಸ್ವ, ದ್ವಿಗಣ ೧, ೧ ಗಣ + ಗುರು (ಪ್ರಾಸಗಣ). ಆದಿಪ್ರಾಸವಿಲ್ಲ.

ಪಂಪಭಾರತ : ೩, ೨೨

ಅಲ್ಲಿ ಸೊಗಯಿಸುವ । ಕೃತಕ । ಗಿರಿಗಳಿಂ । ಕಲ್ಪ । ತರುಗಳನೆ ।ಪೋಲ್ವ । ಮರಗಳಿಂ ॥

ನಂದ । ನಂಗಳೊಳೆ । ಸುಟಿವ । ಬಿರಯಿಯಿಂ । ಕಂಪು । ಕಣ್ಮಲೆಯೆ । ಪೂತ । ಸುರಯಿಯಿಂ॥. . .

೩. ೫ । ೩. ೫ ॥ ೩. ೫ । ೩.೫; ಎರಡು ಸಲ– ಒಳಪ್ರಾಸ. ಓಟ, ೮ । ೮ ॥ ೮ । ೮:೪ ದ್ವಿಗಣ ಆದಿಪ್ರಾಸವಿಲ್ಲ.

ಪಂಪಭಾರತ : ೪, ೧೦ :

ಇದನ್ನು ಮಟ್ಟರಗಳೆ ಎಂದು ಕರೆದಿದೆ. ಮಂದಾನಿಲವೆಂಬಂತೆ ಭಾಸವಾಗುತ್ತದೆ. ದ್ವಿಗಣಗಳಾದ ಅಂಶಗಣಗಳು ಮಾತ್ರಾಗಣಗಳಾಗಿ ತಿರುಗುತ್ತಿರುವಂತೆಯೂ ಕಾಣುತ್ತದೆ.

ಎಯ್ದುವು । ದುಂ ತ । ತ್ಪುರದುಪ । ವನಂಗ । ಳವಿರಳ । ಮಳಯಾ । ನಿಲಕಂ । ಪಿತಂಗ ।

ಳ ವಿ. ರಳ । ಕುಸು. ಮಾ । ವಳಿ. ಕಂ. ಪು । ಪೇ. ಱ್ । ಸೊಗ. ಯಿಪ । ಕಿಱು. ಮಿಡಿ । ಗಳೊ.

ಳೊ. ಪ್ಪಿ । ತೋಱ್ ॥

ಎ. ಯ್ದುವು. ದುಂ. ತತ್. । ಪುರ. ದುಪವ. ನಂ. ಗಳ್ ।

ಅವಿ. ರಳ. ಮಳ. ಯಾ । ನಿಲ. ಕಂಪಿ. ತಂ. ಗಳ್ ॥

ಪ್ರಾಸ– ವನಂಗ, ಪಿತಂಗ– ಎಂದೋ, ನಂಗಳ್ ತುಂಗಳ್ ಎಂದೋ ಯೋಚಿಸಿ. ಮುಂದಿನ ಪಂಕ್ತಿಯಲ್ಲಿ ಪ್ರಾಸ ಪೇಱ್, ತೋಱ್, ಎಂದೋ ಪುಪೇಱ್, ಪ್ಪಿತೋಱ್ ಎಂದೋ? ಜಗಣವನ್ನು ಕೊನೆಯಲ್ಲಿ ನಿಸ್ಸಂದೇಹವಾಗಿ ಹೇಳತಕ್ಕುದೋ?

ಈ ರೀತಿ ಅಂಶಗಣಗಳನ್ನೆತ್ತಿ ತೋರಿ, ಎರಡು ಮೂರನೆಯ ಅಂಶಗಳಿಗೂ ದ್ವಿಲಘುವನ್ನು ಬದಲಾಯಿಸಿಟ್ಟು, ಒಂದೊಂದು ವೇಳೆ ಗುರುವನ್ನು ಲಘುವನ್ನಾಗಿ ಮಾಡಿ ನುಂಗಿ, ಪ್ರಾಸವನ್ನು ಎತ್ತಿ ನಿಲ್ಲಿಸಿ, ಮಿಕ್ಕ ಪಂಕ್ತಿಗಳನ್ನು ಗಣವಿಭಾಗ ಮಾಡಿದರೆ–

∪

^

ಲವ. ಣಾ. ಬ್ಧಿಯೆ. ಬಳ. । ಸಿದು. ದೆನಿಸು. ವಗ. ೞ ।

ಬಳ. ಸೆಸೆ. ದಿರೆ. ಕೋಂ. । ಟೆಯ. ಚೆಲ್ವು. ಪೊಗ. ೞ । . . .

∪

ಬಳ. ಸಿದ. ಕೆಂ.ಬೊ । ನ್ನಮ. ದಿಲ್ಗ. ಳೊಳ. ಗೆ

∪

^

ಮಣಿ. ಮಯ. ಭವ. ನಾ । ವಳಿ. ತೊಳಗಿ. ಬೆಳ. ಗೆ ॥

ರಸ. ರಸದ. ಬಾ. ವಿ । ಮನೆ. ಮನೆಗೆ. ಬೇ. ಱ್ ।
ᴗ
ಕಿಸು. ಗಲ್ಗ. ಳರ. ಜದ । ಕಣಿ. ವೆರಸು. ತೋ. ಱ್ ॥ . . .
ಪರ. ದರ. ಪಾ. ರ್ದ್ವರ । ಸೂಳೆ. ಯರ. ಮನೆಗ.ಳವು. ।
ಧನ. ದನ. ಭವ. ನಮ. । ನೇ. ಟಿಪ. ಮನೆಗ.ಳವು ॥. ..
ᴗ ᴗ
ಮೊಟ.ಲ ಬೆಡಂ. ಗಂ । ಮೆಚ್ಚಿ. ಮೆಚ್ಚಿ. ನೋ. ಡಿ ।
ᴗ
ದಿವಿ. ಜೇಂ. ದ್ರ ವಿ. ಳಾ । ಸದೊ.ಳಿಂತು. ಕೂ. ಡಿ ॥.. .
ᴗ
ಮಣಿ. ಕನಕ. ರಜ. ತ । ವಸ್ತು. ಗಳ. ನಿ. ತ್ತು ।
ᴗ
ಬೇಡಿದ. ನಾಡು. (ಬೆಡ್ದ. ನಾ ಡ್.) ಗಳ. ನವ । ಯವ. ದಿಂ ದ. ಮಿ. ತ್ತು ।. . .
ನೆಲ. ನಂ. ಪ್ರತಿ. ಪಾ । ಲಿಸಿ. ಧರ್ಮ. ಸೂ. ನು ।
ಸುಖ. ಮಿ. ರ್ದಂ. ರಿಪು । ಬಳ. ತಿಮಿರ. ಭಾನು ॥

ಇವು ನಾಲ್ಕಂಶದ ರುದ್ರಗಣಗಳು. ಕೊನೆಗೆ ಅಂಶಕ್ಕೆ ಕೂಡ ಎರಡು ಲಘು ಬಂದಿದೆ. ಅಕ್ಷರವನ್ನು ತೇಲಿಸುವುದಕ್ಕೆ– ಗೋವಿನ ಕಥೆಯ

ᴗ ᴗ. ᴗ –. ᴗ ᴗ –. ᴗ –. ᴗ ᴗ
ಇ ರು ವ । ಕಾ ಳಿಂ ಗ । ನೆಂ ಬ । ಗೊ ಲ್ಲ ನ ।
–. ᴗ ᴗ
ಪರಿ. ಯ । ನಾ. ನೆಂ ತು । ಪೇಳ್ವೆ । ನು

ಎಂಬುದನ್ನು ನೋಡಿ. ಹಾಗೆಯೇ–

ᴗ ᴗ ᴗ ᴗ ᴗ ᴗ –
ಎ ರ ಡೆಂ ಬು । ದೇ ನೇ । ಹೆ ಸ ರ್ ಹೇ । ಳೇ

ಪೊನ್ನನ ಶಾಂತಿಪುರಾಣ : ೩, ೭. ಇಲ್ಲಿ ತ್ವರಿತರಗಳೆ ಎಂಬ ಹೆಸರಿದೆ.

ᴗ
ಅದ. ಱೊಳ. ಗಣ. ಗಣ । ನಾ. ತೀ ತ. ರ. ಮ್ಯ ।
ಮಣಿ. ಕನಕ. ರಜ. ತ । ಪರಿ. ಖಚಿತ. ಹ. ರ್ಮ್ಯ ॥
ಪ್ರ ಕ. ರಂ. ಕರ. ಮೊ । ಪ್ಪುಗು. ಮಪ್ಪು. ಕೆ. ಯ್ದು ॥
ಚೆ.ಲಂ. ಸುರ. ಪುರ । ಮನ. ವಜ್ಜೆ. ಗೆ. ಯ್ದು ॥
ಗಣಿ. ಕಾ. ವಾ. ಟಂ । ಗಳ. ನೆರೆದ. ಲೀ. ಲೆ ।
ಮದ. ನಾಧಿ. ರಾ. ಜ । ವಾಸ. ಮನೆ. ಪೋ. ಲೆ.
ದೇ.ವೋ. ತ್ತರ. ಕುರು । ದಂಪ. ತಿ ಶ.ತ.ಕ್ಕೆ ।
ದೊರೆ. ಚದುರ. ಮಿಥು. ನ । ಮೆನ್ನ. ಭಿಮ. ತ. ಕ್ಕೆ ॥. . .
ದೇ. ವಾ. ಲಯ. ತತಿ । ಯ ಬೆ. ಡಂಗ. ಳುಂ. ಬಂ ।
ಆ. ಱದ. ದಂ. ಲಂ । ಘಿಸ. ಲರ್ಕಬಿಂ. ಬಂ. ॥ . . .

(ಕೊನೆಯ ಮಕಾರ ಮುಂದಿನ ಪಾದೊಡನೆ ಸಂಧಿಯಾಗುವುದನ್ನು ಮೇಲಿನ ಉದಾಹರಣೆಗಳಲ್ಲಿಯೂ ನೋಡಿ)

ᴗ
ತಾ. ಮರೆ. ಪೊಂ. ದಾ. । ಮರೆ. ಕ ಲ್ಪ. ಲತೆ. ಯೆ ।
ಲತೆ. ಯೆ. ಲ್ಲಂ. ನೋ । ಟಿಪ್ಪೊಡ. ದಂದು. ಕತೆ. ಯೆ ॥

ಮದ. ಕರಿ. ಗಳ್. ವಿಜಿ । ತೈ. ರಾವ. ತಂ. ಗಳ್ ।
ಅ.ಶ್ವಂ. ಗಳ. ಧಿಕ । ಸ.ತ್ವಾನ್ವಿ. ತಂ. ಗಳ್ ॥. . .
ಅದ. ಱಿಂ. ಶಿವ. ಮಂ । ದಿರ. ದೊಳ್ಪು. ಪಿರಿ. ದು
ಪೊಗ. ೞ. ಲ್ಕದ. ನಹಿ । ರಾ. ಜಂಗ. ಮರಿ. ದು ॥
(ಆದಿಪ್ರಾಸವಿಲ್ಲ. ಪ್ರಾಸಗಣಗಳು– ಲೀಲೆ– ಪೋಲೆ; ಲತೆಯೆ– ಕತೆಯೆ; ತಂಗಳ್– ತಂಗಳ್; ಪಿರಿದು– ಅರಿದು.)

ನಾಗವರ್ಮನ ಕಾದಂಬರಿ : ೧, ೪೮೨. ಹೆಸರು : ಮಂದಾನಿಲರಗಳೆ :

ಇನಿತಂ ಪಾರೆ । ನ್ನಂ ತ್ವರಿತಗತಿಕೆ ।
ಪಿಡಿ ಮೇಲುದನೀ । ಗಳ್ ಲಲಿತ ಲತಿಕೆ ॥
ಸೋರ್ಮುಡಿಯಂ ಸಾ । ವಗಿಸಕ್ಕ ನಿನ್ನ ।
ಜೋಲ್ದುಡೆಯಂ ನೋ । ಡೆಲೆ ಮರುಳೆ ಮುನ್ನ. . .
ಇಲ್ಲಿಯೂ ಜಗಣವನ್ನು ಕೊನೆಯಲ್ಲಿಟ್ಟುಕೊಳ್ಳಬೇಕೆ? ಎಂಬ ವಿಚಾರ ಬರುತ್ತದೆ. ಇಲ್ಲಿಯೂ ಆದಿಪ್ರಾಸವಿಲ್ಲ. ಕೊನೆಯದಾಗಿ, ಕವಿಚರಿತೆಯಿಂದ (೧.ಪುಟ ೮೫) ಇನ್ನೊಂದು ಉದಾಹರಣೆಯನ್ನು ಕೊಡಬಹುದು:

ಬನದೊಳೆತ್ತಲುಂ । ಸುಟಿವರಗಿಳಿಗಳೆ ।
ಜಿನುಗಿ ರಾಗದಿಂ । ದಂ ಮೊರೆವಳಿಗಳೆ ।
ಪೋ ಪುಗಿಲ್ ಪುಗಿಲ್ । ನಿಲ್ಲೆನುತೆ ಕರಂ ।
ಕಾಪುಗೊಂಡು ಜಡಿ । ವುದು ಪಿಕನಿಕರಂ ॥

ರನ್ನನ ಅಜಿತಪುರಾಣ : ಉತ್ಸಾಹರಗಳೆ : ೨, ೮ :

ಅದಱ । ಬಳಸಿ । ದುಪವ । ನಂಗ ।
ಳುದಿತ । ಕೋಕಿ । ಲ ಸ್ವ । ನಂಗ ।
ಳೆಸೆವ । ಶೋಕ । ಚೂತ । ವನದ ।
ಮಿಸುಪ । ವಕುಳ । ತಿಲಕ । ವನದ. . .
ನಿಂದ । ಬಿರಯಿ । ಗದವ । ೞಲ್ ।
ಕುಂದ । ದೆನಿಪ । ಪೊಱವೊ । ೞಲ್ ।

೩ ಮಾತ್ರೆಯ ನಾಲ್ಕು ಗಣಗಳು. ಆದ್ಯಂತ ಪ್ರಾಸಗಳು. ಕೊನೆಯ ದ್ವಿಪದಿಯ ಕಡೆಯಗಣ ಒಂದು ಗುರುವಿನ ಊನಗಣ. ವನಂಗಳ್– ಸ್ವನಂಗಳ್ ಎಂಬಲ್ಲಿ ಳ ಕಾರ ಮುಂದಿನ ಪಾದದ ಸ್ವರದೊಡನೆ ಸಂಧಿಯಾಗಿ ಆ ಪಾದಕ್ಕೆ ಹೋಗುವುದನ್ನು ಗಮನಿಸಿ. ಹಿಂದೆ ಪಂಪನ ರಗಳೆಯಲ್ಲಿಯೂ ಹೀಗಾಗಿದೆ.

ಒಟ್ಟಿನ ಮೇಲೆ, ೩ ಮಾತ್ರೆಯ, ೫ ಮಾತ್ರೆಯ ಗಣಗಳಲ್ಲಿ ಮಾತ್ರಾಗಣ ಸ್ಪಷ್ಟವಾಗಿದೆ. ೪ ಮಾತ್ರೆಯ ಗಣಗಳಲ್ಲಿ ಅಂಶವೂ, ಮಾತ್ರೆಯೂ ಬೆರಸಿರುವಂತೆ ಕಾಣುತ್ತದೆ. ಜಗಣ, ನಲ ಇವು ಉಂಟೋ ಇಲ್ಲವೊ ನಿರ್ಧರಿಸಿ ಹೇಳುವಂತಿಲ್ಲ. ರಗಳೆ ಸಂಸ್ಕೃತಕ್ಕೆ (ಪ್ರಾಕೃತಕ್ಕೆ) ಸೇರಬೇಕೋ, ಅಂಶಗಣದ ಕರ್ಣಾಟದವಿಷಯ ಜಾತಿಯೇ ಸಂಶಯ ಉಳಿಯುತ್ತದೆ. ತೆಲುಗಿನ ರಗಡಗಳು ಏಳು ಬಗೆ ಎಂದು ಹೇಳಿದ್ದರೂ ಹೆಚ್ಚು ಸಂಗತಿಗಳೇನೂ ಹೊರಪಡುವುದಿಲ್ಲ. ತಮಿಳಿನಲ್ಲಿ ಅಗವಲ್ ಪಾವಿನಲ್ಲಿ, ಆಶಿರಿಯವಿರುತ್ತದಲ್ಲಿ ಕೆಲವು ಕಡೆ ರಗಳೆಯನ್ನು ಹೋಲುವ ಛಂದಸ್ಸು ಕಾಣುವುದು.

ರಗಳೆಗಳನ್ನು ಬಿಡುವುದಕ್ಕೆ ಮುಂಚೆ, ಹರೀಶ್ವರನು ಲಲಿತರಗಳೆಯನ್ನು ಕಥನಕ್ಕೆ ಯಾವ ರೀತಿ ಉಪಯೋಗಿಸಿರುವನೆಂಬುದನ್ನು ಪ್ರಕಾಶಕ್ಕೆ ತರಬೇಕಾಗಿದೆ. ಆತನಿಗೆ ಕೇವಲ ವರ್ಣನೆಯೇ ಅಲ್ಲ. ಗೀತದ ಕೆಲಸವೇ ಅಲ್ಲ; ಉದ್ದವಾಗಿ, ತಡೆಯಿಲ್ಲದೆ, ಕಥೆಯನ್ನು ಹೇಳಿಕೊಂಡು ಓಡುವ ಛಂದಸ್ಸು ಬೇಕಾಯಿತು. ಈಗಿನ ಕಾಲದವರು ಇಂಗ್ಲಿಷಿನ

ಬ್ಲ್ಯಾಂಕ್‌ವರ್ಸನ್ನು ಅನುಕರಣಮಾಡಿ ಸರಳರಗಳೆಯೆಂದು ಕರೆಯುವ ರಗಳೆಗೆ ಹರೀಶ್ವರನೇ (ಪ್ರಾಸವನ್ನು ಬಿಟ್ಟರೆ) ಮಾರ್ಗದರ್ಶಕನೆಂಬುದನ್ನು ಆತನ ಬಸವರಾಜದೇವರ ರಗಳೆಯಲ್ಲಿ ನೋಡಬಹುದು.

ಬಸವಣ್ಣನು ಸಂಗಮೇಶ್ವರನ್ನು ಬೀಳ್ಕೊಂಡದ್ದು :

ಸಂಗಂಗೆ ಬಿನ್ನೈಸಲೆಂದು ಹತ್ತಿರೆ ಬಂದು
ಹಿಂಗಲಾಱದೆ ಕಂಗಳಿಂ ಶೋಕಜಲ ಬಿಂದು
ಕೊರಲ ಸೆರೆ ಬಿಗಿದು ಗದುಗದಿಸಿ ಬಿಕ್ಕುತ ಬಿದ್ದು
ಹೊರಳುತ್ತಳುತ್ತಗಲಲಾಱದೊಱಲುತ್ತೆದ್ದು
ನಿಂದಿರುತ್ತೆಲೆ ಸಂಗ ಹೋಗಿ ಬಂದಪೆನಯ್ಯ
ತಂದೆ ನಿನ್ನಂ ನಂಬಿ ನಚ್ಚಿ ಹೋದಪೆನಯ್ಯ
ಅಗಲಲಾಱೆಂ ದೇವ ದೇವ ಕರುಣಿಪುದೆನುತೆ
ಬಗೆಹೆಚ್ಚಿ ತನುಹೆಚ್ಚಿ ಕೊಟ್ಟಂತೆ ನಿಂದಿರುತೆ
ಮುಂದಿರ್ದ ಬಸವನಂ ಕಂಡು ಸಂಗಂ ಮಱುಗಿ
ಬಂದಪ್ಪಿ ಕಣ್ಣ ನೀರಂ ತೊಡೆದು ಮಿಗೆ ಮಱುಗಿ
ಬೇಡೆನ್ನ ಕಂದ ನಿನ್ನೊಡನೆ ಬಪ್ಪೆಂ ಬಸವ
ನೋಡು ನಿನಾಣೆ ನಿನ್ನೊಡನೆ ಬಪ್ಪೆಂ ಬಸವ
ನಿನ್ನನಗಲ್ದಿರಲಾರ್ಪನೇ ಬಸವ ಬಸವಣ್ಣ
ನೀನಿಂತಳುತ್ತಿರ್ಪೊಡೆನಗರಿದು ಬಸವಣ್ಣ
ತಂದೆ ಬೇಡಯ್ಯ ಬೇಡಯ್ಯ ನೇಹದ ನಿಧಿಯೆ
ಹಿಂದುಗೊಂಡೇ ಬಪ್ಪೆನೆನ್ನ ಸುಕೃತದ ಸುಧೆಯೆ
ನೆನೆಯೆ ಮುಂದಿರ್ದಪೆಂ ಕರೆದೊಡೋ ಎಂದಪೆಂ
ಮನದೊಳಗೆ ಕರದೊಳಗೆ ತನುವಿನೊಳಗಿರ್ದಪೆಂ
ನಿಂದಲ್ಲಿ ನಿಂದಪೆಂ ನಡೆದಲ್ಲಿ ನಡೆದಪೆಂ
ಬಂದಲ್ಲಿ ಬಂದಪೆಂ ನುಡಿದಲ್ಲಿ ನುಡಿದಪೆಂ
ಬಿಟ್ಟುದಂ ಬಿಟ್ಟಪೆಂ ಪಿಡಿದುದಂ ಪಿಡಿದಪೆಂ
ನಟ್ಟುದಂ ನಟ್ಟಪೆಂ ಕೇಳ್ದುದಂ ಕೇಳ್ದಪೆಂ
ಆಡಿದುದನಾಡುವೆಂ ನೋಡಿತಂ ನೋಡುವೆಂ
ಮಾಡಿತಂ ಮಾಡುವೆಂ ಕೂಡಿತಂ ಕೂಡುವೆಂ
ನಡೆಯಯ್ಯ ನಡೆ ಮಗನೆ ನಡೆ ತಂದೆ ಬಸವಣ್ಣ
ಪೊಡವಿಗಧಿಪತಿಯಾಗಿ ಬಾಳೆನ್ನ ಬಸವಣ್ಣ
ಎಂದಲ್ಲಿ ಕರುಣಿಸಿದ ಮಾತು ಸಂಬಳವಾಗಿ
ಬಂದನೆಂತೆಂತಕ್ಕೆ ಅಗಲಲಾಱದೆ ರಾಗಿ
ಸಂಗಮನ ಕರುಣವೇ ತನಗೆ ಬೆಂಬಲವಾಗಿ
ಸಂಗಮ ಧ್ಯಾನವೇ ತನಗೆ ಸಂಗಡವಾಗಿ ॥ (೫ ಸ್ಥಲ. ೯, ೨೩)

೪. ಷಟ್ಪದಿ :

ಪಂಪ ಮುಂತಾದ ಹತ್ತನೆಯ ಶತಮಾನದ ಕವಿಗಳಲ್ಲಿ ಷಟ್ಪದಿ ಸಿಕ್ಕುವುದಿಲ್ಲ. ವೀರಶೈವ ಕವಿಯಾದ ರಾಘವಾಂಕನು ಮೊದಲು ಷಟ್ಪದಿಯನ್ನು ನಿರ್ಮಿಸಿದನೆಂಬ ಪ್ರತೀತಿ ಇದೆ. ಹರಿಹರನು ಕಥನಕಾವ್ಯಕ್ಕೆ ಹೇಗೆ ಹೊಸಬಗೆಯ ಲಲಿತರಗಳೆಯನ್ನು ಉಪಯೋಗಿಸಿದನೋ, ಹಾಗೆಯೇ ರಾಘವಾಂಕನೂ ಲಲಿತರಗಳೆಯಿಂದ ಕಟ್ಟಿದ ಹೊಬಗೆಯ ಪದ್ಯವನ್ನು ಸೃಷ್ಟಿಸಿರಬಹುದು. ಇದು ಆತನ ಹರಿಶ್ಚಂದ್ರಕಾವ್ಯ, ಸಿದ್ಧರಾಮಪುರಾಣಗಳಲ್ಲಿ ಕಂಡುಬರುವ ವಾರ್ಧಕಷಟ್ಪದಿ. ರಾಘವಾಂಕನು ಶರ ಷಟ್ಪದಿಯನ್ನೂ ಬರೆದಿದ್ದಾನೆಂದು ಕವಿಚರಿತೆಯಲ್ಲಿ ಹೇಳಿದೆ (ಪುಟ ೨೪೪). ಕುಮುದೇಂದು

(ಸು.೧೨೭೫) ಎಲ್ಲಾ ಜಾತಿಯ ಷಟ್ಪದಿಗಳನ್ನೂ ಉಪಯೋಗಿಸಿದ್ದಾನೆ. ಷಟ್ಪದಿಯ ನಿರ್ಮಾಣ ೧೨- ೧೩ನೆಯ ಶತಮಾನವೆಂದಾಯಿತು.

ನಾಗವರ್ಮನಲ್ಲಿ ಒಂದು ಷಟ್ಪದಿಯ ಲಕ್ಷಣವನ್ನು ಹೇಳಿದೆ : "ಷಟ್ಪದಿಯ ಲಕ್ಕಣಮಂ ಪೇೞ್ವೆಂ"-

ಮಂದರಧರಗಣ
ಮೊಂದಿರೆ ಕಡೆಯೊಳ್
ಕುಂದದೆ ನೆಲಸುಗೆ ಮದನಹರಂ
ಇಂದುನಿಭಾನನೆ
ಮುಂದಣ ತೆಱನೀ
ಯಂದಮೆಯಾಗಲೆ ಷಟ್ಪದಿ ಕೇಳ್ (೫- ೨೫೯)

ಎರಡನೆಯ ಪಾದದಲ್ಲಿ 'ಬಂದಿರ್ಕಾರಂತ್ಯದೊಳ್', 'ಬಂದಿರಾರಂತ್ಯದೊಳ್' ಎಂಬ ಪಾಠಾಂತರಗಳುಂಟು. ೫, ೬ ನೆಯ ಪಾದಗಳಿಗೆ 'ಮುಂದಣ ಪದ ನೀ । ಯಂದದೊಳಿರೆ ಶರಷಟ್ಪದಿಯೇ' ಎಂಬ ಪಾಠಾಂತರವಿದೆ.

ಇದನ್ನು ನೋಡಿದರೆ ನಾಗವರ್ಮನ ಕಾಲದಲ್ಲಿ ಒಂದೇ ಒಂದು ಷಟ್ಪದಿಯಿತ್ತೆಂದೂ (೬ ವಿ + ೧ ರು, ಎರಡು ಸಲ), ಇದಕ್ಕೆ ಶರಷಟ್ಪದಿ ಎಂಬ ಹೆಸರನ್ನು ಆಮೇಲೆ ಕೊಟ್ಟರೆಂದೂ, ಊಹಿಸಬೇಕಾಗುತ್ತದೆ.

ಸು. ೧೧೭೯ ರಲ್ಲಿದ್ದ ಚಂದ್ರರಾಜನ ಮದನತಿಲಕವೆಂಬ ಗ್ರಂಥದಲ್ಲಿ ಷಟ್ಪದಿಯ ಪ್ರಯೋಗವಿದೆ (ಕವಿಚರಿತೆ, ಪುಟ ೯೩- ೯೪).

" ಅಂಗನೃಪಾಯತಿ ತುಂಗಭುಜಂ ಕಲಿಯಿಂಗಿತ ಶಿಕ್ಷಿತನಿಂದುಯಶಂ
ಪಿಂಗಜದೊಂ ಗತಭೃಂಗಕಚಂ ಕಲಿ ಮಂಗಳಲಕ್ಷಣಯುಕ್ತನಿವಂ
ಸಂಗರಕೇಸರಿ ಸಂಗಗುಣಂ ಬಲಿ ಭೃಂಗರದಕ್ಷನು ವಾಯುತನುಂ
ಸಂಗದ ಸನ್ಮತಿ ರಂಗವಹಂ ಸಲೆ ಭಂಗಿಯನೀಕ್ಷಿಸಿ ಮಾಚನೃಪಂ

ಇದುವೆ ಇಡೆಯಕ್ಕರಮುಂ, ಕಿಱಿಯಕ್ಕರಮುಂ, ಚೌಪದಿಕೆಯುಂ ಎರಡು ಷಟ್ಪದಿಯುಂ . . . ಅಕ್ಕುಂ" (ಶರಷಟ್ಪದಿ ಎಂದು ಕರೆದಿಲ್ಲ).

ಈ ಪದ್ಯದಿಂದಲೂ, ನಾಗವರ್ಮನ ಲಕ್ಷಣಪದ್ಯದಿಂದಲೂ, ಈ ಷಟ್ಪದಿ ನಾಲ್ಕು ಮಾತ್ರೆಯ ವಿಷ್ಣುಗಳಿಂದ ರಚಿತವಾಗಿರುವಂತೆ ಕಾಣುತ್ತದೆ.

ವಿ । ವಿ ।   ೪ । ೪
ವಿ । ವಿ ।   ೪ । ೪
ವಿ । ವಿ । ರು (= ವಿ । ಗು) ॥ ೪ । ೪ । ೪ । ೨ ॥
-ಎರಡು ಸಲ

ಬಂದಿರ್ಕಾರಂತ್ಯದೊಳ್, ಬಂದಿರಾರಂತ್ಯದೊಳ್ ಎಂಬ ಪಾಠಾಂತರಗಳನ್ನು ನೋಡಿದರೆ ಮಾತ್ರಾವಿವಕ್ಷೆಯಿಲ್ಲದೆ ಅಂಶವಿವಕ್ಷೆ ಮಾತ್ರ ಉಳ್ಳ ವಿಷ್ಣುಗಣಗಳು ಮುಂಚೆ ಇದ್ದು ಆಮೇಲೆ ಮಾತ್ರಾನಿಯಮವೂ ಉಂಟಾಯಿತೋ ಎಂಬ ಊಹೆ ಏಳುತ್ತದೆ. ಕ್ರಮೇಣ ಅಂಶಜ್ಞಾನ ಬಿಟ್ಟುಹೋಗಿ, ಮಾತ್ರೆ ಮಾತ್ರ ಲಕ್ಷ್ಯವಾಗಿ, – –, ᴗ ᴗ – ಈ ಬ್ರಹ್ಮಗಣಗಳೂ ೪ ಮಾತ್ರೆಯಾದುದರಿಂದ ಸೇರಬಹುದಾಗಿರಬೇಕು. ತೆಲುಗಿನಲ್ಲಿ ಹೇಳಿರುವ ಲಕ್ಷಣಗಳು ಅಂಶಗಣಗಳಾಗಿವೆ :

ತ್ರಿದ. ಶೇಂ. ದ್ರ । ಗಣ. ಮು. ಲು । ವೆಲ. ಯ. (ನಿರ್) । ಮೂ. ಡಿ. ಡಿ
    ಕದಿಯ ನಂತ್ಯಂಬುನ ಜಂದ್ರುಗೂರ್ಚಿ
ತುದಿಯಿಟ್ಲು ಗಾ ಮದಿ ಜೆ (ಪ್ಪಿನನದಿಯ) ಷ
    ಟ್ಪದಮಗು ಮಲ್ಲಿಯ ರೇಚ (ನಾಖ್ಯ)- ಕವಿಜನಾಶ್ರಯಮು.
ಪ್ರಾಸಮುಲ್ ಮುಮ್ಮಾಱು । ವಾಸವುಲಾಱಿಸ್ಗಿರಿ ।
    ಪೈಸುಧಾದೀಧಿತಿತೋ ನಿರ್ಯತಿ ॥
ಭಾಸಿಲ್ಲಗಾಂಬಾದ । ಮೀ ಸೂಟಿತೋ ನಾಲ್ಗು ।
     ಜೇಸಿನ ಕೃತುಲಂದು ಷಟ್ಪದಾಖ್ಯ ॥- ಅಪ್ಪಕವೀಯಮು.

ತ್ರಿಪದಿ ಮೊತ್ತಮೊದಲು ಈ ರೂಪದಲ್ಲಿ ಎರಡು ಪಾದಗಳಿಂದ ಆರಂಭವಾಗಿರಬಹುದೆಂದು ಹಿಂದೆ ಊಹಿಸಲಾಯಿತು.

ವಿ । ವಿ । ವಿ (ಪ್ರಾಸ) । ವಿ ।

ವಿ । ಬ್ರ । ಬ್ರ । ಗು.

ಇಲ್ಲಿ ಎಲ್ಲಾ ಗಣಗಳೂ ವಿಷ್ಣುವಾದರೆ, ಮೊದಲನೆಯ ಪ್ರಾಸದ ಎರಡು ಭಾಗಗಳನ್ನು ಎರಡು ಪಂಕ್ತಿಗಳಾಗಿ ಹೇಳಿದರೆ, ಷಟ್ಪದಿಯ ಅರ್ಧವಾಗುತ್ತದೆ. ಇದನ್ನು ಒಂದು ರೀತಿ ಹೆಚ್ಚಿಸಿ ತ್ರಿಪದಿಯಾಗಿಯೂ, ಮತ್ತೊಂದು ರೀತಿ ಹೆಚ್ಚಿಸಿ ಷಟ್ಪದಿಯಾಗಿಯೂ ಬೆಳಸಿದಂತೆ ಕಾಣುತ್ತದೆ. ಅಂತೂ, ಅಂಶಗಣದಲ್ಲಿದ್ದು (೬ ವಿ + ೧ ರು = ೬ ಇಂದ್ರ + ೧ ಚಂದ್ರ) ಮಾತ್ರಾಗಣಕ್ಕೆ (೭ ವಿ = ೪ + ೨) ತಿರುಗಿದ ಶರಷಟ್ಪದಿ ಸಿದ್ಧವಾಯಿತು. ಇದರ ರಚನೆಯ ಕ್ರಮವನ್ನನುಸರಿಸಿ ಮಿಕ್ಕ ಷಟ್ಪದಿಗಳು ಹುಟ್ಟಿದ ಹಾಗೆ ಕಾಣುತ್ತದೆ.

ಛಂದೋಂಬುಧಿಯಲ್ಲಿ ಮಿಕ್ಕ ಐದು ಷಟ್ಪದಿಗಳನ್ನು ಹೇಳುವ ಪದ್ಯಗಳು ಅನ್ಯಕರ್ತೃಕಗಳೆಂದು ಊಹಿಸಬಹುದು. (ಕಾವ್ಯಕಲಾನಿಧಿ ಮುದ್ರಣ : ಪುಟ ೮೧– ೮೩, ಟಿಪ್ಪಣಿ, ಪುಟ ೩೩– ೩೫). ಅವು ಈಗ ಪ್ರಚಾರದಲ್ಲಿರುವ ಆರು ಷಟ್ಪದಿಗಳ ಲಕ್ಷಣವನ್ನೂ, ಅವು ರಚಿತವಾಗಿರುವ ಕ್ರಮವನ್ನೂ ತಿಳಿಸುವುದರಿಂದ ಇಲ್ಲಿ ಅವನ್ನು ಎತ್ತಿ ಬರೆಯಬಹುದು:

ಒಂದಿದ ಋತುಷಟ್ಪದಿಗಳೊ
ಳೊಂದೇ ತೆಱನೆರಡು ಪಾದಮುಂ ಮೇಣ್ ಮುಂದ
ಕ್ಕೊಂದದರೆ ಬರ್ಕುಂ ತುದಿಯ
ಲ್ಲಿಂದುಧರಂ ಬಂದೊಡಱೆಗೆ ಷಟ್ಪದಿಯ ತೆಱಂ

ತೋಱುವ ಮಾತ್ರೆಯ ಷಟ್ಪದಿ
ಗಾಱೂಱಡಿಯೆರಡಱಲ್ಲಿಯೊಂದೇ ನಿಯಮಂ
ಮೂಱಕ್ಕೊಂದು ತದರ್ಧಂ
ಬೇಱೀಶಂ ಕಡೆಯೊಳೆಲ್ಲಮೀ ತೆಱನಕ್ಕುಂ

ಶರ ಕುಸುಮ ಭೋಗ ಭಾಮಿನಿ
ಪರಿವರ್ಧಿನಿ ವಾರ್ಧಕಂಗಳೆಂದಾಱು ತೆಱಂ
ಕರಿ ದಶ ರವಿ ಮನು ರಾಜರ್
ಬರೆ ವಿಶಂತಿ ಮಾತ್ರೆಯಿಂದೆ ಷಟ್ಪದಿ ನಡೆಗುಂ

ಇವುಗಳ ಜೊತೆಗೆ ಇವೇ ಲಕ್ಷಣಗಳನ್ನು ಆಯಾ ಬಗೆಯ ಷಟ್ಪದಿಯಲ್ಲಿಯೇ ನಿರೂಪಿಸುವ ಪದ್ಯಗಳೂ ಇವೆ.

ಈ ಲಕ್ಷಣಗಳು ಯಾವುವೆಂದರೆ,

(i) ಷಟ್ಪದಿಯ ರಚನೆ : ಪೂರ್ವಾರ್ಧದ ಎರಡು ಅಡಿ ಒಂದೇ ರೀತಿ; ಮೂರನೆಯ ಅಡಿ ಒಂದೂವರೆಯಷ್ಟು + ಗುರು; ಉತ್ತರಾರ್ಧವೂ ಹೀಗೆಯೇ.

(ii) ಷಟ್ಪದಿಗಳು ಆರು ಬಗೆ : ಶರ, ಕುಸುಮ, ಭೋಗ, ಭಾಮಿನಿ, ಪರಿವರ್ಧಿನಿ, ವಾರ್ಧಕ.

(iii) ಮಾತ್ರೆಗಳು : ಪಾದ : ೧, ೨, ೪, ೫ : ಶರ– ೮: ಕುಸುಮ– ೧೦ : ಭೋಗ– ೧೨; ಭಾಮಿನಿ– ೧೪; ಪರಿವರ್ಧಿನಿ– ೧೬; ವಾರ್ಧಕ– ೨೦.

ಪಾದ ೩, ೬ : ಮೇಲಿನ ಸೂತ್ರದಂತೆ :

ಶರ . . . ೮ + $\frac{೮}{೨}$ + ೨ = ೧೪

ಕುಸುಮ . . . ೧೦ + $\frac{೧೦}{೨}$ + ೨ = ೧೭

ಭೋಗ . . . ೧೨ + $\frac{೧೨}{}$ + ೨ = ೨೧

೨

೧೪
ಭಾಮಿನಿ ... ೧೪ + − + ೨ = ೨೩
೨

೧೬
ಪರಿವರ್ಧಿನಿ ... ೧೬ + − + ೨ = ೨೬
೨

೨೦
ವಾರ್ಧಕ ... ೨೦ + − + ೨ = ೩೨
೨

೩, ೬ ನೆಯ ಪಾದಗಳ ಕೊನೆಯ ಅಕ್ಷರ ಲಘುವಾಗಿದ್ದರೂ ಗುರುವೆಂದೇ ಲೆಕ್ಕ.

ಈ ಲಕ್ಷಣಗಳಲ್ಲಿ ಪಾದಕ್ಕೆ ಮಾತ್ರೆಗಳನ್ನು ಹೇಳಿತೇ ಹೊರತು ಗಣವಿಚಾರವನ್ನು ಹೇಳಿಲ್ಲ; ಅಂಶವಿಚಾರವನ್ನೂ ಹೇಳಿಲ್ಲ. ಆದರೂ ಗಣಸ್ವರೂಪವನ್ನೂ, ಅಂಶಸ್ವರೂಪವನ್ನೂ ಮರೆಯಬಾರದು.

(i) ಗಣಗಳು :

ಶರ ... ಎರಡು ಗಣಗಳು : ೨ * ೪ = ೮
ಕುಸುಮ ... ” : ೨ * ೫ = ೧೦
ಭೋಗ ... ನಾಲ್ಕು ಗಣಗಳು : ೪ * ೩ = ೧೨
ಭಾಮಿನಿ ... ” : ೩.೪. ೩.೪ = ೧೪
ಪರಿವರ್ಧಿನಿ ... ” : ೪ * ೪ = ೧೬
ವಾರ್ಧಕ ... ” : ೪ * ೫ = ೨೦

ಮೂರು ಆರನೆಯ ಪಾದಗಳು ಆರು ಗಣಗಳು + ಗುರು.

ಇಲ್ಲಿ ಎರಡು ವಿಷಯಗಳನ್ನು ಗಮನಿಸಬೇಕು :

೧ . ಗಣಗಳು : ಉತ್ಸಾಹ, ಮಂದಾನಿಲ, ಲಲಿತರಗಳೆಗಳ ಗಣಗಳು :

ಭೋಗ– ಉತ್ಸಾಹ, ೩ ಮಾತ್ರೆ; ಶರ, ಪರಿವರ್ಧಿನಿ– ಮಂದಾನಿಲ, ೪ ಮಾತ್ರೆ; ಕುಸುಮ, ವಾರ್ಧಕ– ಲಲಿತ, ೫ ಮಾತ್ರೆ; ಭಾಮಿನಿ– ಉತ್ಸಾಹ + ಮಂದಾನಿಲ, ೩ + ೪ ಮಾತ್ರೆಗಳು.

೨. ರಚನೆ : ಭೋಗ ... ೩.೩.೩.೩. = ೪ * ೩ = ೨(೩.೩)
ಶರ ... ೪. ೪ = ೨ *೪
ಪರಿವರ್ಧಿನಿ ... ೪.೪.೪.೪ = ೪ * ೪ = ೨(೪.೪)
ಕುಸುಮ ... ೫. ೫ = ೨ * ೫
ವಾರ್ಧಕ ... ೫.೫.೫.೫ = ೪ * ೫ = ೨(೫.೫)
ಭಾಮಿನಿ ... ೩.೪, ೩.೪ = ೨(೩.೪)

ಹೀಗೆ ಆರು ಷಟ್ಪದಿಗಳು ೪ ಜಾತಿಯಾಗಿ ವಿಂಗಡವಾಗುತ್ತವೆ. ಮತ್ತು ಶರ ಕುಸುಮಗಳಲ್ಲಿ ಪಾದಕ್ಕೆ ಎರಡು ಗಣವಿದ್ದಂತೆಯೇ ದ್ವಿಗಣಗಳನ್ನು ಇಟ್ಟುಕೊಂಡರೆ ಭೋಗ, ಪರಿವರ್ಧಿನಿ, ವಾರ್ಧಕಗಳೂ, ಭಾಮಿನಿಯೂ ಎರಡು ಖಂಡದ ಪಾದವನ್ನೇ ತೋರಿಸುತ್ತವೆ. ಷಟ್ಪದಿಗಳೆಲ್ಲಾ ೨ ಏಕಗಣ, ಅಥವಾ ೨ ದ್ವಿಗಣಗಳಿಂದ ಮಾಡಿದುವಾಗಿರುತ್ತವೆ. ಭಾಮಿನಿಯ ಗಣ ರುದ್ರಗಣದಿಂದ ಉತ್ಪನ್ನವಾದ ಹಾಗೂ ಭಾಸವಾಗುತ್ತದೆ.

(ii) ಅಂಶಗಳು : ಷಟ್ಪದಿ ಈಗ ಮಾತ್ರೆಗಳಿಂದ "ನಡೆ" ದರೂ ಒಮ್ಮೆ ಅಂಶಗಳಿಂದ "ನಡೆ" ಯುತ್ತಿದ್ದಿತೆಂಬುದನ್ನೂ, ಮಾತ್ರೆ ಪ್ರಧಾನವಾದರೂ, ಪಾದವನ್ನು ಗಣವಾಗಿ ಒಡೆಯುವುದೇ ಅಲ್ಲದೆ, ಅಂಶವಾಗಿಯೂ ಒಡೆಯುವ ಹಾಗಿರಬೇಕೆಂಬುದನ್ನೂ, ಮರೆಯಬಾರದು. ಒಳಗೆ ಕುಳಿತಿರುವ ಅಂಶವನ್ನು ಲಕ್ಷಿಸದೇ ಹೋದರೆ ಹಾಡಿನ ಸೊಗಸು ಕೆಟ್ಟು ಛಂದಸ್ಸು ಕಿವಿಗೆ ಇಂಪಾಗಲಾರದು.

ಇದಕ್ಕೆ ಕೆಲವು ಉದಾಹರಣೆಗಳನ್ನು ಕೊಡಬಹುದು:

ಈ.ಶ.ನ । ಕರು.ಣೆ. ಯ ।

ನಾ.ಶಿ. ಸು । ವಿನ.ಯ.ದಿ ।

ದಾ.ಸ.ನ । ಹಾ.ಗೆ.ಯೆ । ನೀ.ಮ.ನ । ವೇ :

ಕ್ಲೇ.ಶ.ವ ।ವಿಧ.ವಿ.ಧ ।

ಪಾ.ಶ.ವ ।ಹರಿ.ದು.ವಿ।

ಲಾ.ಸ.ದಿ । ಸ.ತ್ಯ.ವ । ತಿಳಿ.ಮ.ನ ।ವೇ : (ಪದ್ಯಸಾರ, ಪುಟ ೨೦)

ಇಲ್ಲಿ ಹರಿ. ದು.ವಿ । ಲಾ.ಸ.ದಿ ಎಂಬ ಕಡೆ ಅಂಶದ ಹೊಂದಿಕೆ ಚೆನ್ನಾಗಿದೆ.

ಕೆಲ.ಕೆಲ.ವೆ । ಡೆಯೊ.ಳು ಕೆಂ ।

ದಳಿ.ರ.ನೊಲ । ವಿಂ.ದೆ.ಕೆಂ ।

ದಳ.ಕೆ.ಪಡಿ । ಯಿಡು.ವಂ.ತೆ । ಲ.ಕ್ಷ್ಮೀ.ವ । ರಂ.

ಲಲಿ.ತ.ತರ । ಭ.ಕ್ತಿ.ಯಿಂ ।

ನಲಿ.ನಲಿ.ದು । ಪಸ.ರಿಸು.ತಿ ।

ರಲು.ಸೀ.ತೆ । ಮೆ.ಲ್ಲ.ಮೆ । ಲ್ಲನೆ. ನಡೆ. ದ । ಳು.(ಪುಟ ೨೩)

ಇಲ್ಲಿ ೧ನೆಯ ಪಾದದಲ್ಲಿಯೂ, ೫– ೬ ನೆಯ ಪಾದಗಳ ಸಂಧಿಸ್ಥಳದಲ್ಲಿಯೂ ಛಂದಸ್ಸಿನ ಓಟ ಕೆಟ್ಟಿದೆ; ಅಂಶದ ಸೂಕ್ಷ್ಮವನ್ನು ನೋಡದೆ ಹೋದುದರಿಂದ. ೩–೪ನೆಯ ಪಾದಗಳು ಲಕ್ಷಣವಾಗಿವೆ.

ತಿರು.ಕ । ನೊ.ರ್ವ । ನೂ.ರ । ಮುಂ.ದೆ ।

ಮುರು.ಕು ।ಧ.ರ್ಮ । ಶಾ.ಲೆ । ಯ.ಲ್ಲಿ ।

ಯೊರ.ಗಿ ।ರು.ತ್ತ । ಲೊಂ. ದು । ಕನ.ಸ । ಕಂ.ಡ । ನೆಂ.ತೆ । ನೆ–

ದ್ವಿಗಣಗಳು; ಓಟ ಸರಿಯಾಗಿದೆ.

ಭ,ಟ್ಟಿ । ನಿ.ಗಳ । ಕೂಡಿ ।.ನಲ್ಲ . . . (ದ್ವಿಗಣದ ಬೀಸು 'ನಿಗಳ' ಎಂಬ ಒತ್ತಿಲ್ಲದ ಗಣವನ್ನು ಎತ್ತಿ ಹಿಡಿಯುತ್ತದೆ.)

ಓ.ಲ । ಗದ.ಲ್ ಇ । ರು.ತ್ತ– (ಸರಿಯಾಗಿದೆ. ಕೆಲ.ಕೆಲ.ವ್.ಎ ।ಡೆಯೊಳು ಕೆಂ– ಎಂದು ಕೆಟ್ಟಿರುವ ಕಡೆಯನ್ನು ಹೋಲಿಸಿ).

ಬಾಲೆ । ಯರನು । ನೋಡಿ । ಮದುವೆ । ಮಾಡ । ಬೇಕೆ । ಲೈ. (ಪುಟ. ೨೪,೨೫)

ಈ ಅಂಶ, ಪದ, ಒತ್ತು– ಈ ಸೂಕ್ಷ್ಮಗಳ ರಹಸ್ಯವನ್ನು ಹಿಡಿದರೆ ಷಟ್ಪದಿಗಳ ಪಾದಗಳನ್ನು, ಪದವಿನ್ಯಾಸವನ್ನು, ಅರ್ಥಸ್ಫೂರ್ತಿಯನ್ನು, ಕವಿ ಕೌಶಲ್ಯದಿಂದ ಛಂದಸ್ಸಿನ ನಾಟ್ಯದಲ್ಲಿ ಕುಣಿಸಬಲ್ಲನು. ಬೆರಳು ಮಡಿಸಿ ಬರಿಯ ಗಣದ ಲೆಕ್ಕಾಚಾರವಾದರೆ ಕವಿತೆಯ ಕುದುರೆ ಕುಂಟುತ್ತದೆ.

/ /

ಕೇ.ಳು । ತವ.ರ.ದು । ರು. ಕ್ತಿ । ಗಳಿ. ಗ (ಗ್ ಅ).ನು

/ / / /

ಕೂ. ಲ । ಬಡ.ದೆ. ॥ ಮ । ಹೋ. ಗ್ರ । ಕೋ. ಪ. ಛ ।

/ / / / / /

ಡಾ. ಳಿ । ಸಲು ॥ ಮುರಿ । ಮೀ. ಸೆ । ಕುಣಿ ಕು.ಣಿ । ದಾ. ಡೆ । ಕ.ಣ್ಗ.ಳ । ಲಿ.

ಇಲ್ಲಿಯ ಅಂಶ, ಪದ, ಒತ್ತು ಮತ್ತು ಯತಿಗಳ ವಿನ್ಯಾಸವನ್ನು ನೋಡಿ. ಇಂಗ್ಲಿಷಿನಲ್ಲಿ ಹೇಗೆ ಕವಿಗಳು ಸರಳ ರಗಳೆಯಲ್ಲಿ ಯತಿಯನ್ನು ಹಿಂದೆ ಮುಂದೆ ಸರಿಸಿ ಚೆಲುವುಗೊಳಿಸುವರೋ, ಹಾಗೆ ನಮ್ಮ ಷಟ್ಪದಿಯಗಳಲ್ಲೆಲ್ಲಾ ರಾಜಷಟ್ಪದಿಯಾದ ಭಾಮಿನೀ ಷಟ್ಪದಿಯಲ್ಲಿ ಈ ಯತಿವಿನ್ಯಾಸದ ಧೋರಣೆಯಿಂದ ಕುಮಾರವ್ಯಾಸ, ಚಾಮರಸ ಮುಂತಾದ ಕವಿಶ್ರೇಷ್ಠರು ತಮ್ಮ ಅತ್ಯುತ್ಕೃಷ್ಟವಾದ ಛಂದೋರಚನೆಯನ್ನು ತೋರಿರುವರು.

ಅದ.ಜಿಸೊ । ಳವ. ನೀ. । ಕಾಂ.ತೆ । ಗೊ.ಪ್ಪು.ವ ।

ವದ. ನ ।ವೋ ॥ ಶೃಂ । ಗಾ. ರ । ಸಾ.ರ.ದ ।

ಸದ. ನ । ವೋ ॥ ಸೊ.ಬ.। ಗಿನ.ಸು । ಮಾ.ನ.ದ । ಸುಖ.ದ । ನೆಲೆ.ವೀ । ಡೋ ॥

ಸುದ.ತಿ । ರ.ತ್ನ.ಗ । ಳೊಗೆ. ವ । ಚೆಲು.ವಂ ।

ಬುಧಿ.ಯೊ ॥ ಪೇ.ಳೆ. ನೆ । ಸಕ.ಲ. । ಸಂ.ರಂ ।

ಭದ.ಲಿ । ಸೊಗ. ಸಿ ಹು । ದ. ಲ್ಲಿ । ಬನ.ವ.ಸೆ । ಯೆಂ.ಬ । ಪ.ಟ್ಟ.ಣ । ವು.॥
(ಪುಟ ೩೧)

ಈ ತ । ಮವ ಧಿ । ಕ್ಕರಿಸಿ । ಭವದೀ
ಯಾ ತ । ಪದಿ ಧರೆ । ಯನು. ಬೆ । ಳಗು.ವ. ಮ ।
ಹಾ ತ । ರಣಿ ಬಾ । ರೆಂದು । ಕೋಳಿಗ । ಳುಲಿದು । ಕೂಗಿದವು । (ಪುಟ ೬೦)

ಇಲ್ಲಿ ಎರಡನೆಯ ಪಂಕ್ತಿ ಹದಗೆಟ್ಟಿದೆ : ಗುರುಲಘು ವಿನ್ಯಾಸ, ಅಂಶದೃಷ್ಟಿ, ಸರಿಯಾಗಿಲ್ಲದ್ದರಿಂದ. ಲಾಲಿತ್ಯ ಕೆಡಿಸುವುದಕ್ಕೆ ಕಾರಣವೂ ಏನೂ ಇಲ್ಲ.

ಎಲೆ.ಬ । ಡವೆ. ನೀ । ನಾ.ರು । ಈ.ಮ ।
ಕ್ಕಳ.ಸ । ಹಿತ. ಲೆ । ತ್ತೆ.ತ್ತ । ಪೋ.ದ.ಪೆ ।
ಬಳ.ಲ್ದೆ । ಯೆನೆ. ದೇ । ಸಿಗಿ.ತಿ । ತಾ.ನು.ನಿ । ಷಧೆ.ಯೆ । ನಿಪೆ. ನ । ಣ್ಣಾ ॥ (ಪು ೬೨)

–ಇದು ಲೆಕ್ಕಾಚಾರದ ಛಂದಸ್ಸು.

ಪಾರದೆ । ಸೆರಗಂ । ಬೆರಗಂ । ಬಳಸಲ್ ।
ಮಾರುತ । ತನಯಂ । ಮಹಿಷಾ । ಸುರನೆನೆ ।
ಧೀರಂ । ಪೆರ್ಗೊಂ । ಬಿಂ ನು । ಗ್ಗಪ್ಪಿನೆ । ಗಂ ಪೊ । ಯ್ದು ತವಿಸಿ । ದಂ.

–ಮೂರನೆಯ ಪಾದ ಹಿಗ್ಗಾ ಮುಗ್ಗಾ ಎಳೆದಂತಿದೆ.

ಗತಿ ಹಾ । ನಿಗೆ ಮತಿ । ಹಾನಿಗೆ ವಿದ್ಯಾ ।
ತತಿ ಹಾ । ನಿಗೆ ಪ । ಕ್ಕಾದ ದು । ರಾತ್ಮಂ. . .
ಹತಿಯಿಸು । ವೆನೆನುತ । ಮಸಗಿದ । ನಾ ಭ್ರೂ । ಕುಟಿಮುಖ । ದಶಮುಖನು.

–ಈ ನಾಲ್ಕು ಮಾತ್ರೆಯ ತಾಳ ಏಕನಾದದಂತೆ ಬೇಗ ಬೇಸರಗೊಳಿಸುವುದು.

ಕವಿ ವಾಕ್ಯಭಾಗಗಳಿಗೂ. ವೈವಿಧ್ಯಕ್ಕೂ, ಓಟಕ್ಕೂ ಗಮನಕೊಡಬೇಕು.

ಪೇ.ಳ.ಲೇ । ನಹು.ದಿ.ನ್ನು । ಬ.ಭ್ರು.ವಾ । ಹನ. ನೊಡ.ನೆ ।
ಕಾ.ಳ.ಗಂ । ಗೊಡು.ವೆ. ನಾಂ । ಕುಲ.ಕೆ.ಮಗ । ನೀ.ನೊ.ರ್ವ ।
ಬಾ.ಳುವೆ.ಗೆ. । ಡಿಸ. ಬೇಡ. . . .(ಜೈಮಿನಿ. ೨೩, ೯)

ಕ
ಬ್ಬಗಳನುಸು । ರಿದರದೇ । ಲಕ್ಷ್ಯಮ । ಲ್ಲದೆ ಪೆಱತೆ
ನಗೆ ಸಲ್ಲ । ದದರಿಂದೆ.. . . .(೧, ೧೦)
ಉನ್ನತ ಪ । ರಾಕ್ರಮಿ ತ । ಡೆಯಲಿ ವಾ । ಜಿಯನೆಂದು. . . .(೨, ೨೮)
ಚಲಿತಲೀಲಾಸ್ಯದ ಪತಾಕೆಗಳ ಲಾಸ್ಯದ ಪ
ವಳದ ಮುತ್ತುಗಳ ಗೊಂಚಲ್ ಗೊತ್ತುಗಳ. . . (೩, ೧೭)
ಏಕಾರ್ಣವಂ ಮೇರೆದಪ್ಪಿತೆನೆ ಮುಸುಕಿದಂ ಕಣೆಯಿಂದವನ ರಥವನು
(೪, ೩೪)

–ಈ ಸ್ಥಳಗಳಲ್ಲಿ ಛಂದಸ್ಸು ಕಿವಿಗೆ ಹಿತವಾಗಿದೆಯೆ?

ಕಡೆಯದಾಗಿ ಲಕ್ಷ್ಮೀಶನ ದಿವ್ಯಗಾನವನ್ನು ಕೇಳಿ ನಲಿಯೋಣ :

ಭೂ.ವ್ಯೋ.ಮ । ಪಾ.ತಾ.ಳ । ಲೋ.ಕಂ. ಗ । ಳ.ಲ್ಲಿ. ಸಂ ।
ಭಾ.ವ್ಯ.ರೆಂ । ದೆನಿ.ಸಿ.ಕೊ । ಳ್ವಖಿ.ಳ.ದೇ ।ವ.ರ್ಕ.ಳಿಂ ।
ಸೇ.ವ್ಯ.ನಾ । ದಜ.ನ.ಪ । ಟ್ಟದ. ರಾ.ಣಿ । ವರ.ದೆ.ಕ ।
ಲ್ಯಾಣಿ. ಫಣಿ । ವೇ.ಣಿ.ವಾ । ಣಿ
ಕಾ.ವ್ಯ.ಮಿದು । ಭುವ.ನ.ದೊಳ್ । ಸಕ.ಲ. ಜನ । ರಿಂ.ದೆ. ಸು ।
ಶ್ರಾ.ವ್ಯ.ಮ । ಪ್ಪಂ.ತೆ.ನ್ನ. । ವದ.ನಾ.ಬ್ಜ । ದ.ಲ್ಲಿ.ನೀ ।
ನೇ.ವ್ಯಾ.ಪಿ । ಸಿ.ರ್ದ.ಮಲ । ಸು.ತಿಯಂ । ತಾ.ಯೆನ.ಗೆ ।
ತಾ.ಯೆ.ನಗೆ । ಗೂ.ಡಿ. ನೋ । ಡಿ ॥. (೧,೪)

ಪ್ರತಿಯೊಂದು ಗಣದಲ್ಲಿ ೫ ಮಾತ್ರೆಯಿದ್ದರೂ, ಅಂಶವಿನ್ಯಾಸ ಬೇರೆ ಬೇರೆಯಾಗಿ ಛಂದಸ್ಸಿನ ಹರಿತ ಸುಖವಾಗಿದೆ. ಭಾಮಿನೀ ವಾರ್ಧಕ ಷಟ್ಪದಿಗಳ– ಕನ್ನಡದ ಹಾಡುಕಟ್ಟಿನ– ಸೊಗಸೇ ಈ ಸಮತೆಯಲ್ಲಿ ವೈವಿಧ್ಯ : ವೈವಿಧ್ಯದಲ್ಲಿ ಸಮತೆ.

೫. ಯಕ್ಷಗಾನ, ಹೊಸ ಪ್ರಯೋಗಗಳು

ತ್ರಿಪದಿ, ಷಟ್ಪದಿ, ರಗಳೆ– ಇವು ಹೊಸಗನ್ನಡಕ್ಕೆ ಹೇಗೆ ಮಾತ್ರಾಗಣದಿಂದ ಕೂಡಿ ಹೊಂದಿಕೊಂಡುವು, ನೋಡಿದ್ದಾಯಿತು. ೩, ೪, ೫ ಮಾತ್ರೆಯ ಗಣಗಳು ಖಚಿತವಾಗಿ ಈ ಪದ್ಯಗಳಿಗೆ ಆಧಾರವಾದುವು. [೨] ಈ ಮೂರು ಗಣಗಳನ್ನು ಹಿಡಿದು ವೀರಶೈವ ಕವಿಗಳೂ, ಇತರರೂ ಎಷ್ಟೋ ಬಗೆಯ ಹೊಸ ಪದ್ಯಗಳನ್ನು ಕಟ್ಟಿದ್ದಾರೆ. ಲಾವಣಿಗಳು, ದಾಸರ ಪದಗಳು, ಜನಪದ ಸಾಹಿತ್ಯದ ಮಟ್ಟುಗಳು. ಗೀತಗಳು ಈ ಪದ್ಯಗಳನ್ನು ಯಥೇಷ್ಟವಾಗಿ ಬಳಸಿವೆ, ಮತ್ತು ಅಂಶಗಣಗಳನ್ನು ಉಳಿಸಿಕೊಂಡಿವೆ. ಅವುಗಳ ರಹಸ್ಯವನ್ನು ತಳಹದಿಯಾಗಿಟ್ಟುಕೊಂಡು ಆಧುನಿಕ ಕವಿಗಳು ಹೊಸ ಹೊಸ ಬಗೆಯ ಪದ್ಯಗಳನ್ನೂ, ಸರಳ ರಗಳೆಯನ್ನೂ, ಪ್ರಗಾಥಗಳನ್ನೂ ರಚಿಸುತ್ತಿದ್ದಾರೆ. ಪ್ರಾಸವನ್ನು ಬಿಟ್ಟೂ, ಇಟ್ಟೂ, ಹೊಸ ಥಳುಕನ್ನು ಕೊಟ್ಟೂ ಪರೀಕ್ಷಿಸುತ್ತಿದ್ದಾರೆ. ಕಥೆಗೆ, ಗೀತಕ್ಕೆ, ನಾಟಕಕ್ಕೆ, ಗ್ರೀಕ್ ನಾಟಕ, ಷೇಕ್ಸ್‌ಪಿಯರ್ ನಾಟಕಗಳ ಭಾಷಾಂತರಕ್ಕೆ ತಕ್ಕ ಛಂದಸ್ಸುಗಳನ್ನು ಸರಿಪಡಿಸಿಕೊಳ್ಳುತ್ತಿದ್ದಾರೆ. ಇವಕ್ಕೆಲ್ಲಾ ಸಂಪೂರ್ಣ ವಿವರಣೆ ಸಾಧ್ಯವಲ್ಲ; ಮತ್ತು ಅನಾವಶ್ಯಕ. ದಿಕ್ಪ್ರದರ್ಶನಾರ್ಥವಾಗಿ ಕೆಲವು ಉದಾಹರಣೆಗಳು ಸಾಕಾಗಿವೆ.

ಯಕ್ಷಗಾನ ಪ್ರಸಂಗಗಳಲ್ಲಿ ಸಾಮಾನ್ಯವಾಗಿ ಕೆಲವು ವೃತ್ತಗಳು, ಕಂದಗಳು, ದ್ವಿಪದ, ಸೀಸಪದ್ಯ, ತ್ರಿಮುಡೆ, ಸಾಂಗತ್ಯ, ಯಾಲಪದ ಮುಂತಾದುವು ಬರುತ್ತವೆ.

ದ್ವಿಪದಿ (ತೆಲುಗಿನಲ್ಲಿ ದ್ವಿಪದ) :

ಇಂದ್ರಗ । ಣಮುಲು ಮೂ । ಡಿನಗಣಂ । ಬೊಕಟಿ.

ಪಾದಕ್ಕೆ ಮೂರು ವಿಷ್ಣು, ಒಂದು ಬ್ರಹ್ಮ; ೫.೫.೫.೩–ಎರಡು ಸಲ.

ಹಸಿದು ಬಂ । ದವರಿಂಗ । ಶನವೀಯ । ಬೇಕು
ಶಿಶುಗಳಿಗೆ । ಪಾಲ್ಬೆಣ್ಣೆ । ಗಳ ನಡಸ । ಬೇಕು.

ಎರಡು ದ್ವಿಪದಿ ಕೂಡಿದರೆ ಚೌಪದಿ : ಲಕ್ಷಣ–

ಎಸೆವ ಚೌಪದಿಗೆ ಹದಿನೆಂಟು ಮಾತ್ರೆಗಳು.
ಸಸಿನೆ ಯತಿಯೆಂಟರಱೊಳು ಪಸರಿಸುತಲಿರಲು. . .(ಕಿಟಲ್)

ಸೀಸಪದ್ಯ

ಸುರಪತುಲಾರ್ಗುರಿಪೈ ಭಾ
ಸ್ಕರುಲಿರುವುರು ಗೂಡನೊಕ್ಕ ಚರಣಮು ಪೋಲ್ಚುಂ
ಬರಗುನತುನಾಲುಗಡುಗುಲ
ವಿರಮಮಪೈ ರೆಂಟ ರೆಂಟ ವೆಲಯಗವಲಯುರ್ ॥
ಪುರುಹೂತಗಣಗಳಾಱುಂ
ಸರಸಿಜಸಖಗಣಗಳೆರಡು ಸಂಧಿಸಿ ಬರ್ಕುಂ
ಚರಣಕ್ಕೆ ಸೀಸದಂತದೊ
ಲೊರಗಿಂತಹ ಸರಳ ತನ್ನೊಳೊಪ್ಪುವ ತೆಱದಿಂ (?) ॥

ಪಾದಕ್ಕೆ– ಆರು ವಿಷ್ಣು, ಎರಡು ಬ್ರಹ್ಮ : ಮಾತ್ರೆ : ೬ * ೫ + ೨ * ೩. ಯತಿ, ಎರಡೆರಡು ಗಣಕ್ಕೆ.

ತಿಂಗಳಂ ತಳೆದಿತ್ತ । ರಂಗಮಂಗಳ ಕರ್ತ । ತುಂಗ ಸೂರ್ಯ ಸುಭರ್ತ । ತಮಸನಾಶ ।
(ಒಂದು ಪಾದ– ಕಿಟಲ್)

ಸೀಸಪದ್ಯದೊಡನೆ ಸೇರಿಸಿ ಹಾಡುವ ಗೀತಿ– ಆಟವೆಲದಿ, ತೇಟಗೀತಿ ಎಂದು ಎರಡು ವಿಧ.

ಇನ ಗ । ಣತ್ರ । ಯಂಬು । ನಿಂದ್ರ ದ್ವ । ಯಂಬುನು
ಹಂಸ । ಪಂಚ । ಕಂಬು । ನಾಟ । ವೆಲದಿ;
ಸೂರ್ಯುಡೊಕನಿಮೀದ ಸುರರಾಜಲಿದ್ದಱು

---

[೨] ವಿಷ್ಣು ರುದ್ರ ಗಣಗಳಲ್ಲಿ ೬ ರಿಂದ ೮ ಮಾತ್ರೆಗಳವರೆಗೂ ಅವಕಾಶವಿದೆ.

ದಿನಕರದ್ವಯಂಬು ತೇಟಗೀತಿ.

ಆಟವೆಲದಿ : ಮೂರು ಬ್ರಹ್ಮ + ಎರಡು ವಿಷ್ಣು ॥ + ಐದು ಬ್ರಹ್ಮ- ಎರಡು ಸಲ.

ತೇಟಗೀತಿ : ಒಂದು ಬ್ರಹ್ಮ, ಎರಡು ವಿಷ್ಣು, ಎರಡು ಬ್ರಹ್ಮ- ನಾಲ್ಕು ಸಲ.

ತ್ರಿಪುಡೆ : ೩. ೪. ೩. ೪. । ೩. ೪. ೩. ೨.

ಮಗನೆ । ನೀನಿಂ । ತಳಿಯೆ । ಸೈರಿಪೆ । ನೆಂತು । ಪೇಳಯ್ । ಶಂಕ । ರಾ.

ಅಥವಾ ೩. ೪. । ೩. ೪. ಮೂರು ಸಲ + ೩.೩

ಭೂಮಿ । ಭಾರವ । ನಿಳುಹ । ಲೋಸುಗ ।
ರಾಮ । ಜನಿಸುವ । ನಿನ್ನ । ಗರ್ಭದಿ
ಆ ಮ । ಹಾ ಶ್ರೀ । ಲಕ್ಷ್ಮಿ । ಜನಕನ । -ಪುತ್ರಿ । ಯಹಳು ॥

ಗೋವಿನ ಕಥೆಯ ಮಟ್ಟು

೩. ೪. ೩. ೪. ಮೂರು ಸಲ + ೩. ೪. ೩. ೨.(ಬ್ರಹ್ಮ, ವಿಷ್ಣು)

ಧರಣಿ । ಮಂಡಲ । ಮಧ್ಯ । ದೊಳಗೆ ।
ಮೆರೆಯು । ತಿಹ ಕ । ರ್ಣಾಟ । ದೇಶದಿ ।
ಇರುವ । ಕಾಳಿಂಗ । ನೆಂಬ । ಗೊಲ್ಲನ ।
ಪರಿಯ । ನಾನೆಂತು । ಪೇಳ್ವೆನು ॥
ಸತ್ಯ । ವೇ ನಮ್ಮ । ತಾಯಿ । ತಂದೆ ।
ಸತ್ಯ । ವೇ ನಮ್ಮ । ಬಂಧು । ಬಳಗ ।
ಸತ್ಯ । ವಾಕ್ಯಕೆ । ತಪ್ಪಿ । ನಡೆದರೆ ।
ಮೆಚ್ಚ । ನಾ ಜಗ । ದೀಶ । ನು.

ಸಾಂಗತ್ಯ : ಎರಡೇ ಪಾದಗಳು :

ರತಿಗಿಂತ । ಚೆಲುವು ಭಾ । ರತಿಗಿಂತ । ಸಂಪನ್ನೆ ।
ಪ್ರತಿ ಲಕ್ಷ್ಮಿ । ಸೊಬಗು ರೂ । ಪಿವಳು.

ತ್ಯಾಗಮಾನ

ಮಂಡಾಲ । ದೊಳು ಚೆಲ್ವೆ । ಕೊರವಂ- ಜೀ- ನಿನ್ನ-
ಗಂಡನಿ । ನ್ನೆಂತೋನೆ । ಕೊರವಂ- ಜೀ ॥
ಮುನ್ನ ಮಾ । ಡಿದ ಕರ್ಮ । ಎಲೆ ನಾ- ರೀ- ನಮ್ಮ-
ಬೆನ್ನಟ್ಟಿ । ಬಿಡದಲ್ಲೆ । ಎಲೆ ನಾ- ರೀ ॥.

ಯಾಲಪದ : ರುದ್ರ ಗಣಗಳು

ನನ್ನ ಮಾತು ಸಟೆ । ಯೆನ್ನಬೇಡಾ ।
ನಿನ್ನ ಗರ್ಭಾ । ದಲ್ಲಿ ಕೇಳು ।
ಚೆಲ್ವ ರಾಮನು । ಜನಿಸಿ ಬರುವಾ- ನಂ-
ಕೌಸಲ್ಯಾ ದೇ- ವೀ-
ಚೆನ್ನಾಗಿ ಕೇ । ಳಮ್ಮ ಕಣಿ । ಯಾ ॥
(೭.೭ । ೭.೭ । ೭.೭- ೨ ।೭.೨ । ೭.೭.೨)

ಪಾರ್ಥಜೋಗಿಹಾಡು

ಮಣಿಪುರಕೆ । ಬಂದವಾ ।-ಗಾ- ಗಿಣಿಗಳೂ ।
ದಣಿದು ಮಲ । ಗಿದವು ಬೇ । ಗಾ.
ದಿನಮಣಿಯು । ಉದಿಸಿದಾ ॥ ಅನುವ ಕಾ । ಣುತಲಾಗ ।
ವನದಿ ಸುಖಿ । ಸಿದವು ಬೇ । -ಗಾ- । ಫಲಸವಿದು ।
ವನದಿ ಸುಖಿ । ಸಿದವು ಬೇ । ಗಾ.
(೫.೫.೨- ೫ । ೫.೫.೨ ॥ ೫.೫; ೫.೫. । ೫.೫.೨ - ೫ । ೫.೫.೨)

ನುಲಿಯ ಚಂದಯ್ಯನ ಶಾರದ

ಕಲ್ಯಾಣ । ನಗರದೊಳ । ಗಲ್ಲಿ ಜನ । ರಿಗೆ ತೋರೆ । . . . ೪ * ೫
ಒಲ್ಲೆವೆ । ನ್ನುತ ಕೊಡಲು । ತಿರುಗಿ– ನುಲಿಯ . . . ೫.೫.೩– ೩
ನಲ್ಲಲ್ಲಿ । ತೋರಿ ಮನ । ಮರುಗಿ ।– ಬಸವ . . . ೫.೫.೩– ೩
ನಲ್ಲಿಗೈ । ತಂದು ಬಲು । ಸೊರಗಿ, . . . ೫.೫.೩
ನಿಲ್ಲದಲೆ । ನುಲಿಯ ಕೊಂ । ಡಿರೆಯೆಂದು । ಮುಂದಿಡಲು . . . ೪ * ೫
ನಿಲ್ಲದಾ । ರೆಂದ ಮನ । ಮರುಗಿ. . . . ೫.೫.೩
ಈ ತ್ಯಾಗಮಾನಗಳ ಧಾಟಿ ಬಲು ಮುದ್ದು.

ಗೀತ ಗೋಪಾಲ

ಆ.ರ.ಯ್ಯೆ । ಮು.ಗ್ಗಿ.ರಿ । ವಂ.ಧ.ನ । ತ.ಪ್ಪೋ ।
ದಾರಿ ದೋ । ಱುವ ದಂಡ । ಧಾರನ । ತಪ್ಪೋ ।
ಮೇರೆಯ । ಱಿಯದೆನ್ನ । ಮೇಲಣ । ತಪ್ಪೋ ।
ನಾ. ರಾ । ಯಣ. ನಿ. ನ್ನ । ನಟ.ಣೆ.ಯ ತ.ಪ್ಪೋ ॥
ಓಜೆಗುಂ । ದುವ ವೀಣೆ । ಯುಲುಹಿನ । ತಪ್ಪೋ ।
ಬಾಜಿಸು । ವನ ಕೈಯ । ಪವಣಿನ । ತಪ್ಪೋ ।
ರಾಜಶ್ರೀ । ಚಿಕದೇವ । ರಾಯನಿ । ಗೊಲಿದ ಶ್ರೀ ।
ರಾಜಗೋ । ಪಾಲ ನಿ । ರಾಕರಿ । ಸದೆ ಪೇಳು ॥

ಇಲ್ಲಿ ಅಂಶಗಳನ್ನು ಗಮನಿಸಿ. ಮತ್ತು ತೆಲುಗಿನಿಂದ ಬಂದ ವಡಿಯ ಪ್ರಯೋಗವನ್ನು ನೋಡಿ. ಪಾದದ ಮೊದಲಕ್ಷರವೂ ಪಾದದ ಮಧ್ಯದ ಯತಿಯ ಮುಂದಿನ ಮೊದಲಕ್ಷರವೂ, ಒಂದೇ ಆಗಲಿ ಸಜಾತಿಯಾದುದಾಗಲಿ ಇರುವುದು ವಡಿ. (ಆ– ಅ, ದಾ– ಧಾ, ಮೇ– ಮೇ, ನಾ– ನ; ಓ– ಉ; ಬಾ– ಪ, ರಾ– ರಾ, ರಾ– ರಾ.)

ಅಱಿಯರು ಗ । ಡಱಿತೆವೆಂ । ಬವರು– ನಿನ್ನ
ನಱಿವರು ಗ । ಡಱಿಯೆವೆಂ । ಬವರು– ಈ
ಯಱಿತಱಿಯ । ದಿರ್ಪ ಪೊಸ । ತೆಱನ ನೀ । ನೇ ಬಲ್ಲೆ ॥

ಎಲ್ಲರೊಳ । ಗಿರ್ಪ ಗಡ । ನೀನು– ನಿನ್ನೊ
ಳೆಲ್ಲ ಜಗ । ಮಿರ್ಪುದು ಗ । ಡೇಮ– ಇಂ
ತೆಲ್ಲರೊಳು । ನೀ ನಿನ್ನೊ । ಳೆಲ್ಲವಿದ । ನೀ ಬಲ್ಲೆ ॥

೬. ಉಪಸಂಹಾರ : ತಮಿಳು ಛಂದಸ್ಸು

ಸಂಸ್ಕೃತದ ವೃತ್ತ ಕಂದಗಳನ್ನು ಬಿಟ್ಟು ಕನ್ನಡದ ಹಾಡು ಮಟ್ಟುಗಳ ದಾರಿಯನ್ನು ಹಿಡಿದು ಬಲುದೂರ ಬಂದೆವು. ಅಂಶ, ಗಣ, ಮಾತ್ರೆ, ಪಾದ, ಪ್ರಾಸ, ವಡಿ; ಪದ್ಯದ ಕಟ್ಟು, ೨ ಪಾದ, ೩, ೪, ೬; ತ್ರಿಪದಿ, ಸಾಂಗತ್ಯ, ಷಟ್ಪದಿ, ರಗಳೆ, ಹಾಡುಗಳು, ಸಾಹಿತ್ಯಕ್ಕಿನ್ನೂ ಏರದ ಜನಪದ ಲಾವಣಿಗಳು– ತಮಿಳು, ತೆಲುಗು, ಇವುಗಳ ಗಣಗಳ ಹೋಲಿಕೆ– ದ್ರಾವಿಡ ಛಂದಸ್ಸಿನ ರಹಸ್ಯ, ಲಕ್ಷಣ, ಬೆಳವಳಿಗೆ– ಇವುಗಳನ್ನು ಪ್ರಕೃತಸ್ಥಿತಿಯಲ್ಲಿ ನಮ್ಮ ತಿಳಿವಳಿಕೆ ಇರುವಮಟ್ಟಿಗೆ ವಿಮರ್ಶಿಸಿದ್ದಾಯಿತು. ಛಂದಶಾಸ್ತ್ರಕಾರರು ಗಣಿತಪ್ರಕ್ರಿಯೆಯಿಂದ ಹುಟ್ಟಿಸಿದ ಕೌತೂಹಲಗಳನ್ನೆಲ್ಲಾ ಬದಿಗಿಟ್ಟು, ಕೇವಲ ಕವಿಗಳ ಮತ್ತು ಜನಗಳ ನಾಲಗೆಯಲ್ಲಿ ನಲಿಯುವ ಪದ್ಯಗಳನ್ನೇ ಹೆಚ್ಚಾಗಿ ವಿವರಿಸಿದ್ದಾಯಿತು. ಹೊಸ ಕಾಲದ ಹೊಸ ಕೆಲಸಗಳಿಗೆ ತಕ್ಕ ಸಾಧನದ ಸೃಷ್ಟಿಯ ವಿಚಾರವಾಯಿತು. ಇನ್ನು ತಮಿಳು ಛಂದಸ್ಸಿನಿಂದ ಕೆಲವು ಉದಾಹರಣೆಗಳನ್ನು ಕೊಟ್ಟು ಈ ಕನ್ನಡ ಛಂದಸ್ಸಿನ ಚರಿತ್ರೆಯನ್ನು ಮುಗಿಸಬಹುದು; ಏಕೆಂದರೆ, ಪುರಾತನ ತಮಿಳು ಛಂದಸ್ಸಿನಲ್ಲಿ ಕನ್ನಡ ಛಂದಸ್ಸಿನ ಹಿಂದಿನ ಹೆಜ್ಜೆ ಕಾಣಬರುವುದು.

ಮೊದಲು ಅಶೈ = ಅಂಶ, ಶೀರ್ = ಗಣ, ಇವುಗಳ ಸ್ಥೂಲಜ್ಞಾನವಾದರೂ ನಮಗೆ ಬೇಕು.

ಅಶೈ : ನೇರಶೈ : ಒಂದು ಹ್ರಸ್ವ ಅಥವಾ ದೀರ್ಘ, ತಾನೇ ಆಗಲಿ ವ್ಯಂಜನ ಸೇರಿಯಾಗಲಿ ಬರುವುದು : ಅ, ಟೆ, ಚೊಲ್, ವಾನ್. ಒಂದು ಹ್ರಸ್ವ ಗಣದ ಮೊದಲು ಅಂಶವಾಗಿ ಬರುವುದಿಲ್ಲ.

ನಿರೈಯಶೈ : ಎರಡು ಹ್ರಸ್ವ, ಅಥವಾ ಹ್ರಸ್ವ ದೀರ್ಘ, ತಾನೇ ಆಗಲಿ ವ್ಯಂಜನ ಸೇರಿಯಾಗಲಿ ಬರುವುದು : ಅಣಿ, ನಿಲಾ, ಕಲಮ್, ಪಡಾಮ್.

ಮಾತ್ರಾದೃಷ್ಟಿಯಿಂದ, ನೇರಶೈ ∪, –. ನಿರೈಯಶೈ ∪ ∪, ∪ –. ಕನ್ನಡದಲ್ಲಿ ∪ – ಸಾಮಾನ್ಯವಾಗಿ ಇಲ್ಲವೆಂದು ಕಂಡು, ಇರಕೂಡದೆಂದು ತಿಳಿದುಕೊಂಡಿದ್ದೇವೆ. ತಮಿಳಿನಲ್ಲಿ ಇದು ಸರ್ವೇಸಾಧಾರಣ.

ಶೀರ್ : ನೇರಶೈ, ನಿರೈಯಶೈಗಳು ಈರಶೈ, ಮೂರಶೈ, ನಾಲ್ಕಶೈಗಳಾಗಿ ಸೇರಿ ಗಣಗಳಾಗುತ್ತವೆ. ಇಲ್ಲಿ ಮುಖ್ಯವಾಗಿ ಈರಶೈ ಮೂರಶೈಗಳನ್ನು ಪರಿಶೀಲಿಸೋಣ. ಇವು ಬ್ರಹ್ಮ, ವಿಷ್ಣು, ರುದ್ರಗಣಗಳನ್ನು ಹೋಲುತ್ತವೆ.

ಈರಶೈ :

ನೇರ್ ನೇರ್ . . . ತೇ. ಮಾ– ಬ್ರಹ್ಮ ೧.೩
ನಿರೈ ನೇರ್ . . . ಪುಳಿ.ಮಾ– ಬ್ರಹ್ಮ ೨,೪
ನೇರ್ ನಿರೈ . . . ಕೂ. ವಿಳಂ –ವಿಷ್ಣು ೫, ೬ (ತಮಿಳಿನಲ್ಲಿ ಎರಡಂಶ;
ನಿರೈ ನಿರೈ . . . ಕರು. ವಿಳಂ– ವಿಷ್ಣು ೭, ೮. ಕನ್ನಡದಲ್ಲಿ ಮೂರಂಶ.)

ಮೂರಶೈ :

ನೇರ್ ನೇರ್ ನೇರ್ . . . ತೇ. ಮಾಂ. ಗಾಯ್ –ವಿಷ್ಣು ೧, ೨.
ನಿರೈ ನೇರ್ ನೇರ್ . . . ಪುಳಿ. ಮಾಂ. ಗಾಯ್– ವಿಷ್ಣು ೩, ೪.
ನೇರ್ ನಿರೈ ನೇರ್ . . . ಕೂ.ವಿಳಂ.ಗಾಯ್– ರುದ್ರ (ಕನ್ನಡದಲ್ಲಿ ನಾಲ್ಕಂಶ).
ನಿರೈ ನಿರೈ ನೇರ್ . . . ಕರು. ವಿಳಂ. ಗಾಯ್– ರುದ್ರ.
ನೇರ್ ನೇರ್ ನಿರೈ . . . ತೇ. ಮಾಂ.ಗನಿ– ರುದ್ರ.
ನಿರೈ ನೇರ್ ನಿರೈ . . . ಪುಳಿ.ಮಾಂ.ಗನಿ– ರುದ್ರ.
ನೇರ್ ನಿರೈ ನಿರೈ . . . ಕೂ. ವಿಳಂ. ಗನಿ.
ನಿರೈ ನಿರೈ ನಿರೈ . . . ಕರು. ವಿಳಂ. ಗನಿ.

ನಾಲ್ಕಶೈ :

ನೇರ್ ನೇರ್ ನೇರ್ ನೇರ್– ತೇಮಾಂದಣ್‌ಪೂ

ರುದ್ರ ೧,೩.

ನಿರೈ ನೇರ್ ನೇರ್ ನೇರ್– ಪುಳಿಮಾಂದಣ್‌ಪೂ

. . . ಇನ್ನೂ ೧೪ ಗಣಗಳು.

ತಮಿಳಿನಲ್ಲಿ ನಾಲ್ಕು ಈರಶೈಗಳೂ, ಎಂಟು ಮೂರಶೈಗಳೂ, ಹದಿನಾರು ನಾಲ್ಕಶೈಗಳೂ ಕನ್ನಡದ ನಾಲ್ಕು ಬ್ರಹ್ಮ, ಎಂಟು ವಿಷ್ಣು, ಹದಿನಾರು ರುದ್ರಗಳಂತೆ ಇವೆ. ಆದರೆ ∪ – ಈ ಆಶೈ ಬರುವುದರಿಂದಲೂ, ∪ ∪ ಈ ಎರಡು ಹ್ರಸ್ವ ಎರಡು ಮೂರು ನಾಲ್ಕನೆಯ ಅಂಶಗಳಲ್ಲಿಯೂ ಬದಲಾಯಿಸಿ ಬರುವುದರಿಂದಲೂ– ಅಂಶ ವಿಭಜನೆ ಎರಡು ಭಾಷೆಗಳಲ್ಲಿ ಒಂದೇ ಆಗುವುದಿಲ್ಲ. ವಿಷ್ಣು ಈರಶೈ, ಮೂರಶೈಗಳಲ್ಲಿಯೂ ರುದ್ರ ಮೂರಕ್ಕೆ ನಾಲ್ಕಶೈಗಳಲ್ಲಿಯೂ ಅಡಕವಾಗುತ್ತದೆ. ಈ ಎರಡು ಅಂಶಸ್ವರೂಪ ವಿವರಣೆಗಳನ್ನೂ ಪರಾಮರ್ಶಿಸಿ ದ್ರಾವಿಡಗಣದ ಆದಿಸ್ವರೂಪವನ್ನು ಕಂಡುಹಿಡಿಯಬೇಕು.

ಇಷ್ಟು ಸೂಕ್ಷ್ಮಕ್ಕೆ ಹೋಗದೆ, ಒಟ್ಟಿನ ಮೇಲೆ ಕೆಲವು ಪ್ರಸಿದ್ಧವಾದ ಪುರಾತನ ತಮಿಳು ವೃತ್ತಗಳನ್ನು ಕನ್ನಡ ಗಣಗಳಿಂದ ಸ್ಥೂಲವಾಗಿ ಅಳೆದು ತೋರಿಸಿದರೆ ಇವೆರಡಕ್ಕೂ ಇರುವ ಸಂಬಂಧ ಮನಸ್ಸಿಗೆ ದೃಢವಾಗುತ್ತದೆ.

(i) ಕುಱಳ್‌ವೆಣ್ಬಾ:

ಅಗ.ರ। ಮು.ದ.ಲ.। ವೆಱು.ತ್ತೆ.ಲ್ಲಾ । ಮಾ. ದಿ.. ಬ್ರ । ಬ್ರ । ವಿ । ಬ್ರ ।
ಭಗ.ವನ್ । ಮುದಱ್ಱೇ ।ಯಲ.ಗು .. ಬ್ರ । ಬ್ರ । ನಿರೈ.
ಅಱ. ನೆನ । ಪ್ಪಟ್ಟದೇ । ಇಲ್. ವಾ. ೞ್ಕ್ಕೈ । ಯ. ತ್ತುಂ
ಪಿಱನ್. ಪಟಿ. ಪ್ಪ । ದಿ.ಲ್ಲಾ. ಯಿ. । ನನ್ಱು .. .. ವಿ.ವಿ.ನೇರ್.
ಮ. ಕ್ಕಳ್ ಮೆಯ್ । ತೀಣ್ಡ । ಲುಡ. ೞ್ಕಿನ್, ಬಂ. ಬಂ । ಮ. ಱ್ಱವರ್
ಚೊ. ೞ್ಕೇ, ಟ್ಟ । ಲಿ. ನ್ಬಂ । ಚೆವಿ. ಕ್ಕು

(ii) ನೇರಿಶೈವಣ್ಣಾ :

ಕಡ.ಲೇ । ಯನ್ನೈ.ಯಂ. ಯಾಂ. । ಕ.ಲ್ವಿಯಾ । ಲೆನ್ನು ೦ । . . . ಬ್ರ. ವಿ. ಬ್ರ. ಬ್ರ.
ಅಡ.ಲೇ । ಊನ್ನೈ. ಯ. ಚೆರುಕ್ಕಾಟ್ಟಿ ।– ವಿಡಲೇ ।
ಮುನಿ. ಕ್ಕರ. ಶು । ಕೈ. ಯಾನ್ । ಮುಗಂ . ದು । ಮುಟಿಂ. ಗುಂ ।
ಪನಿ. ಕ್ಕಡ. ಲು । ಮು.ಣ್ಣ । ಪ್ಪಡುಂ
(ಇಲ್ಲಿ ಎರಡನೆಯ ಪಂಕ್ತಿಯ ಕಡೆಯಲ್ಲಿ ಸೇರಿರುವ ಗಣ. ತ್ರಿಪದಿಯ ಎರಡನೆಯ ಪಂಕ್ತಿಯ ಕಡೆಯಲ್ಲಿ ಸೇರುವ ಗಣದಂತೆ.)

ಒರು. ನಾಳ್ । ಉಣ .ವೈ । ಒಟಿ. ಯೆ. ನಾ್ಬಲ್ । ಒಟಿ. ಯಾಯ್ ।
ಇರು. ನಾ. ಳೈ । ಕ್ಕೇ .ಲೆ, ನಾಲ್ । ಏಲಾಯ್ ।– ಒರು. ನಾ. ಳುಂ
ಎ.ನ್ನೋ । ವಜಿ. ಯಾಯ್ । ಇಡುಂ. ಬೈ. ಕೂರ್ । ಎನ್. ವಯಿ. ಱೀ ।
ಉ.ನ್ನೋ. ಡು । ವಾ. ಟ್ದಿ । ಲರಿದು

(iii) ಅಗವಾಲ್ ಪಾ (= ಆಶಿರಿಯಪ್ಪಾ):

ತಿ.ಲ್ಲೈ । ಮೂ,ದೂ ।ರಾ.ಡಿಯ। ತಿರು. ವಡಿ । (೪. ಬ್ರ)
ಪ. ಲ್ಲು. ಯಿ । ರೆ. ಲ್ಲಾಂ । ಪಯಿ. ನನ । ನಾ. ಗಿ. ॥
ಮಾ.ಶಱು । ಪೊ. ನ್ನೇ । ವಲಂ. ಬುರಿ । ಮು. ತ್ತೇ ।
ಕಾ. ಶಱು । ವಿರೈ. ಯೇ । ಕರುಂ. ಬೇ । ತೇ. ನೇ ।
ಅರುಂ. ಬೆಱಲ್ । ಪಾ. ವಾಯ್ । ಆ. ರುಯಿರ್ । ಮರುಂ.ದೇ ।
ಪೆರುಂ. ಗುಡಿ । ವಾ. ಣಿಗನ್ । ಪೆರು. ಮಡ । ಮಗ. ಳೇ ॥
ಅವರೋ । ವಾರಾರ್ । ತಾನ್ ವನ್ । ದನ್ಬೋ ।
ಅಂಜಿನ್ನೈ । ಪಾದಿರಿ । ಯಲರ್ನ್‌ದೆನ ।
ಚೆಂಗಣಿ । ರುಂಕುಯಿ । ಲಱೈಯುಂ ।ಪೊಟುದೇ ॥

(iv) ಆಶಿರಿಯ ವಿರುತ್ತಂ :

ಮುತ್ತಣಿ । ಕೊಂಗೈಗಳ್ । ಆಡ ಆಡ
ಮೊಯ್ ಕುಱಲ್ । ವಣ್ಡಿನಂ । ಆಡ ಆಡ ।
ಚಿತ್ತಂ । ಶಿವನೊಡುಂ । ಆಡ ಆಡ ।
ಶೆಂಗಯಲ್ । ಕಣ್ಬನಿ । ಆಡ ಆಡ ।
ಪಿತ್ತೆಂ । ಬಿರಾನೊಡುಂ । ಆಡ ಆಡ ।
ಪಿಱವಿ । ಪಿಱರೊಡುಂ । ಆಡ ಆಡ ।
ಅತ್ತನ್ । ಕರುಣ್ಣೆಯೊ । ಡಾಡ ಆಡ ।
ಆಡಪ್ಪೊನ್ । ಶುಣ್ಣಂ । ಇಡಿತ್ತುನಾಮೇ ॥
ಉಡೈಯಾಳ್ ಉನ್‌ತನ್ । ನಡುವಿರುಕ್ಕುಂ
ಉಡೈಯಾಳ್ । ನಡುವುಳ್ । ನೀಯಿರುತ್ತಿ ।
ಅಡಿಯೇನ್ ನಡುವುಳ್ । ಇರುವೀರುಂ
ಇರುಪ್ಪ । ದಾನಾ । ಲಡಿಯೇನ್ ಉನ್ . . . (೨ಪಾದ)
ಇಮ್ಮೈಯಿಲೇ । ಪುವಿಯುಳ್ಳೋರ್ । ಯಾರುಂ । ಕಾಣ ।
ಏಟುಲಗುಂ । ಪೋಜಿಶೈಪ್ಪ । ವೆಮ್ಮೈ । ಯಾಳುಂ । (೧ ಪಾದ)

(v) ಕಲಿಪ್ಪಾ :

ನಾ.ಯಿಱು । ಕಡೈ.ಪ್ಪ.ಟ್ಟ । ನ.ಮ್ಮೈ.ಯುಮೋರ್ । ಪೊರುಳ್. ಪಡು.ತ್ತು ।

ತಾ.ಯಿಙ್ । ಪೆರಿ.ದುಂ । ದಯಾ.ವುಡೈ.ಯ । ತಂ.ಬೆರು.ಮಾನ್ ।
ಮಾ.ಯ । ಪ್ಪಿಙ.ಪ್ಪಙು. । ತ್ತಾ.ಣ್ಣಾನ್.ಎನ್ । ವಲ್. ವಿನೈ.ಯಿನ್ ।
ವಾ.ಯಿಙ್ । ಪೊಡಿ.ಯ.ಟ್ಟಿ । ಪೂ.ವ.ಲ್ಲಿ । ಕೊ.ಯ್ಯಾ.ಮೋ ॥
ಪೂಶುವದುಂ । ವೆಣ್ಣೀಙು । ಪೂಣ್ಬದುವುಂ । ಪೊಂಗರವಂ ।
ಪೇಶುವದುಂ । ತಿರುವಾಯಾಲ್ । ಮಙ್ಞೆಪೋಲುಂ । ಕಾಣೇಡೀ ।
ಪೂಶುವದುಂ । ಪೇಶುವದುಂ । ಪೂಣ್ಬದುವುಂ । ಕೊಂಡೆನ್ನೈ ।
ಈಶನವನ್ । ಎವ್ವುಯಿರ್ಕ್ಕುಂ । ಇಯಲ್ಬಾನಾನ್ । ಚಾಟಿಲೋ ॥
ಕಡೈಯವ । ನೇನ್ನೈ । ಕರುಣೈಯಿ । ನಾಲ್ ಕಲಂ । ದಾಣ್ಡುಕೊಂಡ ।
ವಿಡೈಯವ । ನೇ ವಿ । ಟ್ಟಿಡುದಿ ಕಂ । ಡಾಯ್ ವಿಙಲ್ । ವೇಂಗೈಯಿನ್ ತೋಳ್ ।
ಉಡೈಯವ । ನೇ ಮನ್ನು । ಮುತ್ತರ । ಕೋಶಮಂ । ಗೈಕ್ಕರಶೇ ।
ಜಡೈಯವ । ನೇ ತಳರ್ನ್ । ದೇನೆಂಬಿ । ರಾನ್ ಎನ್ನೈ । ತಾಂಗಿಕ್ಕೊಳ್ಳೇ ।

(vi) ಸಾಂಗತ್ಯದಂತಿರುವ ಪದ್ಯ :
ಮುರಜದಿರ್ನ್ । ದೆಟುತರು । ಮುದುಕುನ್ಱು । ಮೇವಿಯ ।
ಪರಜಮರ್ । ಪಡೈಯುಡೈ । ಯೀರೇ
ಪರಜಮರ್ । ಪಡೈಯುಡೈ । ಯೀರುಮೈ । ಪುರವುವಾರ್ ।
ಅರಶರ್ಗ । ಳುಲಗಿಲಾ । ವಾರೇ

(vii) ಸರಳರಗಳೆಯಂತೆ ಓಡುವ ಸಾಲುಗಳು :

ಯಾದು । ಮೂರೇ । ಯಾವರುಂ । ಕೇಳಿರ್ ।
ತೀದು । ನನ್ಱುಂ । ಪಿಙರ್ತರ । ವಾರಾ ।
ನೋದಲುಂ । ತಣಿದಲು । ಮವಙ್ಹೊಱೇ । ರನ್ನ ।
ಚಾದಲುಂ । ಪುದುವ । ದನ್ಱೇ । ವಾಟ್ದಿ ।
ಲಿನಿದೆನ । ಮಗಿಟುನ್ದನ್ಱು । ಮಿಲಮೇ । ಮುನಿವಿ ।
ನಿನ್ನಾ । ದೆನ್ಱಲು । ಮಿಲಮೇ । ಮಿನ್ನೊಡು ।
ವಾನಂ । ತಣ್ಡುಳಿ । ತಲೈ ಇ । ಯಾನಾದು ।
ಕಲ್‌ಪೊರು । ದಿರಂಗು । ಮಲ್ಲಙ್ । ಪೇರ್‌ಯಾಱು ।
ನೀರ್‌ವಟಿ । ಪ್ಪಡೂಉಂ । ಪುಣೈಪೋ । ಲಾರುಯಿರ್ ।
ಮುಙ್ಞೆಮಟಿ । ಪ್ಪಡೂಉ । ಮೆನ್ಬದು । ತಿಙವೋರ್ ।
ಕಾಟ್ಚಿಯಿ । ಱ್ಱೆಳಿಂದನ । ಮಾಗಲಿನ್ । ಮಾಟ್ಚಿಯಿಙ್ ।
ಪೆರಿಯೋರೈ । ವಿಯತ್ತಲು । ಮಿಲಮೇ ।
ಶಿರಿಯೋರೈ । ಯಿಗಟ್ದಿ । ಲದನಿನು । ಮಿಲಮೇ

(vii) ಉತ್ಸಾಹರಗಳೆ :
ಅಕ್ಕರಂಗಳಕ್ಕರಂಗಳೆಙ್ಱುಮಾವದೆನ್ನೊಲೋ
ಇಕ್ಕುಙುಂಬೈ ನೀಕ್ಕಿಯೆನ್ನೈ ಯೀಶನಾಕ್ಕವಲ್ಲೈಯೇಲ್
ಚಕ್ಕರಂಗೊಳ್ ಕೈಯನೇ ಚಡಂಗರ್ ವಾಯಡಂಗಿಡ
ಉಟ್ಕಿಡಂದ ವಣ್ಣಮೆ ಪುಙಂಬೊಶಿಂದು ಕಾಟ್ಟಿಡೇ

ಈ ಉದಾಹರಣೆಗಳಿಂದ ಹಳಗನ್ನಡಕ್ಕೂ ತಮಿಳಿಗೂ ಇರುವ ಹತ್ತಿರ ಸಂಬಂಧವನ್ನೂ, ಸಂಘದ ತಮಿಳಿನ ಶುದ್ಧಶೈಲಿಯನ್ನೂ, ಕನ್ನಡ ಛಂದಸ್ಸಿನ ವಿಮರ್ಶೆಯಲ್ಲಿ ಮತ್ತು ವೃದ್ಧಿಯಲ್ಲಿ ತಮಿಳಿನ ಬೆಳಕು ಬೀಳಬೇಕೆನ್ನುವುದನ್ನೂ

ಕಾಣಬಹುದು. ಇಂಗ್ಲಿಷ್ ಛಂದಸ್ಸಿನ ಪ್ರಭಾವವನ್ನೂ ಸಹಾಯವನ್ನೂ ಬೇರೆಕಡೆ ವಿಮರ್ಶಿಸಲಾಗುತ್ತದೆ. ಕನ್ನಡದ ಛಂದಸ್ಸಿನ ತಾಯಿಬೇರಿನ ಮೇಲೆ ಹೊಸ ಸೌಂದರ್ಯವನ್ನು ಕಸಿಮಾಡಿ ಕಟ್ಟಿ ಬೆಳಸುವವರು ಈ ವಿಮರ್ಶೆಯನ್ನು ಮುಂದುವರಿಸಬೇಕು.